بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 04

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 20–21

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18–25 ಮೇ 2023, 18–25 ಹಿಜ್ರತ್ 1402 ಹಿಜರಿ ಶಮ್ಸಿ,
18–25 ಶವ್ವಾಲ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ۔

## ಅಲ್ಲಾಹನ ಉಪದೇಶ

وَعَدَ اللّٰہُ الَّذِیْنَ اٰمَنُوْا مِنْکُمْ وَعَمِلُوا الصّٰلِحٰتِ لَیَسْتَخْلِفَنَّھُمْ فِی الْاَرْضِ کَمَا اسْتَخْلَفَ الَّذِیْنَ مِنْ قَبْلِھِمْ

(ಅನ್ನೂರ್: 56)

ಅಂದರೆ: ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ.

# ಖಿಲಾಫತ್ ವಿಶೇಶ ಸಂಚಿಕೆ

## ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಆದುದರಿಂದ ಪ್ರಿಯರೇ, ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಹೀಗೆ ಇದೆ: ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ. ಅಲ್ಲಾಹನು ತನ್ನ ಪುರತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ" ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದನ ಪ್ರಕಾರ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದನ ನನ್ನ ಬಗ್ಗೆ ಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ." ನಿನ್ನ ಅನುಯಾಯಿಗಳ ಈ ಜಮಾತಿಗೆ ಪುನರತ್ಥಾನದ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು." ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು. ಅವನು ಮಾಡಿದುದನೆಲ್ಲವನ್ನೂ ನಿಮಗೆ ತೋರಿಸುವೇನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲಾ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು. ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಮೂರ್ತ ರೂಪವಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕಾರದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಅದರ ಫಲ ಸ್ವರೂಪವಾಗಿ ದ್ವಿತೀಯ ದಿವ್ಯಶಕ್ತಿ ಆಕಾಶದಿಂದ ಅವತೀರ್ಣವಾಗಿ ನಿಮ್ಮ ದೇವನು ಇಷ್ಟು ಶಕ್ತಿಶಾಲಿಯಾದ ದೇವನೆಂದು ತೋರಿಸಿ ಕೊಡುವಂತಾಗಲಿ. ನಿಮ್ಮ ಮರಣವು ಸಮೀಪವಾಗಿದೆ ಎಂದು ನೀವು ಗ್ರಹಿಸಿರಿ. ಆ ಘಳಿಗೆ ಯಾವಾಗ ಎಂದು ನಿಮಗೆ ತಿಳಿಯದು.

ಶುದ್ಧ ಹೃದಯವನ್ನು ಹೊಂದಿದ ಮಹಾನುಭಾವರು ನನ್ನ ಮರಣದ ನಂತರ ನನ್ನ ಹೆಸರಿನಲ್ಲಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲಿ. ಲೋಕದ ವಿವಿಧ ಭಾಗದಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿಯನ್ನು ಹೊಂದಿರುವವರನ್ನು– ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ– ಏಕದೇವ ವಿಶ್ವಾಸದ(ಎಂದರೆ ತೌಹೀದ್)ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನು ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ. ಅಲ್ಲಾಹನಿಂದ ಪರಿಶುದ್ಧ ಆತ್ಮವನ್ನು ಪಡೆದುಕೊಂಡು ಒಬ್ಬ ವ್ಯಕ್ತಿ ಎದ್ದು ನಿಲ್ಲುವ ತನಕ ನೀವೆಲ್ಲರೂ ನನ್ನ ಅನಂತರ ಒಟ್ಟಿಗೆ ಸೇರಿಕೊಂಡು ಕೆಲಸ ಮಾಡಿರಿ. (ಅಲ್ ವಸಿಯ್ಯತ್)

**ಕನ್ನಡ ವಾರಪತ್ರಿಕೆ ಬದರ್ "ಖಿಲಾಫತ್ ವಿಶೇಶ ಸಂಚಿಕೆ"**

## ವಿಷಯ ಸೂಚಿಕೆ


| | ವಿಷಯ ಸೂಚಿಕೆ | ಪುಟ |
|---|---|---|
| * | ಅಹ್ಮದಿಯಾ ಜಮಾಅತಿನ ಬೈಅತ್ ಶರತ್ತುಗಳು | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ)ರವರ ಖುತ್‌ಬ ಜುಮುಅ | 3 |
| * | ಖಿಲಾಫತ್ ಸುರಕ್ಷಿತ ಆಶ್ರಯ ಸ್ಥಾನ | 10 |
| * | ಹಝ್‌ರತ್ ಅಮೀರುಲ್-ಮುಮಿನೀನ್ ಖಲೀಫತುಲ್ ಮಾಸೀಹ್ ಅಲ್‌ಖಾಮಿಸ್(ಅತಬಿಅ) ಅವರ ದುಆಗಳ ಸ್ವೀಕಾರದ ವಿಶ್ವಾಸವರ್ಧಕ ಘಟನೆಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ದುಆಗಳಿಗೆ ಸಂಬಂಧಿಸಿದಂತೆ ಯೋಜನೆಗಳು ಮತ್ತು ಸಲಹೆಗಳು | 14 |
| * | ಮಕ್ಕಳ ತರಬೇತಿ ಮತ್ತು ಅಹ್ಮದಿ ಮಾತೆಯರ ಜವಾಬ್ಧಾರಿಗಳು ದೇಶಪ್ರೇಮ, ನಮಾಝ್, ತಿಲಾವತ್, ಖಿಲಾಫತ್‌ನೊಂದಿಗೆ ಪ್ರೇಮ ಮತ್ತು ಜವಾಬ್ಧಾರಿಗಳು ದೇಶಪ್ರೇಮ, ನಮಾಝ್, ತಿಲಾವತ್, ಖಿಲಾಫತ್‌ನೊಂದಿಗೆ ಪ್ರೇಮ ಮತ್ತು ಉತ್ತಮ ಗುಣಲಕ್ಷಣಗಳು. | 19 |


"مَنْ خَرَجَ مِنَ الْجَمَاعَةِ قَيْدَ شِبْرٍ
فَقَدْ خَلَعَ رِبْقَةَ الْاِسْلَامِ مِنْ عُنُقِهٖ" (حديث)

**ಸ್ವಲ್ಪವಾದರೂ ಜಮಾಅತ್ ನಿಂದ ಬೇರ್ಪಟ್ಟ ವ್ಯಕ್ತಿಯು ಇಸ್ಲಾಂ ಧರ್ಮದಿಂದ ಕತ್ತು ಕೊಯ್ದುಕೊಂಡಂತೆ.**

ಪ್ರೀತಿಯ ಯಜಮಾನ ಸಯ್ಯಿದುನಾ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಇಮಾಮ್ ಮಹದಿ ಮತ್ತು ವಾಗ್ದತ್ತ ಮಸೀಹ್‌ರು ಕೊನೆಗಾಲದಲ್ಲಿ ಉಮ್ಮತೆ ಮುಹಮ್ಮದಿಯಾದಲ್ಲಿ ಅವತರಿಸುತ್ತಾರೆ ಎಂದು ಭವಿಷ್ಯವಾಣಿ ನುಡಿದಿದ್ದರು. ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರು ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್‌ರ ಭವಿಷ್ಯವಾಣಿಗಳ ಪ್ರಕಾರ ಈ ಕಾಲಘಟ್ಟದ ಮುಜದ್ದಿದ್, ವಾಗ್ದಾತ್ತ ಮಸೀಹ್ ಹಾಗೂ ಮಹದಿ ನಾನಾಗಿದ್ದೇನೆ ಎಂದು ವಾದ ಮಂಡಿಸಿದ್ದಾರೆ. ಅವರು ಉಮ್ಮತಿ ನಬೀಯಾಗಿದ್ದಾರೆ ಎಂದು ಸಹ ವಾದಿಸಿದ್ದಾರೆ. ಹಝ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ: ನನಗೆ ನನ್ನದೇನೂ ಇಲ್ಲ, ಏನಿದ್ದರೂ ಮುಹಮ್ಮದ್ ಮುಸ್ತಫಾ(ಸ) ಅವರದ್ದಾಗಿದೆ. ಮತ್ತು ಉಮ್ಮತಿ ನಬೀ ಎಂದರೆ ಸ್ವಂತಸ್ತಿಗೆ ಏನೂ ಇರುವುದಿಲ್ಲ ಬದಲಿಗೆ ಅನುಸರಿಸುವ ಪ್ರವಾದಿಯುವರದ್ದಾಗಿರಬೇಕು ಎಂದಾಗಿದೆ. ನಮ್ಮ ಅಹ್ಮದೀಯೇತರ ಮುಸಲ್ಮಾನ ಬಾಂಧವರು ಕೂಡ ಹಝ್‌ರತ್ ಈಸಾ(ಅ) ಅವರು ಆಕಾಶದಿಂದ ಇಳಿದು ಬಂದರೆ ಉಮ್ಮತಿ ನಬಿ ಆಗುತ್ತಾರೆ ಎಂದು ನಂಬಿರುತ್ತಾರೆ. ಅವರಿಗೂ ಉಮ್ಮತಿ ನಬಿಯು ಆಗಮನದ ಬಗ್ಗೆ ಮನವರಿಕೆಯಾಗಿದೆಯಂತೆ. ಆದರೆ ಕಷ್ಟವೆಂದರೆ ಪವಿತ್ರ ಖುರ್‌ಆನ್ ಅವರ ಮರಣವನ್ನು ಘೋಷಿಸುತ್ತದೆ, ಆದ್ದರಿಂದ ಯೇಸುವಿನ ಆಗಮನದ ಸುದ್ದಿ ನಿಜವಾಗಿ ಈ ಉಮ್ಮತ್ತಿನಿಂದಲೇ ಬರಬೇಕಾಗಿತ್ತು, ಆದರೆ ಆತನು ಮಸೀಹೆ ನಾಸರಿ (ನಜರೆತಿನ ಮೆಸೀಹನ) ರೂಪದಲ್ಲಿ ಆಗಮಿಸಬೇಕಾಗಿತ್ತು ಆದ್ದರಿಂದ ಆತನಿಗೆ ಮಸೀಹ್ ಎಂದು ಹೆಸರಿಸಲಾಗಿದೆ. ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರ ನಿಧನದ ನಂತರ 1908ರಲ್ಲಿ ಅಹ್ಮದಿಯಾ ಜಮಾಅತ್‌ನಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಯಿತು. ಈ ಖಿಲಾಫತ್‌ನ ಸುದ್ಧಿಯೂ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಮೊದಲೇ ನೀಡಿದ್ದಾರೆ. ಹೀಗಾಗಿ ಒಂದು ಸುದೀರ್ಘ ಹದೀಸಿನಲ್ಲಿ ಹಝ್‌ರತ್ ಪೈಗಂಬರ್(ಸ) ರವರು ಇಸ್ಲಾಮಿನ ವಿವಿಧ ಅವಧಿಗಳನ್ನು ಪ್ರಸ್ತಾಪಿಸಿದ ನಂತರ ಹೇಳಿದರು: **ಸುಮ್ಮ ತಕೂನು ಖಿಲಾಫತುನ್ ಅಲಾ ಮಿನ್‌ಹಾಜುನ್ನಬುವ್ವ** ಅಂದರೆ ಮತ್ತೆ ಖಿಲಾಫತ್ ಅನ್ನು ಪ್ರವಾದಿತ್ವದ ಆಧಾರದ ಮೇಲೆ ಸ್ಥಾಪಿಸಲಾಗುವುದು. ತದನಂತರ ಹಝ್‌ರತ್ ಪೈಗಂಬರ್(ಸ) ಅವರು ಮೌನವಹಿಸಿದರು ಮತ್ತು ಮುಂದಿನ ಯಾವುದೇ ಅವಧಿಯನ್ನು ಉಲ್ಲೇಖಿಸಲಿಲ್ಲ. ಈ ಖಿಲಾಫತ್ ಅಲಾ ಮಿನ್‌ಹಾಜುನ್ನಬೂವ್ವ ಖಿಯಾಮತ್ ದಿನದವರೆಗೆ ಸ್ಥಿರವಾಗಿರುತ್ತದೆ ಎಂದು ಇದು ಸಾಬೀತುಪಡಿಸುತ್ತದೆ. ಹೀಗೆ ಅಹ್ಮದಿಯಾ ಜಮಾಅತ್‌ನಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪನೆಯಾಗಿ 115 ವರ್ಷಗಳಾಗಿವೆ. ಮುಸ್ಲಿಮ್ ಖಿಲಾಫತ್ ನಾಶವಾಯಿತು ಎಂಬುದಕ್ಕೆ ಈ ಖಿಲಾಫತ್ ಅಧಿಕೃತತೆಗೆ ಇದು ಸಾಕಷ್ಟು ಪುರಾವೆಯಾಗಿದೆ. ಖಲೀಫತುಲ್ ಮುಸ್ಲಿಮೀನ್ (ಮುಸ್ಲಿಮರ ಖಲೀಫರಾಗಲು) ಬಯಸಿದವರು ನಾಶವಾದರು. ಆದರೆ

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ನಿಜವಾದ ಖಿಲಾಫತ್ 115 ವರ್ಷಗಳಿಂದ ಯಾವುದೇ ವಿವಾದವಿಲ್ಲದೆ ಸ್ಥಾಪಿಸಲ್ಪಟ್ಟಿದೆ. ದಿನದಿಂದ ದಿನಕ್ಕೆ ಇದರ ವೈಭವ ಹೆಚ್ಚುತ್ತಿದೆ. ಅದನ್ನು ಅಳಿಸಲು ಬಯಸಿದವರು ಅಳಿಸಿಹೋದರು, ಆದರೆ ಇದು ಅಳಿಸಲಿಲ್ಲ ಮತ್ತು ಎಂದಿಗೂ ಅಳಿಸುವುದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಸೂರಾ ನೂರ್‌ನಲ್ಲಿ ಉಮ್ಮಾ ಮುಹಮ್ಮದಿಯಾದಲ್ಲಿ ಖಿಲಾಫತ್ ಸ್ಥಾಪನೆಗೆ ವಾಗ್ದಾನ ನೀಡಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ವಅದಲ್ಲಾಹುಲ್ಲಝೀನ ಆಮನೂ ಮಿನ್‌ಕುಮ್ ವ ಅಅ್‌ಮಿಲುಸ್ಸಾಲಿಹಾತಿ ಲಯಸ್ತಖ್ಲಿಫನ್ನಹುಮ್ ಫಿಲ್ ಅರ್ಝಿ ಕಮಸ್ತಖ್ಲಫಲ್ಲಝೀನ ಮಿನ್ ಖಬ್ಲಿಕುಮ್; ವಲಯುಮಕ್ಕಿನನ್ನ ಲಹುಮ್ ದೀನಹುಮುಲ್ಲಝಿರ್‌ತಝಾ ಲಹುಮ್ ವಲಯುಬದ್ದಿಲನ್ನಹುಮ್ಮಿಮ್ ಬಅ್‌ದಿ ಖೌಫಿಹಿಮ್ ಅಮ್‌ನಾ; ಯಅ್‌ಬುದೂನನೀ ಲಾ ಯುಶ್ರಿಕೂನ ಬೀ ಶೈಅ; ವಮನ್ ಕಫರ ಬಅದ ಝಾಲಿಕ ಫಉಲಾಯಿಕ ಹುಮುಲ್ ಫಾಸಿಖೂನ್. (ಅನ್ನೂರ್:56)**

ಅನುವಾದ :: ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು.

**ಮಿನ್‌ಕುಮ್** ಎಂದರೆ ಸಹಾಬಿಗಳು ಮಾತ್ರ, ವಾಗ್ದಾನದ ಪ್ರಕಾರ ಅವರಲ್ಲಿ ಖಿಲಾಫತ್ ಸ್ಥಾಪನೆಯಾಯಿತು ಎಂದು ಯಾರೂ ಭಾವಿಸಬಾರದು. ವಾಸ್ತವ ಏನೆಂದರೆ ಇಡೀ ಉಮ್ಮತೆ ಮುಹಮ್ಮದಿಯಾವನ್ನು ಸಹಾಬಾಗಳ ಮೂಲಕ ಸಂಬೋಧಿಸಲಾಗಿದೆ. ಮತ್ತು ಉಮ್ಮತೆ ಮುಹಮ್ಮದಿಯಾದಲ್ಲಿ ಅಲ್ಲಾಹನಿಂದ ಶಾಶ್ವತ ಖಿಲಾಫತ್‌ನ ವಾಗ್ದಾನವಿದೆ. ಮತ್ತು ಆ ವಾಗ್ದಾನದ ಪ್ರಕಾರ, ಅಲ್ಲಾಹನು ಮೇಲೆ ತಿಳಿಸಿದಂತೆ ಉಮ್ಮತೆ ಮುಹಮ್ಮದಿಯಾದಲ್ಲಿ ಶಾಶ್ವತ ಖಿಲಾಫತ್ ವ್ಯವಸ್ಥೆಯನ್ನು ಸ್ಥಾಪಿಸಿದನು. ಅಲ್‌ಹಮ್ದುಲಿಲ್ಲಾಹ್ ಅಲಾಝಾಲಿಕ್. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

**ಮಿನ್‌ಕುಮ್** ಎಂಬ ಪದದಿಂದ ಸಂಬೋಧನೆಯು ಸಹಾಬಾದವರಿಗೆ ಆಗಿರುವುದರಿಂದ ಈ ಖಿಲಾಫತ್ ಸಹಾಬಾಗಳಿಗೆ ಸೀಮಿತವಾಗಿದೆ ಎಂದು ವಾದ ಮಾಡುವುದು ವಿಚಿತ್ರ ಬುದ್ಧಿವಂತಿಕೆಯಾಗಿದೆ. ಪವಿತ್ರ ಖುರ್‌ಆನ್ ಅನ್ನು ಅದೇ ರೀತಿಯಲ್ಲಿ ಅರ್ಥೈಸಿದರೆ, ಯಹೂದಿಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗುವುದು ಎಂದರ್ಥ. **ಮಿನ್‌ಕುಮ್** ಎಂಬ ಪದವು ಪವಿತ್ರ ಖುರ್‌ಆನ್‌ನಲ್ಲಿ ಸುಮಾರು ಎಂಬತ್ತೆರಡು ಸ್ಥಳಗಳಲ್ಲಿ ಕಂಡುಬರುತ್ತದೆ ಮತ್ತು ವಿಶೇಷ ಸಂಬಂಧವನ್ನು ಸ್ಥಾಪಿಸಿದ ಎರಡು ಸ್ಥಳಗಳನ್ನು ಹೊರತುಪಡಿಸಿ, ಉಳಿದೆಲ್ಲ ಸ್ಥಳಗಳಲ್ಲಿ, **ಮಿನ್‌ಕುಮ್** ಎಂಬ ಶೀರ್ಷಿಕೆಯಿಂದ ಖಿಯಾಮತ್ ದಿನದವರೆಗೂ ಜನಿಸುವಂತಹ ಎಲ್ಲಾ ಮುಸ್ಲಿಮರನ್ನು ಉಲ್ಲೇಖಿಸಲಾಗಿದೆ ಎಂಬುದು ಸ್ಪಷ್ಟವಾಗಿರಬೇಕು." (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ-6, ಪುಟ-331)

ಉಮ್ಮತೆ ಮುಹಮ್ಮದಿಯಾದಲ್ಲಿ ಶಾಶ್ವತ ಖಿಲಾಫತ್ ಸ್ಥಾಪನೆಯ ಕುರಿತು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಯಾವ ಮನುಷ್ಯನಿಗೂ ಶಾಶ್ವತ ಜೀವನವಿಲ್ಲ ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಪ್ರಪಂಚದ ಎಲ್ಲಾ ಜೀವಿಗಳಲ್ಲಿ ಅತ್ಯುತ್ತಮ ಮತ್ತು ಅಗ್ರಗಣ್ಯವಾದ ಸಂದೇಶವಾಹಕರ ಅಸ್ತಿತ್ವವು ನೆರಳಿನಲ್ಲಿ ಶಾಶ್ವತವಾಗಿ ನೆಲೆಗೊಳ್ಳಬೇಕೆಂದು ಉದ್ದೇಶಿಸಿದ್ದಾನೆ, ಆದ್ದರಿಂದ ಈ ಉದ್ದೇಶಕ್ಕಾಗಿ ಸರ್ವಶಕ್ತನಾದ ಅಲ್ಲಾಹನು ಖಿಲಾಫತ್ ಅನ್ನು ಪ್ರಸ್ತಾಪಿಸಿದನು, ಇದರಿಂದಾಗಿ ಪ್ರವಾದಿತ್ವದ ಅನುಗ್ರಹವು ಈ ಜಗತ್ತಿನಲ್ಲಿ ಮತ್ತು ಯಾವುದೇ ಯುಗದಲ್ಲಿ ಎಂದಿಗೂ ವಂಚಿತವಾಗಿಲ್ಲ, ಆದ್ದರಿಂದ ಯಾವ ವ್ಯಕ್ತಿಯು ಖಿಲಾಫತ್ ಅನ್ನು ಕೇವಲ ಮೂವತ್ತು ವರ್ಷಗಳ ಕಾಲಕ್ಕೆ ಸೀಮಿತಗೊಳಿಸುತ್ತಾನೊ ಆತನು ತನ್ನ ಅಜ್ಞಾನದಿಂದ ಖಿಲಾಫತ್‌ನ ಮೂಲ ಉದ್ದೇಶವನ್ನು ನಿರ್ಲಕ್ಷಿಸುತ್ತಾನೆ ಮತ್ತು ಸರ್ವಶಕ್ತನಾದ ಅಲ್ಲಾಹನ ಈ ಉದ್ದೇಶವಿರಲಿಲ್ಲ ಅಂದರೆ ರಸೂಲುಲ್ಲಾಹ್(ಸ) ರವರ ನಿಧನದ ನಂತರ ಕೇವಲ ಮೂವತ್ತು

*(ಪುಟ 23 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ನೆನಪಿರಲಿ, ಎಲ್ಲಿಯವರೆಗೆ **"ಲಾ ಇಲಾಹ ಇಲ್ಲಲ್ಲಾಹ್"** ಹೃದಯಾಂತಾರಳದಲ್ಲಿ ಸೇರಿರುವುದಿಲ್ಲ ಮತ್ತು ವ್ಯಕ್ತಿಯ ಕಣಕಣದಲ್ಲಿ ಇಸ್ಲಾಮಿನ ಪ್ರಕಾಶದ ಅದಿಕಾರ ಇರುವುದಿಲ್ಲವೋ ಎಂದೂ ಅಭಿವೃದ್ಧಿ ಸಾಧ್ಯವಾಗಲಿಕ್ಕಿಲ್ಲ." (ಹಝ್ರತ್ ಮಸೀಹ್ ಮೌಊದ್[ಅ])

ಅಂತ್ಯ ತೀರ್ಮಾನ ದಿನದಂದು ನನ್ನ ಮಧ್ಯಸ್ಥಿಕೆಯ ಬಗ್ಗೆ ಎಲ್ಲ ಜನರಲ್ಲಿ ಅತ್ಯಧಿಕ ಸೌಭಾಗ್ಯಶಾಲಿ ತನ್ನ ನಿಷ್ಠೆ ಶುದ್ಧ ಮನಸ್ಸಿನೊಂದಿಗೆ **"ಲಾ ಇಲಾಹ ಇಲ್ಲಲ್ಲಾಹ್"** ಎಂದು ಉಚ್ಚರಿಸುವ ವ್ಯಕ್ತಿ ಆಗುವನು. (ಅಲ್ ಹದೀಸ್)

ನಾವು ಅಹ್ಮದಿಯರು ಭಾಗ್ಯವಂತರು, ಏಕೆಂದರೆ ಅಲ್ಲಾಹನು ನಮಗೆ ಈ ಕಾಲದ ಇಮಾಮರನ್ನು ಮತ್ತು ಹಝ್ರತ್ ಪೈಗಂಬರ್(ಸ) ರವರ ನಿಷ್ಠರಾದ ದಾಸರಾಗುವ, ಅವರನ್ನು ನಂಬುವ ಭಾಗ್ಯ ದಯಪಾಲಿಸಿದ್ದಾನೆ, ಅವರು ನಮಗೆ ಇಸ್ಲಾಮಿನ ಆದೇಶಗಳನ್ನು ತೋರಿಸಿ ಅದರ ಆಳ ಮತ್ತು ಜ್ಞಾನದಿಂದ ತಿಳಿಸಿದರು. ಲಾ ಇಲಾಹ ಇಲ್ಲಲ್ಲಾಹ್‌ನ ಆಳ ಹಾಗೂ ಒಳಾರ್ಥ ತಿಳಿಸಿದ್ದಲ್ಲದೆ, ಮುಹಮ್ಮದ್ ಪೈಗಂಬರ್(ಸ) ರವರ ಸ್ಥಾನಮಾನದ ಕುರಿತು ಮನವರಿಕೆ ಮಾಡಿಕೊಟ್ಟರು.

ಮನುಷ್ಯನ ಜನನದಿಂದ ಮರಣದವರೆಗೆ ಅಲ್ಲಾಹನ ಕಾನೂನು ಇದೇ ಆಗಿದೆ. ಅವನು ಏಕದೇವನನ್ನು ನಂಬುವವರಿಗೆ ಸಹಾಯ ನೀಡುತ್ತಾನೆ. (ಹಝ್ರತ್ ಮಸೀಹ್ ಮೌಊದ್[ಅ])

ಮಕ್ಕ ವಿಜಯದ ಸಮಯ ಸಾವಿರಾರು ವಿಗ್ರಹ ಆರಾಧಕರು **"ಲಾ ಇಲಾಹ್ ಇಲ್ಲಲ್ಲಾಹ್"** ಮಹಿಮರನ್ನು ಅತಿರಿರುವರು.

ಒಂದು ಮಾತಿದೆ ಅದು ಬದಲಾಗಲು ಸಾಧ್ಯವಿಲ್ಲ, ಅದೇನೆಂದರೆ **"ಲಾ ಇಲಾಹ ಇಲ್ಲಲ್ಲಾಹ್"** ಅದು ವಾಸ್ತವವಾಗಿದೆ. ಬಾಕಿ ಏನೆಲ್ಲಯಿದೆ ಅದರ ಪೂರ್ಣತೆಗೆ ಪೂರಕವಾಗಿದೆ. (ಹಝ್ರತ್ ಮಸೀಹ್ ಮೌಊದ್[ಅ])

ಕಲಿಮದ ಅರ್ಥವು, ಮನುಷ್ಯನು ತನ್ನ ನಾಲಿಗೆಯಿಂದ, ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಚರಿಸುತ್ತಾನೆ ಮತ್ತು ಹೃದಯದಿಂದ ದೃಢೀಕರಿಸುತ್ತಾನೆ. ನನ್ನ ಆರಾಧ್ಯ ಮತ್ತು ನನ್ನ ಸರ್ವಸ್ವ ಅಲ್ಲಾಹನ ಹೊರತು ಯಾರೂ ಇಲ್ಲ." (ಹಝ್ರತ್ ಮಸೀಹ್ ಮೌಊದ್[ಅ])

ಯಾವ ವ್ಯಕ್ತಿ ತನ್ನ ಸಹೋದರನ ಹಕ್ಕನ್ನು ದಮನಿಸುತ್ತಾನೆ ಅಥವಾ ವಂಚಿಸುತ್ತಾನೆ ಅಥವಾ ಇನ್ನಿತರ ಕೆಡುಕುಗಳನ್ನು ಬಿಡುವುದಿಲ್ಲ. ನಾನು ಅವನು ಏಕದೇವನನ್ನು ನಂಬುವನು ಎಂದು ಖಾತರಿಪಡುವುದಿಲ್ಲ. ಏಕೆಂದರೆ ಇದೊಂದು ಎಂಥ ಅನುಗ್ರಹವಾಗಿದೆ ಎಂದರೆ, ಅದನ್ನು ಪಡೆಯುವ ಮನುಷ್ಯನಲ್ಲಿ ಒಂದು ಪವಾಡ ರೀತಿಯ ಬದಲಾವಣೆ ಉಂಟಾಗುತ್ತದೆ. (ಹಝ್ರತ್ ಮಸೀಹ್ ಮೌಊದ್[ಅ])

ನಾವು ನಮ್ಮ ಸ್ಥಿತಿಗಳಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿಕೊಂಡರೆ ಮತ್ತು **"ಲಾ ಇಲಾಹ ಇಲ್ಲಲ್ಲಾಹ್"** ದ ಯಥಾರ್ಥತೆ ಮನವರಿಕೆ ಮಾಡಿಕೊಳ್ಳುತ್ತಾ ತನ್ನ ಆರಾಧ್ಯ, ತನ್ನ ಸಾಧನೆಯ ಗುರಿ ಹಾಗೂ ಪ್ರಿಯತಮ ಕೇವಲ ಅಲ್ಲಾಹ ಮಾತ್ರನೆಂದು ಭಾವಿಸಿದರೆ, ಲೌಕಿಕತೆಗಿಂತಲೂ ಹೆಚ್ಚಾಗಿ ನಾವು ಅಲ್ಲಾಹನೊಂದಿಗೆ ಪ್ರೀತಿ ಮತ್ತು ಅವನ ಸಂಪ್ರೀತಿಯ ಗುರಿಯಾಗಿಸಿಕೊಂಡರೆ ಈ ಕ್ರಾಂತಿಯು ಬಹುಬೇಗನೆ ಬರಬಹುದಾಗಿದೆ.

ರಂಝಾನಿನ ಈ ಕೊನೆಯ ಹತ್ತು ದಿನಗಳಿಂದ ಹೆಚ್ಚು ಪ್ರಯೋಜನ ಪಡೆಯಲು ನಿಜವಾದ ಅರ್ಥದಲ್ಲಿ ಲೈಲತುಲ್ ಖದರ್ ಪಡೆಯಲು ನಮಗೆ ಲಾ ಇಲಾಹ ಇಲ್ಲಲ್ಲಾಹ ಮುಹಮ್ಮದುನ್ ರಸೂಲುಲ್ಲಾಹ್ ಕಲಿಮವನ್ನು ತಮ್ಮ ಹೃದಯ ಹಾಗೂ ಅಂತರಾತ್ಮದ ಧ್ವನಿಯನ್ನಾಗಿ ಮಾಡಿಕೊಳ್ಳಬೇಕಾಗುವುದು. ಅದನ್ನು ತನ್ನ ಪ್ರತಿ ನಡತೆಯಲ್ಲಿ ಅಳವಡಿಸಿಕೊಳ್ಳಬೇಕಾಗುವುದು, ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ– ಈ ದಿನಗಳಲ್ಲಿ ಲೋಕಶಾಂತಿ ಮತ್ತು ನೆಲೆ ನಿಲ್ಲುವಿಕೆಗಾಗಿ ದುಆ ಮಾಡುತ್ತಿರಬೇಕು. ಅಲ್ಲಾಹನು ಮನುಕುಲದ ಮೇಲೆ, ಕರುಣೆ ಮತ್ತು ಕೃಪೆ ತೋರಿಸುವವನಾಗಲಿ.

**ಹಝ್ರತ್ ಮಸೀಹ್ ಮೌಊದ್(ಅ) ರವರ ಜ್ಞಾನಪೂರ್ಣ ಅಧ್ಯಾಪನೆಗಳ ಬೆಳಕಿನಲ್ಲಿ ಪವಿತ್ರ ಕಲಿಮದಲ್ಲಿ ವಿವರಿಸಲಾದ ಏಕದೇವತ್ವದ ಮಹತ್ವ ಮತ್ತು ಪೈಗಂಬರ್(ಸ) ರವರ ಮಹೋನ್ನತ ಪ್ರವಾದಿತ್ವದ ಕುರಿತು ವಿವರ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–04–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಪೈಗಂಬರ್(ಸ) ಅರುಹಿದರು. ನಿಶ್ಚಯವಾಗಿಯೂ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ "ಲಾ ಇಲಾಹ ಇಲ್ಲಲ್ಲಾಹ್" ಎಂದು ಹೇಳುವವನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗಿದೆ. (ಸಹೀ ಬುಖಾರಿ, ಕಿತಾಬುಸ್ಸಲಾತ್, ಬಾಬ್ ಅಲ್‌ಮಸಾಜಿದ್ ಫಿಲ್ ಬುಯೂತ್...... ಹದೀಸ್–425)

ಆದ್ದರಿಂದ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಅವನ ಕಡೆಗೆ ಬಾಗುತ್ತ, ತನ್ನ ಗಮನವನ್ನು ನಿಷ್ಠಾವಂತನಾಗಿ ಅಲ್ಲಾಹನ ಕಡೆಗೆ ತಿರುಗಿಸುತ್ತ ಮನುಷ್ಯನು ಲಾ–ಇಲಾಹ ಇಲ್ಲಲ್ಲಾಹ್ ಎಂದು ಹೇಳುವಾಗ ಆತನು ಅಲ್ಲಾಹನ ಅನುಗ್ರಹಗಳಿಗೆ ವಾರಸುದಾರನಾಗುತ್ತಾನೆ. ಆತನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. (ಸಹೀ ಬುಖಾರಿ, ಕಿತಾಬುರ್ ರಿಖಾಖ್,..... ಹದೀಸ್–6243)

ಒಂದು ಸಂದರ್ಭದಲ್ಲಿ ಹೇಳಿದರು. ಅಲ್ಲಾಹನು ಅವರ ಮೇಲೆ ನರಕದ ಬೆಂಕಿ ನಿಷಿದ್ಧಗೊಳಿಸುವನು. ಇದೇ ಬೋಧನೆಯನ್ನೇ ಎಲ್ಲ ಪ್ರವಾದಿಗಳೂ ತಂದಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು. ನಾನು ಮತ್ತು ಮುಂಚಿನ ಪ್ರವಾದಿಗಳು ಹೇಳಿದ ಅತ್ಯಂತ ಶ್ರೇಷ್ಠ ವಾಕ್ಯ– 'ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ" ಎಂದಾಗಿದೆ.

(ಮೌತಾ ಇಮಾಮ್ ಮಾಲಿಕ್, ಕಿತಾಬುಸ್ಸಲಾತ್, ಹದೀಸ್–501, ಸಂಪುಟ–1, ಪುಟ–536, ಮಕ್ತಬ ಅಲ್‌ಬುಶ್ರ ಕರಾಚಿ)

ಒಟ್ಟಿನಲ್ಲಿ ಈ ಅಧ್ಯಾಪನೆ ಎಲ್ಲ ಪ್ರವಾದಿಗಳದ್ದಾಗಿದೆ. ಆದರೆ ದೌರ್ಭಾಗ್ಯಕರ ಸಂಗತಿಯೇನೆಂದರೆ, ಅದೇ ಪ್ರವಾದಿಗಳ ಸಮುದಾಯಗಳು ಈ ಅಧ್ಯಾಪನೆಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಮರೆತುಬಿಟ್ಟು ಶಿರ್ಕಿನ ಮಾರ್ಗವನ್ನು ಅವಲಂಬಿಸಿರುವರು. ನಿಜವಾದ ಬೋಧನೆಯನ್ನು ಮರೆತುಬಿಟ್ಟರು. ನಾವು ಭಾಗ್ಯವಂತರು, ಏಕೆಂದರೆ ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್(ಸ) ರ ಸಮುದಾಯದಲ್ಲಿ ಸೇರಿಸಿಕೊಂಡು ಶಿಕ್ಷಣವನ್ನು ಪೂರ್ಣವಾಗಿ ಕೊನೆಗೊಳಿಸಿದ ಅಧ್ಯಾಪನೆಯನ್ನು ನೀಡಿರುವನು ಮತ್ತು ಹಝ್ರತ್ ಪೈಗಂಬರ್(ಸ) ನಮಗೆ ಏಕದೇವ ವಿಶ್ವಾಸದ ನೈಜವಾದ ಪಾಠವನ್ನು ನೀಡಿ ನಮ್ಮ ಇಹಲೋಕ ಮತ್ತು ಪರಲೋಕವನ್ನು ಸುಂದರಗೊಳಿಸಿರುವರು. ಆದ್ದರಿಂದ ಈಗ ಹಝ್ರತ್ ಪೈಗಂಬ ರ್(ಸ) ರವರ ಯಥಾರ್ಥ ಅಧ್ಯಾಪನೆಯ ಪ್ರಕಾರ ನಡೆಯುವವರು, ನಿಷ್ಠಾವಂತರಾಗಿ ಅಲ್ಲಾಹನ ಏಕತೆಯನ್ನು ಒಪ್ಪುವವರು ಮಾತ್ರವೇ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವರು ಮತ್ತು ಹಝುರತ್ ಪೈಗಂಬರ್(ಸ) ರವರ ಶಿಫಾರಸ್ಸಿನಿಂದ ಪಾಲು ಪಡೆಯುವರು. ಈ ಬಗ್ಗೆ ಹದೀಸಿನಲ್ಲಿ ಒಂದು ವರದಿ ಹೀಗೆ ಬರುತ್ತದೆ, ಅವರು ನುಡಿದರು. ಹಝ್ರತ್ ಪೈಗಂಬರ್(ಸ) ರವರ ಶಿಫಾರಸ್ಸಿಗಾಗಿ ನಿಷ್ಠಾವಂತ ಹೃದಯದೊಂದಿಗೆ ಲಾ ಇಲಾಹ ಇಲ್ಲಲ್ಲಾಹ್ ಎಂಬ ವಾಕ್ಯವನ್ನು ಒಪ್ಪಬೇಕು. (ಸಹೀ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್–99) ಅದರಲ್ಲಿ ಲೌಕಿಕತೆ ಮಿಶ್ರಗೊಳ್ಳಬಾರದು.

ಶಿಫಾರಸ್ಸಿನ ಅಧಿಕಾರ ನೀಡಲ್ಪಟ್ಟ ಕೊನೆಯ ಮತ್ತು ಪರಿಪೂರ್ಣ ಪ್ರವಾದಿ ಹಝ್ರತ್ ಪೈಗಂಬರ್ (ಸ) ಆಗಿರುವರು. ಹಝ್ರತ್ ಪೈಗಂಬರ್(ಸ) ರನ್ನು ನಂಬುವುದು ಅಗತ್ಯ. ತನ್ನ ಸ್ಥಾನಮಾನದ ಕುರಿತು ಸ್ವಯಂ ಹಝ್ರತ್ ಪೈಗಂಬರ್(ಸ) ಹೀಗೆ ನುಡಿಯುವರು. ನಿಷ್ಠಾವಂತ ಹೃದಯದೊಂದಿಗೆ 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್" ಎಂದು ಉಚ್ಚರಿಸಿದ ಒಬ್ಬ ವ್ಯಕ್ತಿ, ಅವನ ಮೇಲೆ ಅಲ್ಲಾಹನು ಬೆಂಕಿಯನ್ನು ನಿಷಿದ್ಧಗೊಳಿಸುವನು. (ಸಹೀ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್–128)

ಒಂದೆಡೆ ಲಾ ಇಲಾಹ ಇಲ್ಲಲ್ಲಾಹ್ ಇದೆ. ಇನ್ನೊಂದೆಡೆ ಮುಹಮ್ಮದುರ್ ರಸೂಲುಲ್ಲಾಹ್(ಸ) ಸಹ ಸೇರಿದೆ. ಹಾಗೆ ಈಗ ಏಕದೇವನ ಉಚ್ಚಾರ ಮತ್ತು ಹಝ್ರತ್ ಪೈಗಂಬರ್(ಸ) ರವರು ಅಲ್ಲಾಹನ ಅಂತಿಮ ಪ್ರವಾದಿ ಮತ್ತು ಪರಿಪೂರ್ಣ ಪ್ರವಾದಿ ಎಂದು ಮನ್ನಿಸದಿರಲು ಸಾಧ್ಯವಿಲ್ಲ. ಸಮುದಾಯದಲ್ಲಿ ಶಿರ್ಕನ್ನು ನಿರ್ಮೂಲನೆ ಮಾಡಿದವರು ಅವರೇ ಆಗಿದ್ದಾರೆ. ಅಲ್ಲಾಹನು ಮತ್ತು ಅವನ ಪ್ರವಾದಿಯು ಯಾವನೇ ಒಬ್ಬ ದುರ್ಬಲ ಮನುಷ್ಯನಿಗೆ ಅಥವಾ ಯಾವುದೇ ರೀತಿಯಲ್ಲಿ ಶಿರ್ಕ್ ಮಾಡುವುದನ್ನು ಮೆಚ್ಚಲಿಲ್ಲ. ಇದರ ಹೊರತಾಗಿಯೂ ಮುಸಲ್ಮಾನರಲ್ಲಿ ಗೌಪ್ಯ ರೀತಿಯ ಶಿರ್ಕ್‌ನಲ್ಲಿ ತೊಡಗಿರುವವರು ಕಾಣಸಿಗುತ್ತಾರೆ. ಅದನ್ನು ಅಲ್ಲಾಹನು ಮತ್ತು ಅವನ ಪ್ರವಾದಿ(ಸ) ಬಲವಾಗಿ ನಿಷಿದ್ಧಗೊಳಿಸಿದ್ದಾರೆ. ನಾವು ಅಹ್ಮದಿಯರು ಭಾಗ್ಯವಂತರು, ಏಕೆಂದರೆ ಈ ಕಾಲದ ಇಮಾಮ್ ಮತ್ತು ಹಝ್ರತ್ ಪೈಗಂಬರ್(ಸ) ರ ಸತ್ಯಸಂಧ್ಯ ದಾಸರಾದ ಹಝ್ರತ್ ಮಸೀಹ್ ಮೌಊದ್ (ಅ) ರನ್ನು ನಂಬಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಿರುವನು. ಅವರು ಸ್ಪಷ್ಟವಾಗಿ ಇಸ್ಲಾಮಿನ ಆಜ್ಞೆಗಳ ಆಳ ಮತ್ತು ಯುಕ್ತಿಯನ್ನು ನಮಗೆ ತಿಳಿಸಿರುವನು. ಲಾ ಇಲಾಹ ಇಲ್ಲಲ್ಲಾಹ್ ಎಂಬ ವಚನದ ಆಳವಾದ ಅರ್ಥವನ್ನು ಹೇಳುವುದರೊಂದಿಗೆ ಅವರು ನಮಗೆ ಹಝ್ರತ್ ಪೈಗಂಬರ್ (ಸ) ರ ಪದವಿಯ ಬಗ್ಗೆಯೂ ಹೇಳಿಕೊಟ್ಟಿರುವರು.

ಈ ಸಂದರ್ಭದಲ್ಲಿ ಇದರ ವಿವರವಾಗಿ ನಾನು ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸುವೆನು. ಅದು ಈ ವಿಷಯದ ಮೇಲೆ ಬಹು ಸುಂದರವಾದ ಬೆಳಕನ್ನು ಬೀರುವಂತಿದೆ. ನಾವು ಈ ವಿಷಯದ ಆಳವನ್ನು ಗ್ರಹಿಸುತ್ತಾ ಹೇಗೆ ನಮ್ಮ ಆತ್ಮಾವಲೋಕನೆ ಮಾಡಿಕೊಳ್ಳಬಹುದು ಎಂದು ಇದು ನಮ್ಮ ಗಮನ ಸೆಳೆಯುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. **"ಅಲ್ ಯೌಮ ಅಕ್‌ಮಲ್‌ತು....** (ಅಲಮಾಯಿದ–4) ಎಂದು ಅಲ್ಲಾಹನು ಹೇಳಿದ ವಚನದ ತಾತ್ಪರ್ಯವನ್ನು ಸ್ವತ: ಬೇರೊಂದೆಡೆ ವಿವರಿಸಿರುವನು. ಅದರಲ್ಲಿ ಮೂರು ಲಕ್ಷಣಗಳು ಇರಲೇಬೇಕು. ಮೊದಲನೆಯದಾಗಿ, **"ಅಸ್‌ಲುಹಾ ಸಾಬಿತುನ್"** (ಇಬ್ರಾಹೀಂ–25) ಅದರ ಬೇರುಗಳು ಗಟ್ಟಿಯಾಗಿ ನೆಲೆಸಿದೆ. ಎರಡನೇ ಲಕ್ಷಣ **"ಫರ್‌ಉಹಾ ಫಿಸ್ಸಮಾಇ"** (ಇಬ್ರಾಹಿಂ–25) ಅದರ ರೆಂಬೆಗಳು ಆಕಾಶದ ಎತ್ತರಕ್ಕೆ ತಲುಪಿವೆ. ಮೂರನೇ ಲಕ್ಷಣ, **"ತುಅ್‌ತೀ ಉಕುಲಹಾ ಕುಲ್ಲ ಹೀನಿನ್"** (ಇಬ್ರಾಹಿಂ–26) ಸದಾ ತಾಜಾ ಹಣ್ಣುಗಳನ್ನು ನೀಡುತ್ತದೆ. ಈ ಮಟ್ಟವನ್ನು ಪೂರ್ಣವಾಗಿ ತಲುಪುವ ಧರ್ಮ ಇಸ್ಲಾಂ ಮಾತ್ರವಾಗಿದೆ. ಒಟ್ಟಿನಲ್ಲಿ **"ಅಸ್‌ಲುಹಾ ಸಾಬಿತುನ್"**ನ ವ್ಯಾಖ್ಯಾನ ಮಾಡುತ್ತಾ ಅದು ಇದರ ಮೊದಲ ಲಕ್ಷಣವಾಗಿದೆ. ಈ ಕುರಿತು ಅವರು (ಅ) ಹೇಳುತ್ತಾರೆ. ಮೊದಲ ಲಕ್ಷಣ ವಿಶ್ವಾಸದ ಬೇರಾಗಿದೆ. ಅದು ಲಾ ಇಲಾಹ್ ಇಲ್ಲಲ್ಲಾಹ್ ಎಂಬುದಾಗಿದೆ. ಅದನ್ನು ಪವಿತ್ರ ಖುರ್‌ಆನ್ ಎಷ್ಟೊಂದು ವರ್ಣಿಸಿದೆ ಎಂದರೆ, ಅದರ ಎಲ್ಲಾ ಪುರಾವೆಗಳು ಕೆಲವು ಸಂಪುಟಗಳಲ್ಲಿ ಕೊನೆಗೊಳ್ಳದು. ಗ್ರಂಥಗಳೇ ಬರೆಯಬಹುದಾಗಿದೆ. ಆದರೆ ಆ ಬಗ್ಗೆ ಸಂಕ್ಷಿಪ್ತವಾಗಿ ಉದಾಹರಣೆಯ ರೂಪದಲ್ಲಿ ಕೆಳಗೆ ವಿವರಿಸುತ್ತೇನೆ. ಉದಾಹರಣೆಗೆ ಒಂದೆಡೆ ಎಂದರೆ ಭಾಗ ಎರಡನೆಯ ಅಧ್ಯಾಯ ಅಲ್ ಬಖರದಲ್ಲಿ ಅಲ್ಲಾಹನು ಹೇಳಿದನು.

**ಇನ್ನ ಫೀ ಖಲಖಿಸ್ಸಮಾವಾತಿ ವಲ್‌ಅರ್ಝಿ ವಖ್ತಿಲಾಫಿಲ್ಲೈಲಿ ವನ್ನಹಾರಿ ವಲ್ ಫುಲ್‌ಕಿಲ್ಲತೀ ತಜ್ರೀ ಫೀಲ್‌ಬಹ್‌ರಿ ಬಿಮಾ ಯನ್‌ಫಉನ್ನಾಸ ವಮಾ ಅನ್‌ಝಲಲ್ಲಾಹು ಮಿನಸ್ಸಮಾಇ ಮಿಮ್ಮಾಇನ್ ಫಅಹ್‌ಯಾ ಬಿಹಿಲ್ ಅರ್ಝ ಬಅ್‌ದ ಮೌತಿಹಾ ವ ಬಸ್ಸ ಫೀಹಾ ಮಿನ್ ಕುಲ್ಲಿ ದಾಬ್ಬತಿವ್ವ ತಸ್ರೀಫಿರ್ರಿಯಾಹಿ ವಸ್ಸಹಾಬಿಲ್ ಮುಸಖ್ಖರಿ ಬೈನಸ್ಸಮಾಇ ವಲ್ ಅರ್ಝಿ ಲಆಯಾತಿಲ್ಲಿಖೌಮಿಯ್ಯಅ್‌ಖಿಲೂನ್** (ಅಲ್–ಬಖರ–164) ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲಿಯೂ ರಾತ್ರಿ ಹಗಲುಗಳ ಪರ್ಯಾಯದಲ್ಲಿಯೂ ಮನುಷ್ಯರಿಗೆ ಪ್ರಯೋಜನಕರವಾದ ವಸ್ತುಗಳ ಸಹಿತ ಸಮುದ್ರದಲ್ಲಿ ಸಂಚರಿಸುವ ಹಡಗುಗಳಲ್ಲಿಯೂ ಆಕಾಶದಿಂದ ಅಲ್ಲಾಹನು ಮಳೆ ಸುರಿಸಿ ನಿರ್ಜೀವ ಭೂಮಿಯನ್ನು ಜೀವಂತಗೊಳಿಸಿ ಅದರಲ್ಲಿ ಎಲ್ಲ ತರಹದ ಭೂಮಿಯ ಮಧ್ಯೆ ನಿಯಂತ್ರಿಸಲ್ಪಟ್ಟಿರು ಮೋಡಗಳಲ್ಲಿಯೂ ದಿಟವಾಗಿಯೂ ವಿವೇಚನ ಶಾಲಿಗಳಿಗೆ ದೃಷ್ಟಾಂತಗಳಿವೆ. ಇವೆಲ್ಲವು ಅಲ್ಲಾಹನ ಅಸ್ತಿತ್ವ ಮತ್ತು ಅವನ ಏಕತ್ವ ಮತ್ತು ಅವನ ದಿವ್ಯವಾಣಿ ಹಾಗೂ ಅವನು ಬಯಸಿದ್ದನ್ನು ಮಾಡಲು ಶಕ್ತನಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿದೆ. ಹೇಳಿದರು. ಈಗ ನೋಡಿರಿ, ಈ ವಚನದಲ್ಲಿ ತನ್ನ ತತ್ವವನ್ನು ಎಷ್ಟೊಂದು ಸ್ಪಷ್ಟರೂಪದಲ್ಲಿ ಪ್ರಕಟಪಡಿಸಿದ್ದಾನೆ. **ಲಾ ಇಲಾಹ ಇಲ್ಲಲಾಹ್** ಎಂಬುದಕ್ಕೆ ಪುರಾವೆ ಒದಗಿಸಿದ್ದಾನೆ. ದೈವಿಕ ನಿಯಮದೊಂದಿಗೆ ಸಾಕ್ಷ್ಯವನ್ನು ನೀಡಿದ್ದಾನೆ. ಅಂದರೆ ಈ ಸೃಷ್ಟಿಯನ್ನು, ಅದು ಭೂಮ್ಯಾಕಾಶದಲ್ಲಿ ಇವೆ, ಅದನ್ನು ನೋಡುವಾಗ, ಈ ವಚನದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ನಿಸ್ಸಂಶಯವಾಗಿಯೂ ಈ ಪ್ರಪಂಚಕ್ಕೆ ಒಬ್ಬ ಸೃಷ್ಟಿಕರ್ತ ಮತ್ತು ನಿರ್ಮಾಪಕ ಇರುವನು ಎಂದು. **"ವಹ್‌ದಹು ಲಾ ಶರೀಕ"** ಮತ್ತು ಇಚ್ಛಿಸಿದ್ದನ್ನು ಮಾಡುವವನು ಹಾಗೂ ತನ್ನ ಪ್ರವಾದಿಗಳನ್ನು ಲೋಕಕ್ಕೆ ಕಳುಹಿಸಿದವನಾಗಿದ್ದಾನೆ. ಕಾರಣ ವಿವರಿಸಿದ್ದೇನೆಂದರೆ ಅಲ್ಲಾಹನ ಎಲ್ಲ ವಸ್ತುಗಳು ಮತ್ತು ಈ ಸೃಷ್ಟಿಯ ನಿಯಮ ಅದು ನಮ್ಮ ಮುಂದಿದೆ, ಇದು ಸ್ಪಷ್ಟವಾಗಿ ಸೂಚಿಸುತ್ತದೆ, ಈ ಪ್ರಪಂಚ ತನ್ನಷ್ಟಕ್ಕೆ ಅಸ್ತಿತ್ವದಲ್ಲಿ ಬರಲಿಲ್ಲ. ಬದಲು ಅದಕ್ಕೆ ಒಬ್ಬ ಸೃಷ್ಟಿಕರ್ತ, ನಿರ್ಮಾಪಕ ಕಾರುಣ್ಯನಿಧಿಯೂ ಮತ್ತು ಸರ್ವಶಕ್ತಿಶಾಲಿಯೂ ಆಗಿರಬೇಕು. ಎರಡೂ ಸಹಭಾಗಿ ಇಲ್ಲದವನೂ, ಅನಾದಿ, ಅನಂತ ಮತ್ತು ತಾನು ಇಚ್ಛಿಸಿದ್ದನ್ನು ಮಾಡುವವನು ಎಂಬೀ ಗುಣಗಳನ್ನು ಹೊಂದಿರಬೇಕು. ದಿವ್ಯವಾಣಿಯೂ ಅವತರಿಸುವವನಾಗಿರಬೇಕು. (ಜಂಗ್ ಮುಖದ್ದಸ್, ರೂಹಾನಿ ಖಝಾಈನ್, ಸಂಪುಟ–6, ಪುಟ–123–125)

ಆದ್ದರಿಂದ **ಲಾ ಇಲಾಹ ಇಲ್ಲಲ್ಲಾಹ್** ಕೇವಲ ಏಕದೇವನ ಭಾವನೆಯಷ್ಟೇ ಹೃದಯದಲ್ಲಿ ಉಂಟುಮಾಡುವುದಿಲ್ಲ. ಬದಲು ಈ ಮಾತನ್ನು ಸಹ ನಮ್ಮ ಹೃದಯದಲ್ಲಿ ಗಟ್ಟಿಗೊಳಿಸುತ್ತದೆ, ನಮ್ಮ ದೇವನು ಏಕದೇವನಾಗಿದ್ದಾನೆ. ಅನಾದಿ ಅನಂತನಾಗಿದ್ದಾನೆ. ಪ್ರತಿಯೊಂದು ಸೃಷ್ಟಿಯ ಸೃಷ್ಟಿಕರ್ತನಾಗಿದ್ದಾನೆ. ಅವನಿಂದಲೇ ಈ ಪ್ರಪಂಚ ನಡೆಯುತ್ತಿದೆ ಮತ್ತು ಸಕಲ ಅವಶ್ಯಕತೆಗಳಿಗಾಗಿ ಅವನ ಮುಂದೆಯೇ ಬಾಗಬೇಕಾಗಿದೆ. ಒಟ್ಟಿನಲ್ಲಿ ವಿಶ್ವಾಸದ ಸ್ಥಿತಿ ಈ ರೀತಿಯದ್ದು ಆಗುವಾಗ ಅದು ಪರಿಪೂರ್ಣ ವಿಶ್ವಾಸವಾಗುವುದು. ಅದರಲ್ಲಿ ಶಿರ್ಕ್‌ನ ಮಿಶ್ರಣ ಇರಲು ಸಾಧ್ಯವಿಲ್ಲ. ಇದೇ ಈಮಾನಿನ ಕುರಿತು ಹಝುರತ್ ಪೈಗಂಬರ್(ಸ) ಹೇಳಿರುವುದು. **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವವನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗಿದೆ.

ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲ್ಲಾಹನು ಪರಿಪೂರ್ಣ ಅಸ್ತಿತ್ವವಾಗಿದ್ದಾನೆ. ಅವನಿಂದಲೇ ಸಹಾಯ ಪಡೆಯಬೇಕಾಗಿದೆ. ಬೇರೆ ಯಾರಿಗೂ ಅದರ ಹಕ್ಕಿಲ್ಲ. ಇದಕ್ಕೆ ಪವಿತ್ರ ಖುರ್‌ಆನ್ ಒತ್ತು ನೀಡಿದೆ. ಇದರ ಸಂಬಂಧವಾಗಿ ಅಲ್ಲಾಹನು ಹೇಳುತ್ತಾನೆ. **ಇಯ್ಯಾಕ ನಅಬುದು ವ ಇಯ್ಯಾಕ ನಸ್ತಹೀನ್**. ಎಂದರೆ, ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ಆರಾಧಿಸಲಿಕ್ಕಾಗಿ ನಿನ್ನಿಂದಲೇ ನೆರವು ಪಡೆಯಲು ಬಯಸುತ್ತೇವೆ. ಅಲ್ಲಾಹನಿಂದಲೇ ಸಹಾಯವನ್ನು ಯಾಚಿಸಬೇಕು ಎಂದು ಇದರಿಂದ ತಿಳಿದುಬರುತ್ತದೆ. ಯಾವುದೇ ಮನುಷ್ಯನಿಗೆ, ಪ್ರಾಣಿ ಪಕ್ಷಿಗಳಿಗೆ,

ಒಟ್ಟು ಯಾವ ಸೃಷ್ಟಿಗೂ ಅದು ಆಕಾಶಕ್ಕೆ ಸಂಬಂಧಿಸಿದ್ದಾಗಲಿ ಅಥವಾ ಭೂಮಿಗೆ ಸಂಭಂದಿಸಿದಾಗಲಿ ಈ ಹಕ್ಕು ಇರುವುದಿಲ್ಲ. ಹೌದು ಎರಡನೇ ಪದವಿಯಲ್ಲಿ, ಈ ಹಕ್ಕನ್ನು ದೈವಿಕ ಜನರಿಗೆ ನೀಡಲಾಗಿದೆ. ಅವರ ಪ್ರಾರ್ಥನೆಗಳ ಮೂಲಕವೂ ಸಹಾಯ ಪಡೆಯಲಾಗುತ್ತದೆ. ಮನುಷ್ಯನ ಪ್ರಿತಿ ಮತ್ತು ಗುರಿ ಅಲ್ಲಾಹನೇ ಆಗಿರಬೇಕು ಎಂದು **"ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದು ರಸೂಲುಲಾಹ್"**ನ ಮೊದಲ ಭಾಗದಿಂದ ತಿಳಿದುಬರುತ್ತದೆ. ಎರಡನೇ ಭಾಗದಲ್ಲಿ ಹಝ್ರತ್ ಪೈಗಂಬರ್(ಸ) ರ ಪ್ರವಾದಿತ್ವದ ನೈಜನತೆಯನ್ನು ಸೃಷ್ಟಿಪಡಿಸಲಾಗಿದೆ. (ಮಲ್ಫೂರಾತ್ ಸಂಪುಟ 2 ಪುಟ 51–54 ಸಂಚಿಕೆ 1984)

ಮತ್ತು ಅವರು(ಅ) ಹೇಳುತ್ತಾರೆ: ಮನುಷ್ಯ ಹುಟ್ಟಿದಾಗಿನಿಂದ ನಾಶಗೊಳ್ಳುವವರೆಗೆ ದೈವಿಕ ನಿಯಮ "ಏಕತ್ವಕ್ಕೆ ಬೆಂಬಲ ನೀಡುವುದೇ ಕಂಡು ಬರುತ್ತದೆ. ಅವನು ಎಷ್ಟೆಲ್ಲ ಪ್ರವಾದಿಗಳನ್ನು ಕಳುಹಿಸಿರುವನು ಅವರೆಲ್ಲರೂ ಮನುಷ್ಯರ ಮತ್ತು ಇತರ ಸೃಷ್ಟಿಗಳ ಆರಾಧನೆ ಬಿಡಿಸಿ ಅಲ್ಲಾಹನ ಆರಾಧನೆ ಲೋಕದಲ್ಲಿ ಸ್ಥಾಪಿಸುವುದೇ ಆಗಿತ್ತು. **ಲಾ ಇಲಾಹ ಇಲ್ಲಲ್ಲಾಹ್,** ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲ. ಇದರ ಸೇವೆಗೆ ನಿರತರಾಗಿದ್ದರು. ಅವರೆಲ್ಲರ ಪೈಕಿ ಈ ವಿಷಯವನ್ನು ಅತಿ ಹೆಚ್ಚು ಬೆಳಕಿಗೆ ತಂದವರು. ಶಿರ್ಕ್‌ನ್ನು ನಿರ್ನಾಮಪಡಿಸಿದವರು. ಸೃಷ್ಟಿಗಳ ಆರಾಧಕರ ಸುಳ್ಳನ್ನು ಬಹಿರಂಗಪಡಿಸಿದವರು. ಎಲ್ಲವೂ ಸಾಬೀತುಗೊಳಿಸಿದ ನಂತರ ಅವರು ತನ್ನ ದಿಗ್ವಿಜಯದ ಗುರುತಿಗಾಗಿ, **ಲಾ ಇಲಾಹ ಇಲ್ಲಲ್ಲಾಹ ಮುಹಮ್ಮದುರ್ ರಸೂಲುಲ್ಲಾಹ್,** ಎಂಬ ವಚನವು ಬಿಟ್ಟು ಹೋದರು. ಅವರು ಕೇವಲ **ಲಾ ಇಲಾಹ ಇಲ್ಲಲ್ಲಾಹ್** ಪುರಾವೆಗಳಿಲ್ಲದೇ ಪ್ರಸ್ತುತಪಡಿಸಲಿಲ್ಲ. ಬದಲು ಪುರಾವೆ ಸಹಿತ ಶಿರ್ಕಿನ ಅರ್ಥಹೀನತೆ ಸಾಬೀತುಪಡಿಸಿ, ಜನರಿಗೆ ಎಚ್ಚರಿಕೆ ನೀಡಿದರು. ನೋಡಿರಿ. ಏಕದೇವನ ಸದಾಕಾಲ ನೆನಪಿಡಲು ಈ ಪವಿತ್ರ ಕಲಿಮ ಕಲಿಸಿದರು. **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್.** (ಮಸೀಹ್ ಹಿಂದೂಸ್ತಾನ್ ಮೇ, ರೂಹಾನಿ ಖಝಾಈನ್ , ಸಂಪುಟ–15, ಪುಟ–65)

ಮಕ್ಕ ವಿಜಯದ ಸಮಯ ಸಾವಿರಾರು ವಿಗ್ರಹರಾಧಕರು **'ಲಾ ಇಲಾಹ ಇಲ್ಲಲ್ಲಾಹ್"** ದ ಮಹತ್ವ ಮಹಿಮೆ ಅರಿತುಕೊಂಡರು.

ಹಝ್ರತ್ ಪೈಗಂಬರ್(ಸ) ಅಬುಸುಫಿಯಾನ್‌ರಿಗೆ ಕೇಳಿದರು. ಈಗಲಾದರೂ ನಿಮಗೆ **"ಲಾ ಇಲಾಹ ಇಲ್ಲಲ್ಲಾಹ್"**ದ ಮಹಿಮೆ ತಿಳಿದಿರಬಹುದಲ್ಲವೇ? ಅವರು ಉತ್ತರ ನೀಡಿದರು. ಹೌದು! ಖಂಡಿತವಾಗಿಯೂ ಅರಿತುಕೊಂಡಿದ್ದೇನೆ. ಅಲ್ಲಾಹನ ಹೊರತು ಬೇರೆ ಆರಾಧ್ಯನಿರುತ್ತಿದ್ದರೆ ನಮಗೆ ಒಂದಿಷ್ಟಾದರೂ ಸಹಾಯ ಮಾಡುತ್ತಿದ್ದರು. 360 ವಿಗ್ರಹಗಳು ನಾವು ಇಟ್ಟುಕೊಂಡಿದ್ದೆವು. ಅದರ ಆರಾಧನೆ ನಾವು ಮಾಡುತ್ತಿದ್ದೆವು. ಅವರು ಒಂದಿಷ್ಟಾದರೂ ಸಹಾಯ ಮಾಡುತ್ತಿದ್ದರು.

(ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–739, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಸಹೀಹ್ ಬುಖಾರಿ, ಕಿತಾಬ್ ಅಲ್‌ಮಝಾಲಿಮ್, ಹದೀಸ್–2478)

ಒಬ್ಬ ವಿರೋಧಿಯ ಆಕ್ಷೇಪಕ್ಕೆ ಉತ್ತರ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ನಿಮ್ಮ ಈ ಹೇಳಿಕೆ ಹಝುರತ್ ಪವಿತ್ರ ಪ್ರವಾದಿಯ ಈ ಬೋಧನೆ **"ಲಾ ಇಲಾಹ ಇಲ್ಲಲ್ಲಾಹ ಮುಹಮ್ಮದುರ್ ರಸೂಲುಲ್ಲಾಹ್"** ಹೇಳುವುದರಿಂದ ಪಾಪಗಳು ದೂರವಾಗುತ್ತವೆ. ಇದು ಪೂರ್ಣ ಸತ್ಯವಾಗಿದೆ ಮತ್ತು ಉತ್ತಮವಾಗಿದೆ. ನೀವು ಪಾಪಗಳ ದೂರವಾಗುತ್ತವೆ ಎನ್ನುವುದು ಖಂಡಿತವಾಗಿಯೂ ಸತ್ಯವಾಗಿದೆ. ಯಾರೂ ಅಲ್ಲಾಹನನ್ನು ಮಾತ್ರ ಏಕನು ಸಹಭಾಗಿ ಇಲ್ಲಿಯವನು ಎಂದು ನಂಬುತ್ತಾನೆ ಮತ್ತು ಮುಹಮ್ಮದ್ ಮುಸ್ತಫಾ(ಸ) ರವರನ್ನು ಅದೇ ಸರ್ವಶಕ್ತಿಶಾಲಿ ಅಲ್ಲಾಹನು ಕಳುಹಿಸಿರುವನು ಎಂದು ನಂಬುತ್ತಾನೆ. ಅದೇ ವಿಶ್ವಾಸದ ಮೇಲೆ ಮರಣ ಹೊಂದಿದರೆ ಅವನು ಮುಕ್ತಿ ಪಡೆಯುವನು. ಆಕಾಶದ ಕೆಳಗೆ ಯಾರೊಬ್ಬರ ಆತ್ಮಹತ್ಯೆಯಿಂದ ಮುಕ್ತಿ ಖಂಡಿತವಾಗಿಯೂ ದೊರೆಯುವುದಿಲ್ಲ. ಒಬ್ಬನ ಮರಣದಿಂದ ಯಾರಿಗೂ ಮುಕ್ತಿ ದೊರೆಯುವುದಿಲ್ಲ. ಹೌದು ಇದಕ್ಕಿಂತ ಮಿಗಿಲಾಗಿ ಯಾರಿರಬಹುದು. ಹೇಳಿದರು.ಇದಕ್ಕಿಂತ ಮೂಢನು ಯಾರಿರಬಹುದು, ಇಂತಹ ಭಾವನೆ– ಕಲಿಮರಿಂದ ಮುಕ್ತಿ ಪಡೆಯುವುದಿಲ್ಲ, ಆದರೆ ಅಲ್ಲಾಹನನ್ನು ಏಕನೂ ಸಹಭಾಗಿ ಇಲ್ಲದವನು ಎಂದು ನಂಬಬೇಕು. ಗಮನಿಸಿ, ಯೋಚಿಸಿ ನೋಡಿ, ಇದು ಹಗುರವಾಗಿ ಸಾಧಾರಣವಾಗಿ ಹೇಳುವುದಿಲ್ಲ. ಆದರೆ ಅಲ್ಲಾಹನನ್ನು ಏಕನೂ ಸಹಭಾಗಿ ಇಲ್ಲದವನು ಎಂದು ನಂಬಬೇಕು. ಮತ್ತು ಅವನನ್ನು ಎಂಥ ದಯಾವಂತನೆಂದು ನಂಬಬೇಕು, ಅವನು ಖ್ರಿಪೆದೋರಿ ಲೋಕವನ್ನು ದುರ್ಮಾರ್ಗದಿಂದ ಬಿಡಿಸಲು ತನ್ನ ಪ್ರವಾದಿಯನ್ನು ಕಳುಹಿಸಿದನು. ಅವನ ಹೆಸರು ಮುಹಮ್ಮದ್ ಮುಸ್ತಫಾ(ಸ) ಎಂದಾಗಿದೆ. ಇದೊಂದು ಎಂಥ ನಂಬಿಕೆಯಾಗಿದೆ ಎಂದರೆ, ಅದರ ಮೇಲೆ ವಶ್ವಾಸ ಹೊಂದ ಮೇಲೆ ಆತ್ಮದ ಅಂಧಕಾರ ದೂರವಾಗುತ್ತದೆ, ಆತ್ಮಲೋಭ ದೂರವಾಗಿ ಅದರ ಜಾಗ ಏಕದೇವತ್ವ ಪಡೆಯುತ್ತದೆ. ಕೊನೆಗೆ ಆ ಏಕದೇವತ್ವದ ಉತ್ಸಾಹ ದೃದಯಾಂತಾರಳದಲ್ಲಿ ಸೇರಿ, ಇದೇ ಲೋಕದಲ್ಲಿ ಸ್ವರ್ಗಮಯ ಜೀವನ ಪ್ರಾರಂಭವಾಗುತ್ತದೆ." **ಲಾ ಇಲಾಹ ಇಲ್ಲಲಾಹ್** ದ ವಾಸ್ತವ ಏನು, **ಮುಹಮ್ಮುದುರ್ ರಸೂಲುಲ್ಲಾಹ್**ದ ವಾಸ್ತವ ಏನು, ಅದನ್ನು ಮನವರಿಕೆ ಮಾಡಿಕೊಂಡರೇ ಇದೇ ಲೋಕದಲ್ಲಿ ಸ್ವರ್ಗ ಪ್ರಾರಂಭವಾಗುತ್ತದೆ.

ಹೇಳಿದರು. ನೀವು ನೋಡುವಿರಿ ಪ್ರಕಾಶದ ಮುಂದೆ ಕತ್ತಲೆ ನಿಲ್ಲುವುದಿಲ್ಲ, ಅದೇ ರೀತಿಯಲ್ಲಿ, **ಲಾ ಇಲಾಹ ಇಲ್ಲಲ್ಲಾಹ್**ದ ಪ್ರಕಾಶ ಹೃದಯದ ಮೇಲೆ ಬಿದ್ದಾಗ ಆತ್ಮದ ಅಂಧಕಾರಗಳು ಮಾಯವಾಗುತ್ತವೆ. ಪಾಪದ ವಾಸ್ತವ ಅಹಂಕಾರ ಆತ್ಮ ಪ್ರಲೋಭನೆ ಹೊರತು ಏನೂ ಇಲ್ಲ, ಅದನ್ನು ಹಿಂಬಾಲಿಸುವವನು ಪಾಪಿ ಎಂದು ಹೆಸರಿಸಲ್ಪಡುತ್ತಾನೆ. **ಲಾ ಇಲಾಹ ಇಲ್ಲಲ್ಲಾಹ್**ದ ಅರ್ಥ ಅರಬ ವ್ಯಾಕರಣ ಪ್ರಕಾರ ಬಳಕೆಯಾಗಿದೆ. ವ್ಯಾಕರಣದಲ್ಲಿ ಹೆಚ್ಚು ಬಳಕೆಯಲ್ಲಿರುವ ಅದರ ಅರ್ಥ. **ಲಾ ಮತ್‌ಲೂಬ ಲೀ ವಲಾ ಮಹ್‌ಬೂಬ ಲೀ ವಲಾ ಮಲ್‌ಬೂದ ಲೀ ವಲಾ ಮುತಾಅ ಲೀ ಇಲ್ಲಲ್ಲಾಹ್** ಅಂದರೆ ಅಲ್ಲಾಹನ ಹೊರತು ಬೇರೆ ಗುರಿ ಯಾವುದೂ ಇಲ್ಲ, ಬೇರೆ ಪ್ರಿಯತಮ ಯಾರೂ ಇಲ್ಲ, ಬೇರೆ ಆರಾಧ್ಯ ಯಾರೂ ಇಲ್ಲ." (ನೂರುಲ್ ಖುರ್‌ಆನ್, ಸಂಖ್ಯೆ–2, ರೂಹಾನಿ ಖಝಾಈನ್, ಸಂಪುಟ–9, ಪುಟ 418–419) ಈ ಸ್ಥಿತಿ ಉಂಟಾದಾಗ ಖಂಡಿತವಗಿಯೂ ಜೀವನವು ಸ್ವರ್ಗಮಯವಾಗುತ್ತದೆ ಮತ್ತು ಕ್ಷಮೆಯ ಕಾರಣಗಳು ಇಹಲೋಕದಲ್ಲೇ ಪ್ರಾರಂಬವಾಗುತ್ತವೆ.

ಮತ್ತು ಕಲಮಾ **ಲಾ ಇಲಾಹ ಇಲ್ಲಲ್ಲಾಹ್**ದ ವಿವರಣೆ ನೀಡುತ್ತಾ ಹೇಳಿದರು. ವಾಸ್ತವವೇನೆಂದರೆ ಅಲಾಹನು ಹಲವು ಆದೇಶಗಳನ್ನು ನೀಡಿದ್ದಾನೆ. ಅದರಲ್ಲಿ ಕೆಲವು ಎಂತಹದ್ದಾಗಿದೆ ಎಂದರೆ ಅದರ ಪಾಲನೆ ಎಲ್ಲರಿಂದಲೂ ಸಾಧ್ಯವಾಗದು. ಉದಾಹರಣೆಗೆ ಹಜ್ಜ್, ಅದು ಸಾಮರ್ಥ್ಯಯುಳ್ಳವನಿಗೆ ಮಾತ್ರ ಕಡ್ಡಾಯವಾಗಿದೆ. ಪ್ರತಿಯೊಬ್ಬರ ಮೇಲೆ ಕಡ್ಡಾಯವಿಲ್ಲ. ಅದಕ್ಕಾಗಿ ರಸ್ತೆಯಲ್ಲಿ ಶಾಂತಿ ಇರಬೇಕು, ಯಾವುದೆ ಅಪಾಯವಿರಬರದು, ಹಿಂದೆ ಬಿಟ್ಟು ಹೋಗುವವರ ಊಟೋಪಾಚಾರ ವ್ಯವಸ್ಥೆ ಇರಬೇಕು. ಅವರನ್ನು ಹಸಿವೆಯಲ್ಲಿರಿಸಿ ಹಜ್ಜ್‌ಗೆ ಹೋಗುವಂತಿಲ್ಲ. ಇದೆಲ್ಲ ಶರತ್ತುಗಳಿಗೆ ಬದ್ಧೌಅಗಿದ್ದರೆ ಹಜ್ಜ್ ಮಾಡಬಹುದು. ಅಂತೆಯೇ ಝುಖಾತ್ (ಕಡ್ಡಾಯಗಾನ) ಸಹ. ಅದು ಸಹ ಪಶ್ಯಕ್ರಮವಂತಿದ್ದರೆ ಮಾತ್ರ ಕೊಡಬಹುದಾಗಿದೆ. ಯಾರ ಮೇಲೆ ಕಡ್ಡಾಯ ಅನ್ವಯವಾಗುತ್ತದೆ. ಅವರು ಮಾತ್ರ ಕೊಡಬಹುದು. ಅಂತೆಯೇ ನಮಾಝ್‌ನಲ್ಲೂ ಬದಲಾವಣೆಗಳಿವೆ. ಪ್ರಯಾಣದಲ್ಲಿ, ರೋಗಾವಸ್ಥೆಯಲ್ಲಿ ಖಸರ್ ಆಗುತ್ತದೆ. ಜಮಾ ಆಗುತ್ತದೆ. ಆದರೆ ಒಂದು ಮಾತಿದೆ. ಅದರಲ್ಲಿ ಯಾವ ಬದಲಾವಣೆಯೂ ಇಲ್ಲ. ಅದಾಗಿದೆ–ಲಾ ಇಲಾಹ ಇಲ್ಲಲ್ಲಾಹ್ ಇದು ಅಸಲಾಗಿದೆ. ಬಾಕಿ ಎಲ್ಲ ಅದರ ಪೂರ್ಣತೆಗೆ ಬೇಕಾದ ಸಾಧನೆಗಳಾಗಿವೆ.

ಆರಾಧನೆ ಮಳಾಡದೇ "ಏಕದೇವತ್ವ" ಪೂರ್ಣಗೊಳ್ಳುವುದಿಲ್ಲ. **"ಲಾ ಇಲಾಹ ಇಲ್ಲಲ್ಲಾಹ್"**ದ ಹಕ್ಕು ಪಾಲಿಸಿದಂತಾಗುವುದಿಲ್ಲ. **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವುದರ ಪ್ರಕಾರ ನಡೆಯುವ ತನಕ ಅದರ ಹಕ್ಕು ಈಡೇರಲ್ಪಡುವುದಿಲ್ಲ. ಇದೇ ಸತ್ಯವಿಶ್ವಾಸದ ನಿಬಂಧನೆಯಾಗಿದೆ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳು ಪ್ರಕಾರ ನಡೆಯುವುದು ಸಹ ಅಗತ್ಯ. ಆಗಲೇ ಮನುಷ್ಯನು **ಲಾ ಇಲಾಹ ಇಲ್ಲಲ್ಲಾಹ್** ಪ್ರಕಾರ ನಡೆಯುವವನಾಗುವನು. ಆಗಲೇ ಮನುಷ್ಯನು ಅಲ್ಲಾಹನ ಮುಂದೆ ಸತ್ಯವಂತನಾಗುವನು. ಈ ಸ್ಥಿತಿ ಉಂಟಾದಾಗ ವಾಸ್ತವದಲ್ಲಿ ಅವನು ತಮ್ಮ ನುಡಿ ನಡೆಯಲ್ಲಿ ಸಾರ್ಥಕವಾಗುತ್ತಾನೆ. ಅವನು ಅಲ್ಲಾಹನ ನದಸಾರ್ಥಕನಾಗುತ್ತಾನೆ. ಅವನು ಅಲ್ಲಾಹನ ಮುಂದೆ ಸುಳ್ಳುಗಾರನಾಗುವುದಿಲ್ಲ. ಸುಳ್ಳುಗಾರನಾಗುವುದಿಲ್ಲ. ಈ ಸ್ಥಿತಿ ಉಂಟಾದರೆ ತುಂಬಾ ಒಳ್ಳೆಯದು. ಅದು ಸುಳ್ಳಲ್ಲ, ಎಲ್ಲ ಭೌತಿಕ ವಸ್ತುಗಳು ಸುಟ್ಟು ಹೋಗಿವೆ. ಅದರ ಮೇಲೆ ಒಂದು ಮರಣ ಬಂದಂತಾಗಿದೆ. **ಲಾ ಇಲಾಹ ಇಲ್ಲಲ್ಲಾಹ್** ಹೇಳಿರುವುದರಿಂದ ಎಲ್ಲಾ ಭೌತಿಕ ವಸ್ತುಗಳು ಸುಟ್ಟು ಹೋಗಿವೆ. ಕೇವಲ ಅಲ್ಲಾಹನು, ಗುರಿ, ಬಯಕೆ ಮತ್ತು ಪ್ರಿಯತಮ ಆಗಿರುತ್ತಾನೆ ಎಂದು ಉಚ್ಚರಿಸಲ್ಪಡುತ್ತದೆ. ಈ ವಾಕ್ಯದ ಎರಡನೆಯ ಭಾಗ ಒಂದು ಮಾದರಿಯನ್ನು ತೋರಿಸಲಿಕ್ಕೆ ಆಗಿದೆ. ಪ್ರವಾದಿಗಳು ಮಾದರಿಗಳನ್ನು ತೋರಿಸಲು ಆಗಮಿಸುತ್ತಾರೆ. ಹಝ್ರತ್ ಪೈಗಂಬರ್(ಸ) ಎಲ್ಲ ಪ್ರವಾದಿಗಳನ್ನು ಒಳಗೊಂಡ ಪ್ರವಾದಿಯಾಗಿದ್ದರು. ಅವರಲ್ಲಿ ಎಲ್ಲ ಪ್ರವಾದಿಗಳ ಮಾದರಿಗಳು ಒಟ್ಟು ಸೇರಿದ್ದವು. ಅಲ್ಲಾಹನ ಆಜ್ಞೆಗಳ ಪ್ರಕಾರ ಸರಿಯಾಗಿ ನಡೆದದ್ದು ಮತ್ತು ಸರಿಯಾಗಿ ಅವುಗಳನ್ನು ವ್ಯಾಖ್ಯಾನಿಸಿದ್ದು ಹಝ್ರತ್ ಪೈಗಂಬರ್(ಸ) ಅವರೇ ಆಗಿರುವರು. ಅವುಗಳ ಪ್ರಕಾರ ಅವರು ನಡೆದು

ತೋರಿಸಿದರು. (ಮಲ್ಫುಝಾತ್, ಸಂಪುಟ–3, ಪುಟ 82–83, ಸಂಚಿಕೆ 1984)

ವಿಶ್ವಾಸಗಳಿಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಸಾಂಪ್ರದಾಯಿಕ ಬೈಅತ್ತಿನಿಂದ ಪ್ರಯೋಜನವಿಲ್ಲ. ಅಂತಹ ಬೈಅತ್ತಿನಿಂದ ಪ್ರಯೋಜನ ಪಡೆಯುವುದು ಕಷ್ಟಕರ. ತನ್ನ ಅಸ್ತಿತ್ವವನ್ನು ಉಪೇಕ್ಷಿಸಿ ನಿಷ್ಠಾವಂತರಾಗಿಕೊಂಡು ಯಾರನ್ನು ಬೈಅತ್ ಮಾಡಿರುವರೋ ಅವರ ಜೊತೆಗೆ ಆಗುವುದರಿಂದ ಮಾತ್ರ ಬೈಅತ್ ಪ್ರಯೋಜನ ನೀಡುವುದು. ಹೇಳಿದರು. ಹಝ್ರತ್ ಪೈಗಂಬರ್(ಸ) ರೊಡನೆ ಕಪಟ ವಿಶ್ವಾಸಿಗಳು ನಿಷ್ಠೆ ಹೊಂದದಿರುವ ಕಾರಣ ಅವಿಶ್ವಾಸಿಯಾಗಿ ಉಳಿದರು. ಅವರು ನಾಮಮಾತ್ರಕ್ಕಾಗಿ ಬೈಅತ್ ಮಾಡಿದದರು. ಅವರಿಗೆ ನಿಜವಾದ ಪ್ರೀತಿ ಮತ್ತು ನಿಷ್ಠೆ ಇರಲಿಲ್ಲ. ಆದುದರಿಂದ **ಲಾ ಇಲಾಹ ಇಲ್ಲಲ್ಲಾಹ್** ಎಂಬ ಬರೀ ಉಚ್ಚಾರ ಯಾವ ಕೆಲಸಕ್ಕೂ ಬರಲಿಲ್ಲ. ಹೇಳಿದರು. ಸಜ್ಜನರೊಂದಿಗೆ ಸಂಬಂಧ ಬೆಳೆಸುವುದು ಅವಶ್ಯಕವಾಗಿದೆ. ಅವರ ವ್ಯರ್ಥಪಡುವುದು ಅಥವಾ ದೂರು ನೀಡುವುದು ಅನರ್ಥಕವಾಗಿದೆ. ಪ್ರೀತಿ ಹಾಗೂ ನಿಷ್ಠೆಯ ಸಂಬಂಧ ಬೆಳೆಸುವುದು ಅನಿವಾರ್ಯವಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಗುರುವಿನೊಂದಿಗೆ ಸಂಬಂಧ ಹೊಂದಿರಬೇಕು. ಹೇಳಿದರು. ಆತ್ಮವು ದೀರ್ಘಾಯುಸ್ಸಿನ ಭರವಸೆ ನೀಡುತ್ತದೆ. ಮನುಷ್ಯನು ಯೋಚಿಸುವುದು ಇನ್ನೂ ದೀರ್ಘ ಸಮಯವಿದೆ. ಇನ್ನು ನಾನು ಯುವಕನಾಗಿದ್ದಾನೆ, ಇದು ಲೋಪವಾಗಿದೆ, ವಯಸ್ಸಿನ ಯಾವ ಭರವಸೆ ಇಲ್ಲ. ಸಾಧ್ಯವಾದಷ್ಟು ರೀತಿಯಲ್ಲಿ ಮತ್ತು ಆರಾಧನೆಗಳಲ್ಲಿ ಮಾರ್ಗದರ್ಶನ ಸಮಾನವಾದ ವಿಧಾನವನ್ನು ಹೊಂದಿರಬೇಕು. ಮತ್ತು ಹಗಲು ರಾತ್ರಿ ತನ್ನ ಅವಲೋಕನ ನಡೆಸಬೇಕು. (ಮಲ್ಫೂಝಾತ್, ಸಂಪುಟ–1, ಪುಟ–5, ಸಂಚಿಕೆ 1984)

ಎಲ್ಲಿಯುವರೆಗೆ ನಾವು **ಲಾ ಇಲಾಹ ಇಲ್ಲಲ್ಲಾಹ್** ಪ್ರಕಾರ ನಡೆದಿದ್ದೇವೆಯೇ ಎಂದು ನೋಡಬೇಕು. ಇನ್ನೊಂದೆಡೆ **ಲಾ ಇಲಾಹ ಇಲ್ಲಲ್ಲಾಹ್**ವನ್ನು ಮನವರಿಕೆ ಮಾಡಿಕೊಳ್ಳಲು ಮತ್ತು ಅದರ ಹಕ್ಕನ್ನು ಪಾಲಿಸುವತ್ತ ಗಮನ ಸೆಳೆಯುತ್ತಾ ಹೇಳುತ್ತಾರೆ. ಇದರಿಂದ ನನ್ನ ಉದ್ದೇಶ ಮುಸಲ್ಮಾನರು ಆಲಸಿಗಳಾಗಬೇಕೆಂದಿಲ್ಲ. ಕಲಿಮಾ ಓದಿದರೆ ಸಾಕು ಎಂದಲ್ಲ. ಇಸ್ಲಾಮ್ ಯಾರಿಗೂ ಆಲಸಿಯನ್ನಾಗಿ ಮಾಡುವುದಿಲ್ಲ, ಅವರು ವ್ಯಾಪಾರದಲ್ಲಿ ಮತ್ತು ನೌಕರಿಗಳಲ್ಲಿ ನಿರತರಾದರೂ, ಅಲ್ಲಾಹನನ್ನು ಸ್ಮರಿಸದೇ ಇರಲು ಬಯಸುವುದಿಲ್ಲ. ಆದರೆ ಅಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದರ ಕಡೆಗೆ ಗಮನವಿರಬೇಕು. ವ್ಯಾಪಾರ ಮಾಡುವಾಗಲೂ ದೇವ ಭಯ ಇರಬೇಕು. ಎಲ್ಲ ವಿಷಯಗಳಲ್ಲೂ ಧರ್ಮಕ್ಕ ಎಆಧ್ಯತೆ ನೀಡಬೇಕು. ಲೌಕಿಕತೆಯೇ ಪರಮ ಉದ್ದೇಶವಾಗಿರಬಾರದು. ನಿಜವಾದ ಗುರಿ ಧರ್ಮವಾಗಿದ್ದರೆ ಆಗ ಲೌಕಿಕವಾದ ಕೆಲಸಗಳು ಸಹ ಧಾರ್ಮಿಕವಾದ ಕೆಲಸವಾಗುವುವು. ನಮಾಝ್‌ಗಳ ಸಮಯದಲ್ಲಿ ನಮಾಝ್‌ನ್ನು ಬಿಡಬಾರದು. ಯಾವುದೇ ಕಾರ್ಯವಿರಲಿ ಧರ್ಮಕ್ಕೆ ಆಧ್ಯತೆ ನೀಡಬೇಕು. ಧ'ರ್ಮಕ್ಕೆ ಆಧ್ಯತೆನೀಡುವುದು ಅವಶ್ಯಕವಾಗಿದೆ. ಲೌಕಿಕತೆ ಗುರಿಯಾಗಿರಬಾರದು. ಸಹಾಬಿಯುರು ಕೂಡ ಅತೀ ಕಠಿಣವಾದ ಸಮಯದಲ್ಲೂ ಅಲ್ಲಾಹನನ್ನು ಬಿಡಲಿಲ್ಲ. ಅವರು ಅಲ್ಲಾಹನಿಂದ ಮುಖ ತಿರಿಗಿಸಲೂ ಇಲ್ಲ. ನಮಾಝುಗಳನ್ನು ಉಪೇಕ್ಷಿಸಿಯೂ ಇರಲಿಲ್ಲ. ಬದಲಾಗಿ ದುಆಗಳನ್ನು ಮಾಡುತ್ತಿದ್ದರು. ಈಗ ದೌರ್ಭಾಗ್ಯದ ಸಂಗತಿಯೇನೆಂದರೆ, ಎಲ್ಲ ತರಹದ ಕೆಲಸಗಳು ಕೈಗೊಳ್ಳುತ್ತಾರೆ. ದೊಡ್ಡ ದೊಡ್ಡ ಭಾಷಣಗಳನ್ನು ಬೀಗುತ್ತಾರೆ. ಜನರು **ಲಾ ಇಲಾಹ ಇಲ್ಲಲ್ಲಾಹ್** ಬಗ್ಗೆ ಮಾತನಾಡುತ್ತಾರೆ. ಮುಸಲ್ಮಾನರ ಏಳಿಗೆಗಾಗಿ ಸಮ್ಮೇಳನಗಳನ್ನು ಏರ್ಪಡಿಸುತ್ತಾರೆ. ಆದರೆ ಅಲ್ಲಾಹನನ್ನು ಮರೆತುಬಿಡುತ್ತಾರೆ. ಅದರೆಡೆ ಗಮನವೇ ಇರುವುದಿಲ್ಲ. ಇಂತಹದರಲ್ಲಿ ಅವರ ಪ್ರಯತ್ನಗಳು ಸಫಲವೆಂದು ಹೇಗೆ ನಂಬಲು ಸಾಧ್ಯ? ಎಲ್ಲವು ಲೌಕಿಕತೆಗೆ ಸೀಮಿತವಾಗಿರುತ್ತದೆ. ಪ್ರಯತ್ನಗಳನ್ನು ಲೌಕಿಕತೆಗೆ ಮಾಡುತ್ತಿದ್ದಾರೆ. ಆದರೆ ಹೆಸರು ಮಾತ್ರ ಮುಸಲ್ಮಾನರ ಬಳಸುತ್ತಿದ್ದಾರೆ. ಧರ್ಮದ ಹೆಸರು ಬಳಸುತ್ತಿದ್ದಾರೆ.

ಹೇಳಿದರು. ನೆನಪಿಡಿರಿ! ಎಲ್ಲಿಯವರೆಗೆ **ಲಾ ಇಲಾಹ ಇಲ್ಲಲ್ಲಾಹ್** ನಿಮ್ಮ ತನುಮನದಲ್ಲಿ ಸೇರುವುದಿಲ್ಲ. ಅಲ್ಲಿಯತನಕ ಇಸ್ಲಾಮಿನ ಪ್ರಕಾಶ ಮತ್ತು ಅಧಿಕಾರ ಎಂದೂ ಅಭಿವೃದ್ಧಿ ಹೊಂದುವುದಿಲ್ಲ.
(ಮಲ್ಫೂಝಾತ್, ಸಂಪುಟ–2, ಪುಟ 158–159 ಸಂಚಿಕೆ 1984)

ಅಭಿವೃದ್ಧಿ ಹೊಂದಬೇಕಾದರೆ, **ಲಾ ಇಲಾಹ ಇಲ್ಲಲ್ಲಾಹ್** ಅರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ, ಅಲ್ಲಾಹನನ್ನೆ ಗುರಿಯಾಗಿಸಿ ಕೊಂಡಿರಬೇಕಾಗುತ್ತದೆಯೇ ಹೊರತು ಲೌಕಿಕತೆಗೆ ಅಲ್ಲ. ಮತ್ತು ಪವಿತ್ರ ಕಲಿಮದ ಯಥಾರ್ಥತೆ ಹಾಗೂ ಅರ್ಥ ವಿವರಿಸುತ್ತಾ ಯಾವ ರೀತಿ ನಮಗೆ ಮನವರಿಕೆ ಮಾಡಿಕೊಂಡು ನಡೆಯಬೇಕಾಗಿದೆ ಎಂಬುದರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ಹಲವು ಸಲ ಹೇಳಿರುತ್ತೇನೆ. ನೀವು ಕೇವಲ ಮುಸಲ್ಮಾನನೆಂಬ ನೆಲೆಯಲ್ಲಿ ಸಂತೋಷಪಡಬಾರದು ಮತ್ತು ಲಾ ಇಲಾಹ ಇಲ್ಲಲ್ಲಾಹ್‌ವನ್ನು ನಂಬುವವರಾಗಿದ್ದೇವೆ ಎಂದು ಸಂತೋಷಪಡಬಾರದು, ಯಾರು ಖುರ್‌ಆನ್ ಅನ್ನು ಪಠಿಸುತ್ತಾರೆ ಅವರು ಚೆನ್ನಾಗಿ ಬಲ್ಲರು, ಕೇವಲ ಮೌಖಿಕತೆಯಿಂದ ಅಲ್ಲಾಹನು ರಾಜಿ ಆಗುವುದಿಲ್ಲ, ಮತ್ತು ಬರೀ ಮಾತುಗಳಿಂದ ಯಾವ ಸದ್ಗುಣವು ಮನುಷ್ಯನಲ್ಲಿ ಹುಟ್ಟಿ ಬರುವುದಿಲ್ಲ, ನಿಜವಾಗಿಯೂ ಕೃತ್ಯ ರೂಪದಲ್ಲಿ ತರುವವರೆಗೆ, ಮೌಖಿಕ ಮಾತುಗಳು ಯಾವ ಕೆಲಸಕ್ಕೂ ಬಾರದು, ಕರ್ಮವು, ನಡಾವಳಿಕೆಯು ಬೇಕಾಗಿರುತ್ತದೆ. ಕೃತ್ಯರೂಪಕ್ಕೆ ತರದೇ ಏನೂ ಸಿಗುವುದಿಲ್ಲ. ಯಹೂದಿಯರ ಮೇಲೂ ಇಂತಹ ಒಂದು ಕಾಲ ಬಂದಿತ್ತು. ಅವರಲ್ಲಿ ಕೇವಲ ಮಾತುಗಳಿದ್ದವು. ಅದನ್ನೇ ನೆಚ್ಚಿಕೊಂಡಿದ್ದರು. ನಾಲಿಗೆಯಿಂದ ಬಹಳಷ್ಟು ವಾದ ಮಾಡುತ್ತಿದ್ದರು. ಆದರೆ ಹೃದಯದಲ್ಲಿ ನಾನಾ ರೀತಿಯ ದುಷ್ಟ ಭಾವನೆಗಳು, ವೈಷಮ್ಯದಿಂದ ಕೂಡಿರುತ್ತಿದ್ದವು. ಅದೇ ಕಾರಣದಿಂದ ಅಲ್ಲಾಹನು ಅವರ ಮೇಲೆ ನಾನಾ ರೀತಿಯ ಶಿಕ್ಷೆಗಳನ್ನು ಅವತರಿಸಿದನು ಮತ್ತು ಅವರನ್ನು ವಿಭಿನ್ನ ವಿಪತ್ತುಗಳಲ್ಲಿ ಸಿಲುಕಿಸಿದನು ಮತ್ತು ಅವರಿಗೆ ಅಪಮಾನಿತನಾಗಿಸಿದನು. ಎಲ್ಲಿಯವರೆಗೆಂದರೆ ಅವರನ್ನು ಹಂದಿ, ಮಂಗಗಳನ್ನಾಗಿ ಮಾಡಿದನು. ಈಗ ಯೋಚಿಸಬೇಕಾಗಿದೆ. ಅವರೇನು ತೌರಾತನ್ನು ನಂಬುತ್ತಿರಲಿಲ್ಲವೇ? ಅವಶ್ಯವಾಗಿ ನಂಬುತ್ತಿದ್ದರು ಮತ್ತು ಪ್ರವಾದಿಗಳನ್ನೂ ಸಹ ನಂಬುತ್ತಿದ್ದರು. ಆದರೆ ಅಲ್ಲಾಹನು, ಅವರು ನಾಮಮಾತ್ರಕ್ಕಾಗಿ ಧರ್ಮವನ್ನು ಅಂಟಿಕೊಂಡು ನಿಷ್ಠೆಯನ್ನು ಕೈಬಿಟ್ಟಿದ್ದರಿಂದ, ನುಡಿದಂತೆ ನಡೆಯುತ್ತಿರಲಿಲ್ಲ. ಆದ್ದರಿಂದ ಚೆನ್ನಾಗಿ ನೆನಪಿಡಿರಿ. ವ್ಯಕ್ತಿಯೊಬ್ಬ ಕೇವಲ ಬಾಯಿಮಾತಿನಿಂದ ನಾನು ಅಲ್ಲಾಹನೊಂದಿಗೆ ಯಾರನ್ನೂ ಸಹ ಸಹಭಾಗಿಯಾಗಿ ನಂಬುದಿಲ್ಲ ಎಂದು ಹಾಗೂ ಹಝ್ರತ್ ಪೈಗಂಬರ್(ಸ) ಅವರ ಪ್ರವಾದಿತ್ವ ನಂಬುತ್ತೇವೆ ಎಂದು ಹೇಳಬಯಸುವನಾದರೆ, ಕೇವಲ ಮಾತಿಗೆ ಸೀಮಿತವಾಗಿದ್ದೂ ಹೃದಯಪೂರ್ವಕವಾಗಿರದಿದ್ದರೆ ಏನೂ ಪ್ರಯೋಜನವಿಲ್ಲ. ಎಲ್ಲಿಯುವರೆಗೆ ಹೃದಯ ನಿಷ್ಠೆಯಿಂದ ವಿಶ್ವಾಸ ಹೊಂದುವುದಿಲ್ಲ ಮತ್ತು ಕೃತ್ಯರೂಪದಲ್ಲಿ ಅದನ್ನು ಪ್ರಕಟಪಡಿಸುವುದಿಲ್ಲ ಅಲ್ಲಿಯವರೆಗೆ ಏನೂ ಸಾಧ್ಯವಿಲ್ಲ. ಕೃತ್ಯರೂಪವೆಂದರೇನು? ಅದು ಅಲ್ಲಾಹನ ಆದೇಶಗಳನ್ನು ಖುರ್‌ಆನ್‌ನಲ್ಲಿ ಪ್ರಕಟವಾದಂತೆ ಅದರ ರೀತಿಯಲ್ಲಿ ನಡೆಯುವುದಾಗಿದೆ.

ಆ ಬಗ್ಗೆ ವಿವರಣೆ ನೀಡುತ್ತಾ ಹೇಳುತ್ತಾರೆ. ನಾನು ಸತ್ಯವಾಗಿ ಹೇಳುತ್ತೇನೆ. ನಿಜವಾದ ಪದವಿಗಳು ಪಡೆಯಬೇಕಾದರೆ ಎಲ್ಲವು ಬಿಟ್ಟು ಅಲ್ಲಾಹನ ಕಡೆ ತಿರುಗಬೇಕು ಮತ್ತು ವಾಸ್ತವವಾಗಿ ಧರ್ಮಕ್ಕೆ ಲೌಕಿಕತೆಯ ಮೇಲೆ ಆಧ್ಯತೆ ನೀಡಬೇಕು. ಕೇವಲ ಪ್ರತಿಜ್ಞೆಯಿಂದ ಅಲ್ಲ ಕೃತ್ಯರೂಪವಾಗಿ ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆಧ್ಯತೆ ನೀಡಬೇಕಾಗುವುದು. ನೆನಪಿಡಿರಿ. ಮನುಷ್ಯನು ಇತರ ಮನುಷ್ಯರಿಗೆ ಮೋಸಮಾಡಬಾರದು, ಜನರು ಐದು ಸಲ ನಮಾಝು ನಿರ್ವಹಿಸುತ್ತಿರುವುದನ್ನು ನೋಡಿ ಅಥವಾ ಸತ್ಕರ್ಮಗಳನ್ನು ನೋಡಿ ಮೋಸ ಹೋಗಬಹುದು. ಜನರು ಒಬ್ಬನನ್ನು ನಮಾಝ್ ಪ್ರಾಮಾಣಿಕವಾಗಿ ಮಸೀದಿಗೆ ಬಂದು ನಿರ್ವಹಿಸುತ್ತಿರುವುದನ್ನು ಕಾಣುತ್ತಾರೆ. ಚಂದಾ ಕೊಡುವುದನ್ನು ನೋಡುತ್ತಾರೆ. ಸಜ್ಜನವೆಂದು ಭಾವಿಸುತ್ತಾರೆ. ಅದರಿಂದ ಜನರು ಮೋಸ ಹೋಗಬಹುದು. ಆದರೆ ಅಲ್ಲಾಹನು ಮೋಸ ಹೋಗುವುದಿಲ್ಲ. ಆದುದರಿಂದ ಕರ್ಮಗಳಲ್ಲಿ ಒಂದು ವಿಶೇಷ ರೀತಿಯ ನಿಷ್ಠೆ ಇರಬೇಕಾದರೆ, ಅದು ಅಲ್ಲಾಹನಿಗಾಗಿ ಮಾತ್ರ ಗುರಿಯಾಗಿರಿಸಬೇಕಾಗಿದೆ. ಇದರಿಂದ ಸತ್ಕರ್ಮಗಳಲ್ಲಿ ಸಾಮಾರ್ಥ್ಯ ಹಾಗೂ ಸುಂದರತೆ ಬೆಳೆಯುತ್ತದೆ. ಕಲಿಮ ದಿನನಿತ್ಯ ಪಠಿಸುತ್ತೀರಿ, ಅದರ ಅರ್ಥವೇನು? ಅದರ ಅರ್ಥ ಮನುಷ್ಯನು ನಾಲಿಗೆಯಿಂದ ಉಚ್ಚರಿಸುತ್ತಾನೆ ಮತ್ತು ಹೃದಯದಿಂದ ದೃಢೀಕರಿಸುತ್ತಾರೆ. ನನ್ನ ಆರಾಧ್ಯ ಮತ್ತು ನನ್ನ ಪ್ರಿಯತಮ ಅಲ್ಲಾಹನ ಹೊರತು ಯಾರೂ ಇಲ್ಲ. ಮೊದಲೇ ವಿವರಿಸಿದಂತೆ, ಇಲಾಹ ಎಂಬ ಪದವು ಪ್ರಿಯತಮ ಮತ್ತು ನಿಜವಾದ ಗುರಿ ಹಾಗೂ ಆರಾಧ್ಯನಿಗೋಸ್ಕರ ಬರುತ್ತದೆ. ಎಲ್ಲರಿಗಿಂತ ಅಧಿಕ ಪ್ರೀತಿ ಅವನಿಂದ ಮಾತ್ರವಿರಬೇಕು. ಅವನೇ ಗುರಿಯಾಗಿರಬೇಕು. ಅದರ ಹೊರತು ಬೇರೆ ಯಾವ ಉದ್ದೇಶವು ಇರಬಾರದು. ಈ ಕಲಿಮಾ ಪವಿತ್ರ ಖುರ್‌ಆನ್‌ನ ಸಾರಾಂಶವಾಗಿದೆ. ಅದು ಮುಸಲ್ಮಾನರಿಗೆ ಕಲಿಸಲಾಗಿದೆ. ಏಕೆಂದರೆ ಅಷ್ಟೊಂದು ದೊಡ್ಡ ಗ್ರಂಥವನ್ನು ಕಂಠಸ್ತ ಮಾಡುವುದು ಅಷ್ಟೊಂದು ಸುಲಭದ ಮಾತಲ್ಲ. ಇಡೀ ಪವಿತ್ರ ಖುರ್‌ಆನ್ ಕಂಠಸ್ತ ಮಾಡುವುದು ಸುಲಭವಲ್ಲ. ಆದ್ದರಿಂದ ಈ ಕಲಿಮಾವನ್ನು ಕಲಿಸಲಾಗಿದೆ. ಆದ್ದರಿಂದ ಸದಾ ಇಸ್ಲಾಮಿ ಬೋಧನೆಯನ್ನು ಮನುಷ್ಯನು ದೃಷ್ಟಿಯಲ್ಲಿರಿಸಬೇಕು. **ಲಾ ಇಲಾಹ ಇಲ್ಲಲ್ಲಾಹ್** ಅದರ ತಿರುಳಾಗಿದೆ. ಅಲ್ಲಾಹನ ಹೊರತು ಯಾರೂ ಆರಾಧ್ಯನಿಲ್ಲ. ಅವನೇ ನನ್ನ ಗುರಿ, ಅವನೇ ನನ್ನ ಸರ್ವಸ್ವ, ಅವನೇ ನನ್ನ ಪ್ರಿಯತಮ. ಎಲ್ಲಿಯುವರೆಗೆ ಈ ವಾಸ್ತವ ಮನುಷ್ಯನ ಮನಸ್ಸಿನಲ್ಲಿ

ಅಚ್ಚಾಗುವುದಿಲ್ಲ, ಮೋಕ್ಷ ದೊರೆಯದು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಹೇಳಿದರು. **“ಮನ್ ಖಾಲ ಲಾ ಇಲಾಹ ಇಲ್ಲಲ್ಲಾಹ್ ದಖಲಲ್ ಜನ್ನತ”** ಎಂದರೆ ಯಾರು ನಿಷ್ಠಾವಂತ ಹೃದಯದಿಂದ ಲಾ ಇಲಾಹ ಇಲ್ಲಲ್ಲಾಹ್ ಎನ್ನುವರೋ ಅವರು ಸ್ವರ್ಗಕ್ಕೆ ಪ್ರವೇಶಿಸುವರು. ಅದನ್ನು ವ್ಯಾಖ್ಯಾನಿಸುತ್ತಾ ಮಸೀಹ್(ಅ) ಹೇಳಿದರು. ಯಾರಾದರೂ ಗಿಳಿಯಂತೆ ಕೇವಲ ಪದಗಳನ್ನು ಪಠಿಸಿ ತಾನು ಸ್ವರ್ಗ ಪ್ರವೇಶಿಸುವೆನು ಎಂದು ಭಾವಿಸಿದರೆ, ಹಾಗೂ ಅದೇ ವಾಸ್ತವವಾದರೆ, ಯಾವುದೇ ಸತ್ಕರ್ಮಗಳಿಗೆ ಅರ್ಥವಿರುತ್ತಿರಲಿಲ್ಲ. ಕೇವಲ **ಲಾ ಇಲಾಹ ಇಲ್ಲಲ್ಲಾಹ್** ಉಚ್ಚರಿಸಿ ಸ್ವರ್ಗ ಪ್ರವೇಶಿಸಿದರೆ ಬಾಕಿ ಎಲ್ಲಾ ಸತ್ಕರ್ಮ ವ್ಯರ್ಥವಾಗಿದ್ದರೆ ಪವಿತ್ರ ಖುರ್‌ಆನ್‌ನಲ್ಲಿ ಎಷ್ಟೆಲ್ಲ ದೊಡ್ಡ ದೊಡ್ಡ ಆದೇಶಗಳಿವೆಯೋ ಅದರ ಅಗತ್ಯವೇನಿತ್ತು? ಅಲ್ಲಾಹನ ಅಭಯ ಶರೀಅತ್ ಅರ್ಥಹೀನವಾಗುತಿತ್ತು. ಬದಲು ಅದರ ವಾಸ್ತವ ಭಾವವೇನೆಂದರೆ ಅದು ಮನುಷ್ಯನ ಹೃದಯದಲ್ಲಿ ನಾಟಿರಬೇಕು. ಈ ಅವಸ್ಥೆಗೆ ತಲುಪಿದರೆ ಇಂತಹ ಮನುಷ್ಯನು ಸ್ವರ್ಗಕ್ಕೆ ಪ್ರವೇಶಿಸುತ್ತಾನೆ. **ಲಾ ಇಲಾಹ ಇಲ್ಲಲ್ಲಾಹ್** ವಾಸ್ತವವನ್ನು ಅರಿತುಕೊಂಡಾಗ ಮಾತ್ರ ಸ್ವರ್ಗಕ್ಕೆ ಪ್ರವೇಶಿಸುತ್ತಾನೆ. ಕೇವಲ ಮರಣ ಹೊಂದಿದ ಮೇಲೆ ಅಲ್ಲ. ಬದಲು ಇಡೀ ಜೀವನದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ. ಇನ್ನೊಂದೆಡೆ ಮಸೀಹ್(ಅ) ಹೇಳಿದರು. ಒಂದು ಪತ್ರಿಕೆ ಅದನ್ನು ಹೆಚ್ಚು ವಿವರಿಸಿ ಹೀಗೆ ಬರೆಯಿತು. ಮಸೀಹ್(ಅ) ಹೇಳಿದರು. ಅಲ್ಲಾಹನು ಪದಗಳೊಂದಿಗೆ ಸಂಬಂಧ ಹೊಂದುವುದಿಲ್ಲ. ಬದಲು ಹೃದಯದೊಂದಿಗೆ ಸಂಬಂಧ ಹೊಂದುತ್ತಾನೆ.

ಅದರ ಅರ್ಥವೇನೆಂದರೆ ಯಾರು ನಿಜವಾದ ಅರ್ಥದಲ್ಲಿ ಈ ಕಲಿಮಾವನ್ನು ತನ್ನ ಹೃದಯದಲ್ಲಿ ಸೇರಿಸಿಕೊಳ್ಳುತ್ತಾರೆ. ಅಲ್ಲಾಹನ ಗೌರವ ಅವರ ಮನಸ್ಸುಗಳಲ್ಲಿ ಆಲವಾಗಿ ಬೇರೂರುತ್ತದೆ ಅವರು ಸ್ವರ್ಗವನ್ನು ಪ್ರವೇಶಿಸುತ್ತಾರೆ. ಒಬ್ಬ ವ್ಯಕ್ತಿಯು ನಿಷ್ಠಾವಂತ ಮನಸ್ಸಿನಿಂದ ಕಲಿಮಾವನ್ನು ನಂಬುತ್ತಾನೋ, ಅವನಿಗೆ ಅಲ್ಲಾಹನ ಹೊರತು ಯಾರೂ ಸಹ ಪ್ರಿಯರಾಗಿ ಇರುವುದಿಲ್ಲ. ನಿಜವಾಗಿ ಕಲಿಮ ಪಠಿಸಿದವನು ಅಲ್ಲಾಹನ ಹೊರತು ಬೇರೆ ಯಾರನ್ನೂ ಪ್ರೀತಿಸುವುದಿಲ್ಲ! ಅಲ್ಲಾಹನ ಹೊರತು ಅವನಿಗೆ ಯಾರೂ ಆರಾಧ್ಯನಾಗಿರುವುದಿಲ್ಲ, ಯಾವ ವ್ಯಕ್ತಿಯು ಅವನಿಗೆ ರುಚಿಸುವುದಿಲ್ಲ. ಅಲ್ಲಾಹನ ಹೊರತು ಯಾರೂ ಗುರಿಯಾಗಿರುವುದಿಲ್ಲ. ಅವನು ಅವನ ಹೊರತು ಏನೂ ಬೇಡುವುದಿಲ್ಲ. ಅವನು ಕೇವಲ ಅಲ್ಲಾಹನ ಸಂಪ್ರೀತಿ ಬಯಸುವನು. ಅದುವೇ ಅಬ್ದಾಲ್‌ಗಳ ಸ್ಥನವಾಗಿದೆ. ಖುತುಬರ ಸ್ಥಾನವಾಗಿದೆ. ಮತ್ತು ಗೌಸ್‌ರ ಸ್ಥಾನವಾಗಿದೆ. ಅದಕ್ಕೆ ಕಾರಣ ಇದೇ ಕಲಿಮ ‘ಲಾ ಇಲಾಹ ಇಲ್ಲಲ್ಲಾಹ ವನ್ನು ಮನಪೂರ್ವಕವಾಗಿ ನಂಬುವುದು ಮತ್ತು ಅದರಂತೆ ನಡೆದುಕೊಳ್ಳುವುದರಲ್ಲಿ ಇದೆ.

ಒಟ್ಟಿನಲ್ಲಿ ಅದೇ ವಿಷಯ ಮುಂದುವರೆಸುತ್ತಾ ಹೇಳಿದರು. ಇದು ಸತ್ಯವಾದ ಮಾತಾಗಿದೆ. ಮತ್ತು ಮನವರಿಕೆಯಾಗುವ ಮಾತಾಗಿದೆ. ಅಲ್ಲಾಹನ ಹೊರತು ಮನುಷ್ಯನಿಗೆ ಯಾರೂ ಪ್ರಿಯರು ಇಲ್ಲದಿದ್ದಾಗ, ಗುರಿ ಇಲ್ಲದಿದ್ದಾಗ ಯಾವ ದುಃಖವಾಗಲಿ ಕಷ್ಟವಾಗಲಿ ಬರಲಿಕ್ಕೆ ಸಾಧ್ಯವೇ ಇಲ್ಲ.

ಮನುಷ್ಯನು ಇವೆಲ್ಲ ಕಷ್ಟಗಳು ಸಹ ಅಲ್ಲಾಹನಿಗೋಸ್ಕರ ಇದೆ ಎಂದು ಭಾವಿಸಿದರೆ, ಅವನಿಗೆ ಯಾರೂ ಸಹ ದುಃಖ ನೀಡಲಾರರು. ಈ ಕಷ್ಟಗಳಿಂದ ಹೆದರುವುದಿಲ್ಲ. ಅವನಿಗೆ ತಿಳಿದಿರುತ್ತದೆ. ಅಲ್ಲಾಹನು ನನಗೆ ಸಹಾಯ ಮಾಡುವನು ಮತ್ತು ಎಷ್ಟೇ ಸಮಯಗಳಲ್ಲಿ ಅವನನ್ನು ಅಲ್ಲಾಹನು ಸಮಾಧಾನ ನೀಡುವನು.

ಹೇಳಿದರು. ಇದು ಅಬ್ದಾಲ್ ಮತ್ತು ಖುತುಬರಿಗೆ ದೊರೆಯುವ ಸ್ಥಾನಮಾನವಾಗಿದೆ. ಅಲ್ಲಾಹನು ಗುರಿಯೊಂದಿಗೆ, ಅವನನ್ನು ಪಡೆಯುವುದೇ ಉದ್ದೇಶವಾಗಿದ್ದರೆ ಲೋಕದ ಯಾವ ವಿಷಯದ ಬಗ್ಗೆಯೂ ಚಿಂತೆಯಿರುವುದಿಲ್ಲ. ಸಹಾಬರು ಈ ಭೇದ ತಿಳಿದಿದ್ದರು. ಇದು ಕೇವಲ ಖುತುಬರಿಗೆ, ಅಬ್ದಾಲ್‌ಗಳಿಗೆ, ಮತ್ತು ವಿಶೇಷ ಜನರಿಗೆ ಲಭಿಸುವುದು ಎಂದೇನಲ್ಲ. ಸಹಾಬರಲ್ಲಿ ಹಲವರಿಗೆ ಈ ಸ್ಥಾನ ದೊರೆತಿದೆ. ಅವರು ಈ ಬೋಧನೆಯನ್ನು ಅರಿತುಕೊಂಡರು. ಆದ್ದರಿಂದ ಅಲ್ಲಾಹನು ಸಹಾಬರನ್ನು ನಮಗೆ ಮಾದರಿಯನ್ನಾಗಿ ಮಾಡಿದನು.

ಮತ್ತು ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ: “ನಾವೇನು ವಿಗ್ರಹಾರಾಧನೆ ಮಾಡುವರೇ ಎಂದು ಭಾವಿಸಬೇಡಿ ಸಾಮಾನ್ಯ ಜನವರಿಗೆ ಸಹ ಇದಾದ ನಂತರ ಹೇಳಲಾಗಿದೆ. ನಾವು ವಿಗ್ರಹಾರಾಧನೆ ಮಾಡುವವರಲ್ಲ, ಅಷ್ಟೇ ನಮಗೆ ಸಾಕಾಗಿದೆ. “ನಾವು ಸಹ ಅಲ್ಲಾಹನ ಆರಾಧನೆ ಮಾಡುತ್ತಿದ್ದೇನೆ.” ನೀವು, ಇಷ್ಟು ಹೇಳಿದರೆ ಸಾಕೇ! ಇದು ಕನಿಷ್ಟ ರೀತಿಯ ಮಾತಾಗಿದೆ. ಮನುಷ್ಯನು ವಿಗ್ರಹಾರಾಧನೆ ಮಾಡದಿರುವುದು. ಹಿಂದೂ ಜನರು ಈ ಬಗ್ಗೆ ಸಾಕ್ಷ್ಯಗಳು ಏನೂ ಇಲ್ಲದಿದ್ದರೂ ವಿಗ್ರಹಾರಾಧನೆ ಬಿಡುತ್ತಿದ್ದಾರೆ ಎಂದರೆ ಏಕದೇವತ್ವವೇ ಯಥಾರ್ಥತೆ ಅವರು ತಿಳಿದಿದ್ದಾರೆ ಎಂದಲ್ಲ. ಆದರು ಅವರು ವಿಗ್ರಹಾರಾಧನೆ ಬಿಡುತ್ತಿದ್ದಾರೆ. ಆರಾಧನೆಯ ಅರ್ಥ ವಿಗ್ರಹಾರಾಧನೆ ಬಿಡುವುದಕ್ಕೆ ಅಲ್ಲ, ಮನುಷ್ಯ ಮನುಷ್ಯನಿಗೆ ಪೂಜಿಸಬಾರದು. ಅಥವಾ ವಿಗ್ರಹಗಳಿಗೆ ಪೂಜಿಸಬಾರದು. ಇದರ ಹೊರತು ಇನ್ನು ಆರಾಧನೆಗಳಿವೆ. ಕೇವಲ ಈ ಬಹಿರಂಗವಾಗಿ ಕಾಣುವ ಆರಾಧ್ಯಗಳಲ್ಲದೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಪ್ರಸ್ತಾಪ ಮಾಡಿರುವನು. ಆತ್ಮದ ಪ್ರಲೋಭನೆಗಳು ಸಹ ಆರಾಧನೆಗಳಾಗಿವೆ. ಆತ್ಮದ ದುರಾಸೆಗಳು, ಆರಾಧ್ಯವಾಗಿ ಬಿಡುತ್ತವೆ. ಅಲ್ಲಾಹನೊಂದಿಗೆ ಸಮಾನ ಶಕ್ತಿಯ ಪರಿಗಣಿಸಿಕೊಂಡರೆ, **ಲಾ ಇಲಾಹ ಇಲ್ಲಲ್ಲಾಹ**ದಿಂದ ದೂರ ಹೋದರೆ, ಯಾವ ವ್ಯಕ್ತಿ ಆತ್ಮ ಪ್ರಲೋಭನೆಗಳಿಗೆ ಗುರಿಯಾಗುತ್ತಾನೋ ಅಥವಾ ತನ್ನ ಆತ್ಮತೃಪ್ತಿಯೇ ಎಲ್ಲ ಅಂದುಕೊಂಡು ಅನುಸರಣೆ ಮಾಡುತ್ತಾನೋ ಅದರಲ್ಲಿಯೇ ಜೀವನ ಕಳೆಯುತ್ತಾನೋ, ಅವನೂ ಸಹ ಮುಶ್ರಿಕ್ ಆಗಿರುತ್ತಾನೆ. ಲಾ ಎಂಬುದು ಕೇವಲ ಭೌತಿಕ ಆರಾಧನೆಯನ್ನು ತಳ್ಳಿಹಾಕುವುದಿಲ್ಲ. ಬದಲು ಎಲ್ಲ ರೀತಿಯ ಆರಾಧನೆಗಳನ್ನು ಅಲ್ಲಗಳೆಯುತ್ತದೆ. ಅಲ್ಲಾಹನ ಎದುರಿಗೆ ಯಾವ ವಸ್ತು, ಯಾರು ಬಂದರೂ ಅದನ್ನು ಒಪ್ಪುವುದಿಲ್ಲ. ಆದ್ದರಿಂದ ಇದು ಎಲ್ಲ ರೀತಿಯ ಆರಾಧನೆಗಳನ್ನು ಅಲ್ಲಗಳೆಯುತ್ತದೆ. ಅದು ಆತ್ಮಸಂಬಂಧಿಯಾಗಲಿ ಅಥವಾ ಬಾಹ್ಯ ಸಂಬಂಧಿಯಾಗಲಿ. ಆಂತರಿಕ ಮತ್ತು ಭೌತಿಕವಾಗಿರಲಿ ಅಥವಾ ಬಾಹ್ಯ ಹಾಗೂ ಲೌಕಿಕವಾಗಿರಲಿ. ಅದು ಮನದಲ್ಲಿ ಅಡಗಿಕೊಂಡಿರುವುದಾಗಲಿ ಅಥವಾ ಬಹಿರಂಗ ರೂಪದ್ದಾಗಲಿ ಅವೆಲ್ಲಾ ವಿಗ್ರಹಗಳೇ ಆಗಿವೆ. ಉದಾಹರಣೆಗೆ ಒಬ್ಬ ವ್ಯಕ್ತಿ ಸೃಷ್ಟಿಯ ಮೇಲೆ ಅವಲಂಬಿತನಾದರೆ, ಅದರ ಮೇಲೆಯೇ ಸಂಪೂರ್ಣ ಭರವಸೆ ಹೊಂದಿದರೆ, ಇದು ಸಹ ಒಂದು ರೀತಿಯ ಶಿರ್ಕ್ ಆಗಿದೆ. ಈ ರೀತಿಯ ಶಿರ್ಕ್ ಕ್ಷಯ ರೋಗದಂತಿದೆ. ಕ್ಷಯರೋಗವು ಒಳಗೊಳಗೆಯೇ ನಾಶಕ್ಕೆ ನಾಂದಿ ಹಾಡುತ್ತದೆ. ಬಹಿರಂಗವಾಗಿ ಕಾಣುವ ವಿಗ್ರಹಗಳು ಸುಲಭದಲ್ಲಿ ಗುರುತಿಸಬಹುದಾಗಿದೆ. ಅದರಿಂದ ಬಿಡಿಸಿಕೊಳ್ಳುವುದು ಸಹ ಸುಲಭವಾಗಿದೆ. ನಾನು ನೋಡುತ್ತಿದ್ದೇನೆ. ಸಾವಿರಾರು, ಲಕ್ಷೋಪ ಲಕ್ಷ ಜನರು ಅದನ್ನು ಬಿಟ್ಟಿದ್ದಾರೆ ಮತ್ತು ಬದುಕುತ್ತಿದ್ದಾರೆ. ಈ ದೇಶ ಹಿಂದುಗಳಿಂದಲೇ ತುಂಬಿ ಹೋಗಿತ್ತು. ಆದರೆ ಇಲ್ಲಿನ ಎಲ್ಲ ಮುಸಲ್ಮಾನರು ಅವರಿಂದಲೇ ಬಂದವರಲ್ಲವೇ? ಈ ಮುಸಲ್ಮಾನರಾದವರು, ಸಹ ವಿಗ್ರಹಧಾರಿಗಳಾಗಿದ್ದರು ಮತ್ತು ಅವರು ವಿಗ್ರಹಾರಾಧನೆ ತ್ಯಜಿಸಿದರಲ್ಲವೇ? ಸ್ವಯಂ ಹಿಂದುಗಳಲ್ಲಿ ವಿಗ್ರಹಾರಾಧನೆ ಮಾಡದ ಪಂಥಗಳಿವೆ. ಮೊದಲೇ ಇದರ ವಿವರಣೆ ನೀಡಿ ಆಗಿದೆ. ಅವರು ಈಗ ವಿಗ್ರಹ ಪೂಜೆ ಮಾಡುವುದಿಲ್ಲ.

ಆದರೆ ವಿಗ್ರಹಪೂಜೆಯ ವಿಷಯ ಇಷ್ಟಕ್ಕೆ ಸೀಮಿತವಲ್ಲ. ಬಹಿರಂಗ ವಿಗ್ರಹಪೂಜೆ ಬಿಟ್ಟಿದ್ದಾರೆ ನಿಜ. ಆದರೆ ಇನ್ನೂ ಸಾವಿರಾರು ವಿಗ್ರಹಗಳು ಮನುಷ್ಯನು ತನ್ನ ಅಂತರಂಗದಲ್ಲಿ ಇಟ್ಟುಕೊಂಡು ತಿರುಗಾಡುತ್ತಿದ್ದಾನೆ. ಜ್ಞಾನಿಗಳೂ, ತತ್ವಜ್ಞಾನಿ ಆದವರು ಸಹ ಅದನ್ನು ಬಿಡಲು ಸಾಧ್ಯವಾಗುತ್ತಿಲ್ಲ. ತನ್ನ ಜ್ಞಾನದ ಅಹಂಕಾರ ಅವರಲ್ಲಿದೆ. ಅವರದದೇ ದೃಷ್ಟಿಕೋನಗಳಿವೆ. ಅದುವೆ ಅವರ ವಿಗ್ರಹಗಳಾಗಿವೆ. ಅದು ಅವರಿಂದ ಬಿಡಲು ಸಾಧ್ಯವಿಲ್ಲ. ಹೇಳಿದರು. ವಾಸ್ತವವೇನೆಂದರೆ ಅಲ್ಲಾಹನ ಅನುಗ್ರಹವಿಲ್ಲದೇ ಈ ಹುಳಗಳು ಒಳಗಿನಿಂದ ಹೊರಬರಲು ಸಾಧ್ಯವಿಲ್ಲ. ಇವು ಬಹಳ ಸೂಕ್ಷ್ಮ ಹುಳಗಳಾಗಿವೆ. ಹೆಚ್ಚು ಅತಿ ಹೆಚ್ಚು ಹಾನಿ ಇದರಿಂದಲೇ ಆಗುತ್ತದೆ. ಯಾವ ಜನರು ಆತ್ಮ ಪ್ರಲೋಭನೆಗಳಿಗೆ ಗುರಿಯಾಗಿ ಅಲ್ಲಾಹನ ಹಕ್ಕುಗಳ ಪರಿಧಿಯಿಂದ ದೂರಹೋಗುತ್ತಾರೆ ಮತ್ತು ಸೃಷ್ಟಿಯ ಹಕ್ಕುಗಳನ್ನು ಸಹ ದಮನ ಮಾಡುತ್ತಾರೆ. ಅವರೇನು ಓದಿಲ್ಲದವರಲ್ಲವೇ, ಅವರು ವಿದ್ಯಾವಂತರೇ ಆಗಿದ್ದಾರೆ. ಬದಲು ಅವರಲ್ಲಿ ಸಾವಿರಾರು ಜನರು ಮೌಲ್ವಿ ಫಾಝಿಲ್, ವಿದ್ವಾಂಸರು ಅಂದುಕೊಳ್ಳುತ್ತಾರೆ. ಆದರೆ ಅವರು ಸಹ ಈ ವಿಷಯದಲ್ಲಿ, ಈ ರೋಗದಲಿ ಶಾಮೀಲಾಗಿದ್ದಾರೆ. ಜನರ ಹಕ್ಕುಗಳನ್ನು ಪಾಲಿಸುವವರಲ್ಲವಾದರೆ, ಆಗಲೂ **ಲಾ ಇಲಾಹ ಇಲ್ಲಲ್ಲಾಹ್**‌ನ ಸಾರವನ್ನು ಮರೆತಂತೆಯೇ. ಈ ವಿಗ್ರಹಗಳಿಂದ ದೂರವಿರುವುದೇ ಶೌರ್ಯವಾಗಿದೆ. ಬಹಳಷ್ಟು ಜನರಿಗೆ ನೀವು ದೊಡ್ಡವರೆಂದು ಭಾವಿಸುತ್ತೀರಿ. ಸಜ್ಜನರೆಂದು ಭಾವಿಸುತ್ತೀರಿ. ಆದರೆ ಇವರಲ್ಲಿಯೂ ಅವರ ಒಳಗೂ ವಿಗ್ರಹಗಳಿವೆ. ಈ ವಿಗ್ರಹಗಳಿಂದ ರಕ್ಷಣೆ ಪಡೆಯುವುದು ಶೌರ್ಯವಾಗಿದೆ. ಪರಿಪೂರ್ಣ ರೀತಿಯಲ್ಲಿ ಅಲ್ಲಾಹನ ಹಕ್ಕುಗಳನ್ನು ಪರಿಪಾಲಿಸುವುದು, ಪರಿಪೂರ್ಣ ರೀತಿಯಲ್ಲಿ ಅನೇಕ ದಾಸರ ಹಕ್ಕುಗಳನ್ನು ಪಾಲಿಸಿದರೆ ಆಗ ಮಾತ್ರ ಲಾ ಇಲಾಹ ಇಲ್ಲಲ್ಲಾಹದ ಸರಿಯಾದ ಅರ್ಥ ತಿಳಿದವರು ಎನ್ನಬಹುದು ಮತ್ತು ಅದೇ ಶೌರ್ಯತನವಾಗಿದೆ. ಅವರನ್ನು ಗುರುತಿಸುವುದೇ ಮಹಾನತೆ ಹಾಗೂ ಬುದ್ಧಿವಂತಿಕೆಯಾಗಿದೆ.

ಇವೇ ವಿಗ್ರಹಗಳಾಗಿವೆ. ಅದರಿಂದಲೇ ಪರಸ್ಪರ ಕಪಟತೆ ಉಂಟಾಗುತ್ತದೆ. ಮತ್ತು ರಕ್ತಪಾತಗಳಾಗುತ್ತವೆ. ಒಬ್ಬ ಸಹೋದರ ಇನ್ನೊಬ್ಬ ಸಹೋದರನ ಹಕ್ಕನ್ನು ದಮನಿಸುತ್ತಾನೆ. ಹೀಗೆ ಸಾವಿರ ರೀತಿಯ

ದುಷ್ಕರ್ಮಗಳು ಹುಟ್ಟಲು ಕಾರಣವಾಗುತ್ತದೆ. ಪ್ರತಿದಿನ ಪ್ರತಿ ಸಮಯ ಇದು ಜಾರಿಯಲ್ಲಿರುತ್ತದೆ ಮತ್ತು ಬಾಹ್ಯ ಸಾಧನೆಗಳ ಮೇಲೆ ಎಷ್ಟೊಂದು ಭರವಸೆ ಹೊಂದಿರುತ್ತದೆ ಎಂದರೆ, ಅಲ್ಲಾಹನು ಒಂದು ವಸ್ತುವಾಗಿ ಉಳಿಯುವಂತಾಗುತ್ತದೆ. ಏಕದೇವತ್ವದ ಯಥಾರ್ಥತೆ ತಿಳಿದವರು ಬಹಳ ಕಡಿಮೆ ಜನರಿದ್ದಾರೆ. ಹೇಳಿದರೆ ಅವರು ಉತ್ತರ ಕೊಡುವರು. ನಾವೇನು ಮುಸಲ್ಮಾನರಲ್ಲವೇ? ಕಲಿಮಾ ಪಠಿಸುವುದಿಲ್ಲವೇ? ವಿಷಾದದ ಸಂಗತಿಯೇನೆಂದರೆ ಅವರು ಬಾಯಿಂದ ಕಲಿಮ ಉಚ್ಚರಿಸುವುದಷ್ಟೇ ಸಾಕೆಂದು ತಿಳಿದುಕೊಂಡಿದ್ದಾರೆ. ನಾನು ದೃಢವಾಗಿ ನಂಬಿದ್ದೇನೆ. ಮನುಷ್ಯನು ಕಲಿಮದ ನೈಜತೆಯನ್ನು ಮನವರಿಕೆ ಮಾಡಿದರೆ ಮತ್ತು ಕೃತ್ಯರೂಪದಲ್ಲಿ ಅದರ ಪ್ರಕಾರ ನಡೆದರೆ ಬಹಳ ಹಿರಿದಾದ ಅಭಿವೃದ್ಧಿಯನ್ನು ಗಳಿಸಲು ಸಾಧ್ಯ. ಹಾಗೂ ಅಲ್ಲಾಹನ ಅತ್ಯಂತ ಆಶ್ಚರ್ಯಕರವದ ಶಕ್ತಿ ಪ್ರಕಟಣೆಗಳನ್ನು ನೋಡಲು ಅವರಿಗೆ ಸಾಧ್ಯವಾಗುವುದು.

ಈ ಮಾತನ್ನು ಸರಿಯಾಗಿ ಮನದಟ್ಟು ಮಾಡಿಕೊಳ್ಳಿ. ನಾನು ಪಡೆದಿರುವ ಪದವಿ ಕೇವಲ ಸಾಧಾರಣ ಮೌಲ್ವಿಯ ಪದವಿ ಅಲ್ಲ. ನಾನೇನು ಇಲ್ಲಿ ಕಥೆಗಳನ್ನು ಹೇಳಲು ಬಂದು ನಿಂತಿಲ್ಲ. ಬದಲು ನಾನು ಸತ್ಯಸಾಕ್ಷ್ಯಗಳನ್ನು ಬಹಿರಂಗಪಡಿಸಲು ನಿಂತಿರುವೆನು. ನನಗೆ ಅಲ್ಲಾಹನು ತಲುಪಿಸಿದ ಸಂದೇಶ ನಿಮಗೆ ತಲುಪಿಸಬೇಕಾಗಿದೆ. ಯಾರು ಇದನ್ನು ಕೇಳುವನು? ಯಾರೂ ಇಲ್ಲ, ಯಾರು ಇದನ್ನು ಮನ್ನಿಸುವನು? ಯಾರೂ ಮನ್ನಿಸುವುದಿಲ್ಲ. ಅದರ ಪರವೇ ನನಗಿಲ್ಲ. ಏಕೆಂದರೆ ಅದಕ್ಕೆ ಸ್ವಯಂ ನೀವೇ ಉತ್ತರದಾಯಿಗಳಾಗುವಿರಿ. ನಾನು ನನ್ನ ಕರ್ತವ್ಯವನ್ನು ಈಡೇರಿಸಿದ್ದೇನೆ. ನಾನು ಬಲ್ಲೆನು ಹಲವು ಜನರು ನನ್ನ ಜಮಾಅತಿಗೆ ಸೇರಿದವರಾಗಿದ್ದಾರೆ. ಅವರು ಏಕದೇವತ್ವದ ಉಚ್ಚರವನ್ನು ಮಾಡುತ್ತಾರೆ. ಆದರೆ ನಾನು ವಿಷಾದಪೂರ್ವಕವಾಗಿ ಹೇಳುತ್ತೇನೆ. ಅವರು ನಂಬುವುದಿಲ್ಲ.

ಯಾವ ವ್ಯಕ್ತಿ ತನ್ನ ಸಹೋದರನ ಹಕ್ಕನ್ನು ದಮನಿಸುವನೋ, ವಂಚಿಸುವನೋ, ಅಥವಾ ಇನ್ನಿತರ ದುಷ್ಕರ್ಮಗಳಿಂದ ದೂರವಿರುವುದಿಲ್ಲವೋ, ನಾನು ಅವನ ವಿಶ್ವಾಸ ಏಕದೇವನ ಮೇಲೆ ಇದೆ ಎಂದು ನಂಬುವುದಿಲ್ಲ. ಏಕೆಂದರೆ ಇದೊಂದು ಎಂತಹ ಅನುಗ್ರಹವಾಗಿದೆ ಎಂದರೆ ಅದನ್ನು ಪಡೆದ ನಂತರ ಮನುಷ್ಯರಲ್ಲಿ ಅನೋನ್ಯವಾದ ಪರಿವರ್ತನೆ ಅವನಲ್ಲಿ ಉಂಟಾಗುತ್ತದೆ.

ಏಕದೇವನ ಮೇಲೆ ವಿಶ್ವಾಸ ಹೊಂದಿದವನಲ್ಲಿ ಒಂದು ಪರಿವರ್ತನೆ ಉಂಟಾಗುತ್ತದೆ. ಅವನಲ್ಲಿ ಕಪಟ, ದ್ವೇಷ, ಮತ್ಸರ ಇತ್ಯಾದಿ ವಿಗ್ರಹಗಳಿರುವುದಿಲ್ಲ. ಮತ್ತು ಅವನು ಅಲ್ಲಾಹನ ಸಾಮೀಪ್ಯ ಪಡೆಯುವವನಾಗುತ್ತಾನೆ.

ಈ ಪರಿವರ್ತನೆ ಬರಲು, ನಿಜವಾದ ಏಕದೇವ ವಿಶ್ವಾಸಿಯಾಗಲು ತನ್ನ ಅಂತರಂಗದ ಅಹಂಕಾರಿ ರೂಪದ ವಿಗ್ರಹಗಳು, ಕಪಟ, ಡೋಂಗಿತನ, ದ್ವೇಷ, ಮೋಸಗಾರಿಕೆ, ಶತ್ರುತನ ಒಟ್ಟು ಸಕಲ ಪಾಪಗಳಿಂದ ದೂರವಿದ್ದರೆ ಮಾತ್ರ ನಿಜವಾದ ಏಕದೇವ ವಿಶ್ವಾಸಿಯಾಗಲು ಸಾಧ್ಯ. ಇವೆಲ್ಲ ಪಾಪಗಳು ಒಳಗೊಂಡರೆ ಬರೀ **ಲಾ ಇಲಾಹ ಇಲ್ಲಲ್ಲಾಹ್** ಎಂದು ಬಾಯಿಮಾತ್ರಕ್ಕೆ ಉಚ್ಚರಿಸಿದರೆ ಹೇಗೆ ಸತ್ಯವಿಶ್ವಾಸಿಯಾಗಲು ಸಾಧ್ಯ? ಆದ್ದರಿಂದ **ಲಾ ಇಲಾಹ ಇಲ್ಲಲಾಹ**ದಲ್ಲಿ ಸರಿಯಾದ ರೀತಿಯಲ್ಲಿ ವಿಶ್ವಾಸ ಹೊಂದಲು ನಮ್ಮಲ್ಲಿ ಪ್ರತಿಯೊಬ್ಬರೂ ಈ ರಂಝಾನಿನಲ್ಲಿ ಪ್ರಯತಿಸಬೇಕು. ಏಕೆಂದರೆ ಇದರಲ್ಲಿ ಭರವಸೆಯನ್ನು ತಳ್ಳಿ ಹಾಕಿದಂತಾಗುತ್ತದೆ. ಅಂದಹಾಗೆ ಇದೊಂದು ದೃಢವಾದ ಮಾತಾಗಿದೆ. ಕೇವಲ ಬಾಯಿ ಮಾತಿನಿಂದ ನಾನು ಅಲ್ಲಾಹನನ್ನು **"ವಹದಹು ಲಾ ಶರೀಕಲಹು"** (ಯಾರನ್ನು ಅವನ ಸಹಭಾಗಿ ಎಂದು ನಂಬುವುದಿಲ್ಲ) ಎಂದು ಉಚ್ಚರಿಸಿದರೆ ಏನೂ ಪ್ರಯೋಜನವಿಲ್ಲ. ಒಂದೆಡೆ ಕೇವಲ ಬಾಯಿಂದ ಕಲಿಮ ಉಚ್ಚರಿಸುತ್ತಾನೆ. ಕ್ಷಣ ಮಾತ್ರದಲ್ಲಿ ಅವನ ಇಚ್ಛೆಗೆ ವಿರುದ್ಧವಾದ ಮಾತು ಎಂದರೆ ಕ್ರೋಧ ಮತ್ತು ಕಪಟತನವನ್ನು ತನ್ನ ದೇವನನ್ನಾಗಿ ಮಾಡಿಕೊಂಡ. ನಾನು ಮತ್ತೆ ಮತ್ತೆ ಹೇಳುವೆನು. ಈ ಮಾತನ್ನು ಸದಾ ನೆನಪಿಡಿರಿ, ಎಲ್ಲಿಯುವರೆಗೆ ಈ ಗೌಪ್ಯವಾದ ವಿಗ್ರಹಗಳಿರುವುವೋ, ಅಲ್ಲಿಯತನಕ ನೀವು ನಿಜವಾದ ಏಕದೇವ ವಿಶ್ವಾಸಿಯಾಗಲಾರಿರಿ. ಇಲಿಗಳು ಭೂಮಿಯಲ್ಲಿರುವವರೆಗೆ ನೀವು ಪ್ಲೇಗ್‌ನಿಂದ ಉಳಿಯುವಿರಿ ಎಂದು ಭಾವಿಸಬೇಡಿರಿ. ಅದೇ ರೀತಿ ಈ ಪಾಪಗಳ ಇಲಿಗಳು ಎಲ್ಲಿಯವರೆಗೆ ಇರುವುವು ಅಲ್ಲಿಯತನಕ ವಿಶ್ವಾಸಕ್ಕೆ ಅಪಾಯವಿದೆ. ನಾನು ಹೇಳುವುದೆಲ್ಲ ತುಂಬಾ ಗಮನವಹಿಸಿ ಕೇಳಿರಿ ಮತ್ತು ಅದರಂತೆ ನಡೆಯಲು ಹೆಜ್ಜೆ ಹಾಕಿರಿ. ಆದ್ದರಿಂದ ಕಲಿಮದ ಸಾರಾಂಶವೇನೆಂದರೆ, ಅಲ್ಲಾಹನು ಮಾತ್ರ ನಿಮ್ಮ ಆರಾಧ್ಯ ಮತ್ತು ಪ್ರಿಯತಮ ಮತ್ತು ಗುರಿ, ಈ ಪದವಿ ಎಲ್ಲಿಯುವರೆಗೆ ನೀವು ಅಂತರಂಗದಿಂದ ಎಲ್ಲಾ ರೀತಿಯ ಪಾಪಗಳಿಂದ ಮುಕ್ತರಾಗುವುದಿಲ್ಲ. ಆ ವಿಗ್ರಹಗಳನ್ನು ಹೃದಯದಿಂದ ತೆಗೆದು ಹಾಕುವುದಿಲ್ಲ. ಪಡೆಯಲಾರಿರಿ. (ಮಲ್ಫೂಝಾತ್, ಸಂಪುಟ–9, ಪುಟ 101–108, ಅಡಿಟಿಪ್ಪಣಿಯೊಂದಿಗೆ ಪುಟ–104, 1984)

ರಮಝಾನಿನ ಈ ಉಳಿದ ದಿನಗಳಲ್ಲಿ, ಪ್ರಯತ್ನ ಮತ್ತು ದುಆದೊಂದಿಗೆ ತಮ್ಮೊಳಗಿನ ಎಲ್ಲ ಕೆಡುಕುಗಳನ್ನು ಹೊರಗೆ ಹಾಕಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ಎಲ್ಲ ರೀತಿಯ ಗೌಪ್ಯವಾದ ಶಿರ್ಕ್‌ಗಳಿಂದಲೂ ರಕ್ಷಣೆ ಪಡೆಯುವಂತಾಗಲಿ, ಎಲ್ಲ ರೀತಿಯ ವಿಗ್ರಹಗಳನ್ನು ಹೊರ ಹಾಕುವಂತಾಗಲಿ, ಅಲ್ಲಾಹನು ಮಾತ್ರ ನಮ್ಮ ಆರಾಧ್ಯ ತಮ್ಮ ಗುರಿ ಮತ್ತು ನಮ್ಮ ಪ್ರಿಯತಮನಾಗಲಿ. ಲಾ ಇಲಾಹ ಇಲ್ಲಲ್ಲಾಹ ಕಲಿಮದ ಯಥಾರ್ಥತೆ ನಾವು ತಿಳಿಯುವವರಾಗಲಿ ಮತ್ತು ಮುಹಮ್ಮದು ರಸೂಲುಲ್ಲಾಹ್ ಎಂದು ನಾವು ಉಚ್ಚರಿಸುವಾಗ ನಮ್ಮ ಮುಂದೆ ನಮ್ಮ ಕೃತ್ಯರೂಪದ ಜೀವನ ನಡೆಸಲು ಆ ಸುಂದರವಾದ ಜೀವನ ಮಾದರಿ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಮ್ಮ ಮುಂದೆ ಇರಿಸಿರುವರು. ಅದನ್ನು ಅಳವಡಿಸಿಕೊಳ್ಳುವವರಾಗಲಿ, ಇವೆಲ್ಲ ಮಾತುಗಳು ಅಲ್ಲಾಹನ ಅನುಗ್ರಹವಿಲ್ಲದೆ ಆಗದು. ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ನಮಗೆ ಒಂದು ಕೃತ್ಯರೂಪದ ಹೋರಾಟ ಹಾಗೂ ಆಧ್ಯಾತ್ಮಿಕ ಹೋರಾಟ ನಡೆಸಬೇಕಾದೀತು.

ರಮಝಾನಿನ ಕೊನೆ ಹತ್ತು ದಿನಗಳಲ್ಲಿ ನಾವು ಲೈಲತುಲ್ ಖದೀರಿನ ಬಗ್ಗೆ ಹೇಳುತ್ತಿರುತ್ತೇವೆ. ನಾವು ತಮ್ಮ ಪ್ರತಿಯೊಂದು ಮಾತು ಮತ್ತು ಕೃತ್ಯವನ್ನು ಅಲ್ಲಾಹನ ಆದೇಶಗಳ ಪ್ರಕಾರ ಮಾಡಲು ತಯಾರಾದಾಗ, ಮತ್ತು ಅವುಗಳನ್ನು ಸ್ಥಾಯಿಯಾಗಿ ಮತ್ತು ನಿರಂತರವಾಗಿ ನಮ್ಮ ಜೀವಿತಗಳ ಭಾಗವನ್ನಾಗಿ ಮಾಡುವಾಗ ಮಾತ್ರ ನಮಗೆ ಲೈಲತುಲ್ ಖದರ್ ಲಭಿಸುವುದು. ಲೈಲತುಲ್ ಖದರ್ ಲಭಿಸಿದೆ ಎಂಬುದಕ್ಕೆ ಇರುವ ನಿಜವಾದ ಲಕ್ಷಣ ಇದೇ ಆಗಿದೆ. ನಾವು ಪ್ರಕಾಶವನ್ನು ಕಂಡಿದ್ದೇವೆ. ನಾವು ಅದನ್ನು ನೋಡಿದ್ದೇವೆ. ಇದನ್ನು ನೋಡಿದ್ದೇವೆ. ಮಳೆ ಬಂದಿದೆ. ಪರಿಮಳ ಬಂತು. ಅದು ಬಯ. ಇವೆಲ್ಲ ತಾತ್ಕಾಲಿಕ ಲಕ್ಷಣಗಳಾಗಿವೆ. ಲೈಲತುಲ್ ಖದರ್ ಲಭಿಸಿದೆ ಎಂಬುದಕ್ಕೆ ಇರುವ ನಿಜವಾದ ಲಕ್ಷಣ. ನಮ್ಮ ಹೃದಯದಲ್ಲಿ ಯಾವ ಬದಲಾವಣೆಯನ್ನು ಉಂಟು ಮಾಡಿದ್ದೇವೆ ಎಂಬುದೆ ಅದರ ಮುಖ್ಯ ಲಕ್ಷಣ.

ನಾವು ನಿಷ್ಠಾವಂತರಾಗಿ ಮೂರು ದಿನಗಳು ದುಆಗಳನ್ನು ಮಾಡಿದರೆ ಅಲ್ಲಾಹನು ವಿಶಿಷ್ಠವಾದ ಅನುಗ್ರಹಗಳನ್ನು ಪ್ರಕಟಗೊಳಿಸುವನು ಎಂಬ ನನ್ನ ಮಾತನ್ನು ಮುಂದಿರಿಸಿಕೊಂಡು ಕೆಲವು ಜಮಾಅತುಗಳಲ್ಲಿ ದುಆಗಳ ವಿಶಿಷ್ಠ ವ್ಯವಸ್ಥೆ ಮಾಡಲಾಗಿದೆ. ಮೂರು ದಿನಗಳು ದುಆಗಳನ್ನು ಮಾಡಿದ ನಂತರ ತಮ್ಮ ಹಳೆಯ ಜೀವಿತ ರೀತಿಗೆ ಬರಲಿಕ್ಕೆ ಮತ್ತು ಲಾ ಇಲಾಹ ಇಲ್ಲಲ್ಲಾಹ ನಿಜವಾದ ಉದ್ದೇಶವನ್ನು ಮರೆತುಬಿಡಲಿಕ್ಕೆ ನಾವು ಈ ಮೂರು ದಿನಗಳನ್ನು ವಿಶಿಷ್ಟಗೊಳಿಸಿರುವುದಾದರೆ, ನೆನಪಿಡಿರಿ. ಅಲ್ಲಾಹನು ನಮ್ಮ ಹೃದಯಗಳ ಸ್ಥಿತಿಯನ್ನು ಬಲ್ಲನು. ನಮ್ಮ ಉದ್ದೇಶಗಳನ್ನು ಬಲ್ಲನು. ಅವನಿಂದ ಯಾವುದೇ ಸಂಗತಿ ಗೋಪ್ಯವಾಗಿರುವುದಿಲ್ಲ. ಅಂತಹ ಸ್ಥಿತಿಯಲ್ಲಿ ಅದರಿಂದ ಯಾವುದೇ ಪ್ರಯೋಜನ ಲಭಿಸಲಾರದು. ಆದರೆ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಈ ದಿನಗಳನ್ನು ಸಾಗಿಸಲು ಬಯಸುವುದಾದರೆ, ಈ ದಿನಗಳು ನಮ್ಮ ಜೀವಿತಗಳ ಸ್ಥಾಯಿಯಾದ ಭಾಗವಾಗುವುದು ಎಂಬ ಪ್ರತಿಜ್ಞೆಯೊಂದಿಗೆ ಸಾಗಬೇಕು. ಹಾಗೆ ಆದರೆ, ಶತ್ರುಗಳು ನಮಗೆ ನೀಡುತ್ತಿರುವ ತೊಂದರೆಗಳನ್ನು ದೂರ ಮಾಡಲು ಅಲ್ಲಾಹನು ತನ್ನ ವಿಶಿಷ್ಠ ನೆರವು ಮತ್ತು ಸಹಾಯವನ್ನು ಪ್ರಕಟಗೊಳಿಸುವನು. ಇನ್‌ಶಾ ಅಲ್ಲಾಹ್. ಆಗ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ನಮಗೆ ಸಹಾಯಕವಾಗುವುದು. ಒಟ್ಟಿನಲ್ಲಿ ನಾನು ಹೇಳಿದ್ದು ಜಮಾಅತಿನ ಪ್ರತಿಯೊಬ್ಬ ಸದಸ್ಯನು ಎಡಬಿಡದೇ ಇಂತಹ ಸ್ಥಿತಿ ಉಂಟು ಮಾಡಿದರೆ ಆಗ ಈ ಕ್ರಾಂತಿ ಉಂಟಾಗುವುದು.

ಹಾಗೆ ಇದು ಸಹ ನೆನಪಿರಬೇಕು. ಈ ಸ್ಥಿತಿ ಉಂಟಾಗದಿದ್ದರೆ, ಮೂರು ದಿನಗಳ ನಂತರ, ನಾವು ಆಯೋಜಿಸಿಕೊಂಡ ಕಾರ್ಯಕ್ರಮ ನಿಷ್ಫಲಗೊಂಡವು. ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸಲಿಲ್ಲ ಎಂದು ಭಾವಿಸುವುದು ಬೇಡ. ಹಝ್ರತ್ ಮಸೀಹ್ ಮೌಊದ್(ಅ) ರಿಗೆ ಮತ್ತು ಅವರ ಜಮಾಅತಿಗೆ ವಿಜಯ ನೀಡುವೆನು ಎಂದು ಅಲ್ಲಾಹನು ವಾಗ್ದಾನ ಮಾಡಿರುವನು. ಅದು ಬೇಗನೇ ಅಥವಾ ಸ್ವಲ್ಪ ಕಾಲದ ನಂತರ ಆಗಿರಬಹುದು. ನಾವು ಲಾ ಇಲಾಹ ಇಲ್ಲಲ್ಲಾಹದ ನೈಜತೆಯನ್ನು ಅರಿತುಕೊಂಡು ನಮ್ಮ ಆರಾಧ್ಯ, ನಮ್ಮ ಪರಮ ಉದ್ದೇಶ ಮತ್ತು ಪ್ರಿಯತಮವಾಗಿ ಅಲ್ಲಾಹನ ಅಸ್ತಿತ್ವವನ್ನು ಮಾಡಿದರೆ ಮತ್ತು ಲೋಕಕ್ಕಿಂತ ನಮಗೆ ಅಲ್ಲಾಹನ ಪ್ರೀತಿ ಮತ್ತು ಅವನನ್ನು ಗಳಿಸುವುದು ನಮ್ಮ ಗುರಿಯಾದರೆ ಹಿರಿದಾದ ಬದಲಾವಣೆ ಬೇಗನೇ ಉಂಟಾಗಬಹುದು. ಅಲ್ಲಾಹನು ನಿರಪೇಕ್ಷಕನು, ಅವನ ಮಾತುಗಳಲ್ಲಿ ಶರತ್ತುಗಳೂ ಇರುತ್ತವೆ. ಆದುದರಿಂದ ನಮ್ಮ ಸ್ಥಿತಿಗಳನ್ನು ಸ್ಥಾಯಿಯಾಗಿ ಬದಲಾಯಿಸಲು ನಾವು

ಪ್ರತಿಜ್ಞೆ ಮಾಡಬೇಕಾಗಿದೆ. ಹಝ್ರತ್ ಪೈಗಂಬರ್ (ಸ) ಅರುಹಿದರು. ರಂಝಾನಿನ ಕೊನೆಯ ಹತ್ತು ದಿನಗಳು ನರಕದಿಂದ ಮುಕ್ತಿ ಪಡೆಯುವ ದಿನಗಳಾಗಿವೆ. (ಅಲ್-ಜಾಮಿಉಲ್ ಲಿಶಿಅಬಿಲ್ ಈಮಾನಿ, ಭಾಗ-5, ಪುಟ-223-224, ಫಝಾಇಲ್ ಶಹರ ರಮಝಾನ್, ಹದೀಸ್-3336, ಮಕ್ತಬ ಅರ್ರಶ್‌ದುರ್ರಿಯಾಝ್ 2003) ಮತ್ತು ವಿವರಿಸಿರುವ ಪ್ರಕಾರ ಹೀಗೂ ನುಡಿದಿರುವರು. ಯಾರು ಕಲಿಮ **"ಲಾ ಇಲಾಹ ಇಲ್ಲಹಹ್ ಮುಹಮ್ಮದು ರ್ರಸೂಲ್ಲಾಹ್"** ಮನಪೂರ್ವಕವಾಗಿ ಪಠಿಸುವರು. ಅವರ ಮೇಲೆ ನರಕದ ಬೆಂಕಿಯು ನಿಷಿದ್ಧಗೊಳಿಸಲಾಗುವುದು. ಇವೆಲ್ಲ ಮಾತುಗಳು ನಮಗೆ ಆಗ್ರಹಪಡಿಸುವುದೇನೆಂದರೆ, ಮನಷ್ಯನಿಗೆ ಕೃತ್ಯರೂಪ ಅವಶ್ಯಕವಾಗಿದೆ ಮತ್ತು ಸ್ಥಾಯಿಯಾಗಿ ಹಾಗೂ ನಿರಂತರವಾಗಿ ಇರಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿದಂತೆಯೇ ನಾನು ವಿವರವಾಗಿ ನುಡಿದಿರುವೆನು. **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್,** ನುಡಿಯುವ ಜೊತೆಯಲ್ಲಿ ನಡತೆಯು ತುಂಬಾ ಅವಶ್ಯಕವಾಗಿದೆ.

ಆದ್ದರಿಂದ ಈ ಕೊನೆಯ ಹತ್ತು ದಿನಗಳಿಂದ ಪ್ರಯೋಜನ ಪಡೆಯಲು, ನಿಜವಾದ ರೂಪದಲ್ಲಿ ಲೈಲತುಲ್ ಖದರ್ ಪಡೆಯಲು ನಮಗೆ ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮುದುರ್ರಸೂಲುಲಾಹ್, ಕಲಿಮವನ್ನು, ತಮ್ಮ ಹೃದಯ ಹಾಗೂ ಮನಸ್ಸುಗಳ ಧ್ವನಿಯನ್ನಾಗಿ ಮಾಡಿಕೊಳ್ಳಬೇಕಾಗುವುದು, ತನ್ನ ಪ್ರತಿಯೊಂದು ನಡೆಯ ಮೇಲೆ ಅದನ್ನು ಅನ್ವಯಿಸಿಕೊಳ್ಳಬೇಕಾಗುವುದು. ಹಝ್ರತ್ ಮಸೀಹ್ ಮೌಊದ್ (ಅ) ನುಡಿದಂತೆ ಅಲ್ಲಾಹನು ನಮಗೆ ಅದರ ಪ್ರಕಾರವೇ ತಮ್ಮ ಜೀವಿತವನ್ನು ನಡೆಸುವ ಭಾಗ್ಯ ದಯಪಾಲಿಸಲಿ. ಈ ದಿನಗಳನ್ನು ಲೋಕದ ಶಾಂತಿ ಮತ್ತು ನೆಲೆ ನಿಲ್ಲುವಿಕೆಗಾಗಿಯೂ ದುಆ ಮಾಡುತ್ತೀರಿ. ಅಲ್ಲಾಹನು ಮಾನವಕುಲದ ಮೇಲೆ ಕರುಣೆ ಮತ್ತು ಕೃಪೆ ತೋರಿಸುವವನಾಗಲಿ. ಆಮೀನ್.

************

*(ಪುಟ ಸಂಖ್ಯೆ 23ರ ಉಳಿದ ಭಾಗ)*

ಜಮಾಅತ್‌ನಿಂದ ಬೇರ್ಪಡದೆ ಜಮಾಅತ್‌ನಲ್ಲಿಯೇ ಇರಬೇಕು ಎಂದು ಇಲ್ಲಿ ಒತ್ತಿ ಹೇಳಲಾಗಿದೆ. ಅಹ್ಮದಿಯಾ ಖಿಲಾಫತ್ ಮತ್ತು ಅಹ್ಮದಿಯಾ ಜಮಾತ್‌ನೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಅವರ ಭವಿಷ್ಯವನ್ನು ರೂಪಿಸುವ ನಮ್ಮ ಮುಸ್ಲಿಂ ಸಹೋದರರಿಗೆ ಅಲ್ಲಾಹನು ತೌಫಿಕ್ ನೀಡಲಿ. ಅಮೀನ್. ಈ ಹದೀಸ್‌ಗಳು ನಿಝಾಮ್ ಜಮಾತ್‌ನಿಂದ ಕೋಪಗೊಂಡು ಬೇರ್ಪಟ್ಟು ತಮ್ಮ ಇಹಲೋಕ ಮತ್ತು ಪರಲೋಕವನ್ನು ಹಾಳುಮಾಡುವ ಅಹ್ಮದಿಯರಿಗೂ ಸಹ ಆಗಿದೆ. ಅಲ್ಲಾಹನು ನಮಗೆ ನಿಝಾಮ್ ಜಮಾತ್‌ನೊಂದಿಗೆ ಅಂಟಿಕೊಳ್ಳುವ ಮತ್ತು ಖಿಲಾಫತ್ ಅನ್ನು ಪೂರ್ಣ ಹೃದಯದಿಂದ ಪಾಲಿಸುವ ಸಾಮರ್ಥ್ಯವನ್ನು ನೀಡಲಿ.

**(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...

*(ಪುಟ ಸಂಖ್ಯೆ 24ರ ಉಳಿದ ಭಾಗ)*

ನಾನೇನು ಮಾತನಾಡಲು ಯೋಚಿಸದ್ದೆ ಅದೆಲ್ಲ ಮರೆತು ಹೋಗಿತ್ತು.

ಶಿಕಾಗೋವಿನ ನೂಮಾನ್ ಅಹ್ಮದ್ ಸಾಹಿಬ್ ಹೇಳಿದರು. ಭೇಟಿಯ ಮೊದಲು ತನ್ನ ಸ್ಥಿತಿ ಹೇಗಿತ್ತೆಂದರೆ ಶ್ವಾಸ ತೆಗೆಯಲು ಆಗುತ್ತಿರಲಿಲ್ಲ. ತುಂಬಾ ಗಾಬರಿ ಹಾಗೂ ಹೆದರಿಕೆ ಆವರಿಸಿತ್ತು. ಹುಝೂರರ ಕೋಣೆಗೆ ಪ್ರವೇಶ ಮಾಡಿ ಅವರ ಮುಖ ನೋಡುತ್ತಲೇ ಶ್ವಾಸ ತೆರೆಯುವಂತಾಯಿತು.

ಮಿಯಾಮಿಯಿಂದ ಬಂದಿದ್ದ ಹಾಫಿಝ್ ಇಮ್ರಾನ್ ಅಹ್ಮದ್ ಸಾಹಿಬ್ ಹೇಳಿದರು. ನಾನು ಕೃಷಿವಿಭಾಗದಲ್ಲಿ ಪ್ರೊಫೆಸರ್ ಆಗಿದ್ದೇನೆ, ಆಗ ಹುಝೂರ್ ಅನ್ವರ್(ಅಬ) ಹೇಳಿದರು. ಕೃಷಿ ಒಂದು ವಿಶಾಲವಾದ ಕ್ಷೇತ್ರವಾಗಿದೆ. ನೀವು ವಿಶೇಷವಾಗಿ ಏನು ಕಲಿಸುತ್ತೀರಿ? ನಾನು ಹೇಳಿದೆ. Feed science (ಆಹಾರ ವಿಜ್ಞಾನ) ಕಲಿಸುತ್ತಿದ್ದೇನೆ.

Micheal corpenter ತಮ್ಮ ಅಹಿಸಿಕೆ ಹೀಗೆ ವ್ಯಕ್ತಪಡಿಸಿದರು: ನಾನು ಕೇವಲ ಮೂರು ತಿಂಗಳ ಹಿಂದೆ ಬೈಅತ್ ಮಾಡಿರುವ ನವ ಅಹ್ಮದಿಯಾಗಿದ್ದೇನೆ. ಅವರನ್ನು ಈ ರೀತಿ ಭೇಟಿಯಾಗಬಹುದೆಂದು ಊಹಿಸಿಲ್ಲಿಲ್ಲ. ಭೇಟಿ ಮಾಡಿದ ಮೇಲೆ ನನಗೆ ದೃಡವಾಯಿತು ಖಲೀಫರನ್ನು ಅಲ್ಲಾಹನೇ ಸ್ವಯಂ ನಿಯುಕ್ತಗೊಳಿಸುತ್ತಾನೆ ಎಂದು.

ಶಿಕಾಗೋ ಜಮಾಅತಿನಿಂದ ಸಯ್ಯದ್ ಸಾಖಿಕ್ ಸಾಹಿಬ್ ಹೇಳುತ್ತಾರೆ. ನನ್ನ ಪತ್ನಿ ಭೇಟಿ ಮಾಡುವಾಗ ಅತ್ತುಬಿಟ್ಟಳು. ಪತ್ನಿಯು 16 ವರ್ಷ ಹಿಂದೆ ಬೈಅತ್ ಮಾಡಿದ್ದಳು ಅವರು ಅಫ್ಘಾನಿಸ್ತಾನದವಳು. ಉರ್ದು ಸರಿಯಾಗಿ ಬರುವುದಿಲ್ಲ ಎಂಬ ಚಿಂತೆ ಕಾಡುತ್ತಿತ್ತು. ಹುಝೂರ್ ಅನ್ವರ್ ಹೇಳಿದರು. ನಿಮ್ಮ ಉರ್ದು ಸರಿಯಾಗಿದೆ. ಮತ್ತು ತಾವು ನವ ಅಹ್ಮದಿ ಎಂದು ಭಾವಿಸಿಕೊಳ್ಳುವುದು ಬೇಡ. ತಾವು ಹುಟ್ಟು ಅಹ್ಮದಿ ಎಂದೇ ತಿಳಿಯಿರಿ ಮತ್ತು ಹುಟ್ಟು ಅಹ್ಮದಿಯಿಂದ ಯಾವ ನಿರೀಕ್ಷೆ ಇರುತ್ತದೆ ಅದರಂತೆಯೇ ನಡೆದುಕೊಳ್ಳಿರಿ.

ಇಮ್ರಾನ್ ಚೌಧರಿ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ಪ್ರೀತಿಯಿಂದ ನನ್ನ ಮಗಳಿಗೆ ಕರ್ಚಿಫ್ ಮತ್ತು ಚಾಕ್ಲೇಟ್ ನೀಡಿದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅಲ್ತಾಫ್ ಮುನೀಬ್ ಸಾಹಿಬ್ Binghamton ಜಮಾಅತಿನಿಂದ ಬಂದಿದ್ದರು. ಅವರ ಹೇಳುತ್ತಾರೆ ಇಂದು ನಾನು ಹುಝೂರ್ ರವರ ಭೇಟಿ ಮಾಡಿದಾಗ ಅವರು ನನ್ನ ಮಾತನ್ನು ಗಮನಕೊಟ್ಟು ಆಲಿಸಿದರು ಮತ್ತು ತಮ್ಮ ಸಲಹೆಗಳನ್ನು ನೀಡಿದರು. ನನಗೆ ಇನ್ನೇನು ಬೇಕಾಗಿತ್ತು. ನನಗೆ ಎಲ್ಲವು ದೊರಕಿದ ಅನುಭವವಾಯಿತು.

Oshkosh ಜಮಾಅತಿನಿಂದ ಬಂದ ಹಾಫಿಝ್ ಇನ್‌ಆಮುಲ್ ಹಖ್ ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಳ್ಳುತ್ತಾ ನಾನು ತುಂಬಾ ಚಿಂತೆಗೆ ಒಳಗಾಗಿದ್ದೆ. ಹುಝೂರರನ್ನು ಭೇಟಿ ಮಾಡಿ ನನ್ನ ಎಲ್ಲ ಚಿಂತೆಗಳು ದೂರವಾದವು. ಹುಝೂರರ ಆಶೀರ್ವಾದ ನನ್ನ ಜೊತೆಯಲ್ಲಿದೆ.

ಭೇಟಿಯ ಈ ಕಾರ್ಯಕ್ರಮ 7 ಗಂಟೆ 30 ನಿಮಿಷಗಳವರೆಗೆ ನಡೆಯಿತು.

### ಅಹ್ಮದಿಯಾ ಮುಸ್ಲಿಮ್ ವಿಜ್ಞಾನಿಗಳ ಸಂಘದವರಿಂದ ಹುಝೂರ್ ಅನ್ವರ್ ಅವರ ಭೇಟಿ

ಈ ಭೇಟಿಯ ಕಾರ್ಯಕ್ರಮ ನಂತರ ಅಹ್ಮದಿಯಾ ಮುಸ್ಲಿಂ ವಿಜ್ಞಾನಿಗಳ ಸಂಘ ಹುಝೂರ್ ಅನ್ವರ್(ಅಬ) ಅವರ ಜೊತೆ ಭೇಟಿ ಮಾಡುವ ಕಾರ್ಯಕ್ರಮವಿತ್ತು ಈ ಭೇಟಿಯ ವ್ಯವಸ್ಥೆ ಒಂದು ಸಭಾಂಗಣದಲ್ಲಿ ಮಾಡಲಾಗಿತ್ತು. ಹುಝೂರ್ ಅನ್ವರ್ ಆ ಸಭಾಂಗಣಕ್ಕೆ ಆಗಮಿಸಿದರು. ಈ ಕಾರ್ಯಕ್ರಮದ ಪ್ರಾರಂಭ ಖುರ್‌ಆನ್ ಪಠಣದಿಂದಾಯಿತು. ಅದನ್ನು ಮುಕರ್ರಮ್ ಮುನೀಬ್ ಶರೀಫ್ ಸಾಬ್ ನೆರವೇರಿಸಿಕೊಟ್ಟರು. ಅನಂತರ ಡಾ. ಸುಹೇಲ್ ಹುಸೆನ್ ಸಾಹಿಬ್ ಆಫ್ ಸಿಲಿಕಾನ್‌ವೆಲಿ ತಮ್ಮ ಪರಿಚಯವನ್ನು ನೀಡಿದರು. ಡಾ. ಸಾಹಿಬ್ ಸ್ಟಿನ್‌ಫೋರ್ಡ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪ್ರೋಫೆಸರ್ ಆಗಿರುವರು. ಅವರು ಹೇಳುತ್ತಾರೆ. ಡಿಸೆಂಬರ್ 2019 ರಲ್ಲಿ ಅಹ್ಮದಿಯಾ ಮುಸ್ಲಿಂ Research contrance new ನಲ್ಲಿ ಹುಝೂರೆ ಅನ್ವರ್ ಭಾಷಣ ಮಾಡಿದ್ದರು. ಅವರ ಭಾಷಣದಿಂದಲೇ ಪ್ರೇರಣೆಗೊಂಡ ನಾವು ನಮ್ಮ ಗುರಿಗಳನ್ನು ಮುಂದಿಟ್ಟುಕೊಂಡೆವು. ನಮ್ಮ ಈ ಗುರಿ, ವಿಜ್ಞಾನ ಮತ್ತು ತಂತ್ರಜ್ಞಾನದ ಮುಂದಿನ ಇಸ್ಲಾಮಿಕ್ ಕಾಲದ ನೇತೃತ್ವ ಇನ್‌ಶಾಅಲ್ಲಾಹ್ ನಾವು ಅಹ್ಮದಿ ಮುಸ್ಲಿಂ ವಿಜ್ಞಾನಿಗಳು ವಹಿಸುವೆವು. ನಾವು ನಮ್ಮ ವಾರ್ಷಿಕ ಕಾರ್ಯಕ್ರಮಗಳಲ್ಲಿ ಖುರ್‌ಆನ್ ಮತ್ತು ವಿಜ್ಞಾನ ವಿಷಯದಲ್ಲಿ Symposium ಆಯೋಜಿಸುವುದು ನಮ್ಮ ಗುರಿಯಾಗಿದೆ ಎಂದು ಡಾ. ಸಾಹಿಬ್ ಹೇಳಿದರು.

ಹುಝೂರ್ ಅನ್ವರ್(ಅಬ) ಅವರೊಡನೆ ಕೇಳಿದರು. ಇಲ್ಲಿ ಸೇರಿರುವ ಸದಸ್ಯರಲ್ಲಿ ಎಷ್ಟು ಜನರಿದ್ದೀರಿ ಮತ್ತು ಅವರಲ್ಲಿ ಎಷ್ಟು ಜನ P.H.D. ಮಾಡುವವರಿದ್ದಾರೆ? ಆಗ ಅವರು ಹೇಳಿದರು. ಇಲ್ಲಿ 46 ಪುರುಷರು ಮತ್ತು 37 ಸದಸ್ಯರು ಮಹಿಳೆಯರಿದ್ದಾರೆ. ಈ 83 ಸಂಖ್ಯೆಯಲ್ಲಿ 35 ಜನರು P.H.D. ಮಾಡಿದವರಾಗಿದ್ದಾರೆ. ಹಾಗೂ ಅಹ್ಮದಿ ಮಹಿಳಾ ವಿಜ್ಞಾನಿಗಳ ಸಂಘದ ಅಧ್ಯಕ್ಷೆ ಡಾ. ನುಸ್ರತ್ ಶರೀಫ್ ಸಾಹಿಬ, ಫಾಯಿಝರ್ (Pzizor) ನಲ್ಲಿ Fhermastical center ನ ವಿಜ್ಞಾನ ಪ್ರಾಂಶುಪಾಲರಾಗಿದ್ದಾರೆ.

ಪುರುಷ ಹಾಗೂ ಮಹಿಳಾ ಸಂಘದ ಸಂಯುಕ್ತ Vision ಬಗ್ಗೆ ತಿಳಿಸಿದರು. ನಾವು ಅಹ್ಮದಿಯಾ ಖಲೀಫರ ಅಭಿಲಾಷೆಗಳಂತೆ 100 ಪ್ರೋಫೆಸರ್ ಸೃಷ್ಟಿಸುವ ಗುರಿ ಹೊಂದಿದ್ದೇವೆ. ತಮ್ಮ ಈ ಪ್ರಯತ್ನವನ್ನು ಮುಂದುವರೆಸುತ್ತಾ ಡಾ. ನುಸ್ರತ್ ಸಾಹಿಬ್ ಎರಡೂ ಸಂಘಗಳ Official membership ನ ಪ್ರಸಕ್ತ Demographic data ಪ್ರಸ್ತುತಪಡಿಸಿ ಹೇಳಿದರು. ಕನಿಷ್ಠ ಹತ್ತು "ಅಬ್ದುಸ್ಸಲಾಂ" ಅರ್ಹತೆಯ ಅಭ್ಯರ್ಥಿಗಳು ಉಪಸ್ಥಿತರಿದ್ದಾರೆ.

ಆಗ ಹುಝೂರ್ ಅನ್ವರ್(ಅಬ) ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ತೃತೀಯ ಈ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. ಜಮಾಅತಿನ ಈ ಶತಮಾನದ ಒಳಗೆ ನಮ್ಮ ಬಳಿ ಇಂತಹ ವಿಜ್ಞಾನಿಗಳು ಇರಬೇಕಾಗಿದೆ. 1989 ರಿಂದ ಇಲ್ಲಿಯವರೆಗೆ 33 ವರ್ಷಗಳು ಸಂದಿವೆ. ಹುಝೂರೆ ಅನ್ವರ್ ಹೇಳಿದರು. ಮುಂದಿನ ಕೆಲವೇ ವರ್ಷಗಳಲ್ಲಿ ಕನಿಷ್ಠಪಕ್ಷ ಒಬ್ಬರು ಅಥವಾ ಇಬ್ಬರು ಅಬ್ದುಸ್ಸಲಾಂ ಆಗಬೇಕಾಗಿದೆ.

**(ಮುಂದುವರಿಯುವುದು)**

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ

# ಖಿಲಾಫತ್ ಸುರಕ್ಷಿತ ಆಶ್ರಯ ಸ್ಥಾನ

ಮಾನ್ಯ ಕೆ. ತಾರಿಕ್ ಅಹ್ಮದ್. ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ ಹಾಗೂ ಇಂಚಾರ್ಜ್ ನೂರುಲ್ ಇಸ್ಲಾಮ್

**ವಇಝ್ ಖಾಲ ರಬ್ಬುಕ ಲಿಲ್ ಮಲಾಯಿಕತಿ ಇನ್ನಿ ಜಾಯಿಲುನ್ ಫಿಲ್ ಅರ್ಝಿ ಖಲೀಫ ಖಾಲೂ ಅತಜ್‌ಅಲು ಫೀಹಾ ಮನ್ ಯುಫ್‌ಸಿದು ಫೀಹಾ ವ ಯಸ್ಫಿಕುದ್ದಿಮಾಅ ವ ನಹ್ನೂ ನುಸಬ್ಬಿಹೂ ಬಿಹಮ್ದಿ ವ ನುಖದ್ದಿಸು ಲಕ ಖಾಲ ಇನ್ನೀ ಅಅ್‌ಲಮು ಮಾ ಲಾ ತಅ್‌ಲಮೂನ್** (ಅಲ್‌ಬಖರಃ– 31)

ಅಂದರೆ: 'ನಾನು ಭೂಮಿಯಲ್ಲಿ ಒಬ್ಬ ಪ್ರತಿನಿಧಿಯನ್ನು ನೇಮಿಸಲಿದ್ದೇನೆ' ಎಂದು ದೇವದೂತರೊಡನೆ ನಿನ್ನ ಪ್ರಭು ಹೇಳಿದ ಸಂದರ್ಭ, ಆಗ ಅವರು ಅಲ್ಲಿ ಕ್ರಮಭಂಗ ಮಾಡುವವರನ್ನು ರಕ್ತಹರಿಸುವವರನ್ನು ನೀನು ಉಂಟು ಮಾಡುವೆಯಾ? ನಾವಾದರೂ ನಿನ್ನ ಸ್ತುತಿ ಕೀರ್ತನೆ ಮಾಡುವವರು ನಿನ್ನ ಪಾವಿತ್ರ್ಯವನ್ನು ಕೊಂಡಾಡುವವರು ಆಗಿದ್ದೇವೆ ಎಂದು ಹೇಳಿದರು. ಆಗ ಅವನು "ಖಂಡಿತವಾಗಿಯೂ ನೀವು ತಿಳಿಯದೆ ಇರುವುದನ್ನು ನಾನು ತಿಳಿದಿರುತ್ತೇನೆ" ಎಂದು ನುಡಿದನು.

ಪ್ರಾಮಾಣಿಕವಾಗಿ ನನ್ನ ಬಳಿಗೆ ಬನ್ನಿ, ಅದರಲ್ಲಿ ಒಳಿತಿದೆ.

ಎಲ್ಲೆಡೆ ಮೃಗಗಳಿವೆ, ನಾನು ಸಮೃದ್ಧಿಯಿಂದ ಸುತ್ತುವರೆದಿದ್ದೇನೆ

ಮಹನೀಯರೇ! ಸಯ್ಯದ್‌ನಾ ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ಈ ಯುಗದ ಭದ್ರವಾದ ಕೋಟೆಯಾಗಿದ್ದೇನೆ. ನನ್ನೊಂದಿಗೆ ಪ್ರವೇಶಿಸುವವನು ತನ್ನ ಪ್ರಾಣವನ್ನು ಕಳ್ಳರು, ಕಡಲ್ಗಳ್ಳರು ಮತ್ತು ಮೃಗಗಳಿಂದ ರಕ್ಷಿಸುತ್ತಾನೆ, ಆದರೆ ನನ್ನ ಗೋಡೆಗಳಿಂದ ದೂರವಿರಲು ಬಯಸುವವನು ಎಲ್ಲಾ ಕಡೆಯಿಂದ ಮರಣವನ್ನು ಎದುರಿಸುತ್ತಾನೆ ಮತ್ತು ಅವನ ಮೃತದೇಹವು ಸುರಕ್ಷಿತವಾಗಿರುವುದಿಲ್ಲ. (ಫತೇಹ್ ಇಸ್ಲಾಂ ಪುಟ–34)

ಗೌರವಾನ್ವಿತ ಅಧ್ಯಕ್ಷರೇ, ಆತ್ಮೀಯ ಸಬೀಕರೆ! ಅಸ್ಸಲಾಮು ಅಲೈಕುಂ ವರಹ್ ಮತುಲ್ಲಾಹಿ ವಬರಕಾತುಹು.

ನಿಮಗೆಲ್ಲಾ ತಿಳಿದಿರುವಂತೆ ನನ್ನ ಭಾಷಣದ ಶೀರ್ಷಿಕೆ

ಖಿಲಾಫತ್ ಸುರಕ್ಷಿತ ಆಶ್ರಯ ಸ್ಥಾನವಾಗಿದೆ

ಮಹನೀಯರೇ! ಹಝ್ರತ್ ಆದಮ್(ಅ) ರವರ ಖಿಲಾಫತ್ ಆರಂಭದಲ್ಲಿ, ನಿಜವಾದ ಸೃಷ್ಟಿಕರ್ತ ಮತ್ತು ದೇವದೂತರ ನಡುವಿನ ಈ ಸಂಭಾಷಣೆಯು ಒಂದು ವಿಷಯವನ್ನು ಸ್ಪಷ್ಟವಾಗಿ ವಿವರಿಸುತ್ತದೆ.

ಖಲೀಫರ ಶಾಂತಿಯುತ ಅಸ್ತಿತ್ವವು ರಕ್ತಪಾತ ಮತ್ತು ಅವ್ಯವಸ್ಥೆಯಿಂದ ಸುತ್ತುವರೆದಿತ್ತು, ಅದರ ವಾಸ್ತವತೆಯನ್ನು ಗ್ರಹಿಸಲು ದೇವದೂತರಿಂದ ಕೂಡ ಸಾಧ್ಯವಾಗಲಿಲ್ಲ.

ಈ ಅಪಶ್ರುತಿಯ ಚಂಡಮಾರುತದ ಚಾಲಕ ಯಾರು? ಮತ್ತು ಈ ಅನಾಗರಿಕ ಕ್ರೌರ್ಯದಿಂದ ಭೂಮಿಯನ್ನು ಶುದ್ಧೀಕರಿಸುವ ಶಾಂತಿಯ ಬೇಲಿ ಯಾವುದು?

ಆದ್ದರಿಂದ, **ಇನ್ನೀ ಅಅ್‌ಲಮೂ ಮಾಲಾ ತಅ್‌ಲಮೂನ್** "ಖಂಡಿತವಾಗಿಯೂ ನೀವು ತಿಳಿಯದೆ ಇರುವುದನ್ನು ನಾನು ತಿಳಿದಿರುತ್ತೇನೆ" ಎಂಬ ಅಲ್ಲಾಹನ ಸಣ್ಣ ಉತ್ತರವು ದೇವದೂತರನ್ನು ಮೌನಗೊಳಿಸಿತು.

ಅಲ್ಲಾಹನ ವಾಣಿಯು ಖಿಲಾಫತ್ ಸುರಕ್ಷಿತ ಆಶ್ರಯ ಸ್ಥಾನ ಎಂಬ ವಿಷಯವನ್ನು ಅವನ ಶಕ್ತಿಯ ಅದ್ಭುತ ರೂಪದಲ್ಲಿ ಎಷ್ಟು ಸ್ಪಷ್ಟವಾಗಿ ಮತ್ತು ಪ್ರಕಾಶಮಾನವಾಗಿ ಮಾಡಿತು ಎಂಬುದಕ್ಕೆ ಇತಿಹಾಸದ ವಿದ್ವಾಂಸರು ಸಾಕ್ಷಿಯಾಗಿದ್ದಾರೆ, "ಜಿನ್, ಇನ್ಸ್ ಮತ್ತು ಮಲಕ್" ಎಲ್ಲರೂ ತಮ್ಮ ಕೀಳರಿಮೆಯನ್ನು ಒಪ್ಪಿಕೊಂಡು ಸಾಷ್ಟಾಂಗ ವೆರಗಬೇಕಾಗಿ ಬಂದಿತು.

ಈ ಲೇಖನವು ಒಂದು ಕಥೆಯಂತಿಲ್ಲ, ಬದಲಿಗೆ ಅದು ಅಂಚಿಲ್ಲದ ನಿರಂತರವಾಗಿ ಹರಿಯುವ ಪ್ರವಾಹವಾಗಿದೆ ಮತ್ತು ಅಲ್ಹಮ್ದುಲಿಲ್ಲಾಹ್, ನಾವು ಖಿಲಾಫತ್‌ನ ಅನುಗ್ರಹಗಳಿಗೆ ಮತ್ತು ಅದರ ರಕ್ಷಣೆಯ ನಂಬಿಕೆಯನ್ನು ಹೆಚ್ಚಿಸುವ ದೃಶ್ಯಗಳಿಗೆ ಪ್ರತ್ಯಕ್ಷದರ್ಶಿಗಳಾಗಿರುವ ಅದೃಷ್ಟವಂತ ಸಮುದಾಯವಾಗಿದ್ದೇವೆ ಮತ್ತು ನಾವು ಅದರ ಚಿಹ್ನೆಗಳನ್ನು ಪ್ರತಿದಿನ ನೋಡುತ್ತಿದ್ದೇವೆ.

ನಮ್ಮ ಮೇಲೆ ಅವನ ಕೃಪೆಯು ಅಪರಿಮಿತವಾಗಿದೆ. ಎಣಿಸುವವರಿಗೆ ಅಂತಹ ಯಾವುದೇ ಭಾಷೆಯಿಲ್ಲ. ಖಿಲಾಫತ್ ವ್ಯವಸ್ಥೆಯು ಅತ್ಯಂತ ಅನುಗ್ರಹಿತವಾದ ವ್ಯವಸ್ಥೆಯಾಗಿದೆ. ಇದರ ಮೂಲಕ, ಪ್ರವಾದಿತ್ವದ ಸೂರ್ಯನು ಸ್ಪಷ್ಟವಾಗಿ ಅಸ್ತಮಿಸಿದ ನಂತರ, ಅಲ್ಲಾಹ್ ತಆಲಾ (ದೇವನು) ಪ್ರವಾದಿತ್ವದ ಚಂದ್ರನ ಉದಯವನ್ನು ಏರ್ಪಡಿಸುತ್ತಾನೆ ಮತ್ತು ಪ್ರವಾದಿಯ ಮರಣದ ನಂತರ ಸಮುದಾಯದ ಮೇಲೆ ಭಾರೀ ದುರಂತಗಳಿಂದ ಬರುವ ಒತ್ತಡದ ಪರಿಣಾಮಗಳಿಂದ ಸಮುದಾಯವನ್ನು ರಕ್ಷಿಸುತ್ತಾನೆ.

ಖಿಲಾಫತ್ ವ್ಯವಸ್ಥೆಯು ಅನುಗ್ರಹಿತ ಮತ್ತು ಸುಲಭವಾದ ನಾಯಕತ್ವದ ವ್ಯವಸ್ಥೆಯಾಗಿದ್ದು, ಇದನ್ನು ಅಲ್ಲಾಹ್‌ತಾಲಾ ಆಧ್ಯಾತ್ಮಿಕ ಉಳಿವು ಮತ್ತು ಅಭಿವೃದ್ಧಿಗಾಗಿ ವಿಶ್ವಾಸಿಗಳಿಗೆ ನೀಡಿದ್ದಾನೆ. ಅಥವಾ ಇದು ನಂಬಿಕೆ ಮತ್ತು ಸತ್ಕರ್ಮಗಳ ಮೂಲಭೂತ ಪರಿಸ್ಥಿತಿಗಳಿಗೆ ಒಳಪಟ್ಟಿರುವ ಒಂದು ದೊಡ್ಡ ಪ್ರತಿಫಲವಾಗಿದೆ. ಈ ದೈವಿಕ ಅನುಗ್ರಹದ ಸ್ಥಿತಿಯು ಅಲ್ಲಾಹನ ಹಗ್ಗವಾಗಿದೆ. ಈ ದೈವಿಕ ಹಗ್ಗವನ್ನು ಬಿಗಿಯಾಗಿ ಹಿಡಿದುಕೊಳ್ಳುವುದು ಸಮುದಾಯದ ಭಕ್ತರ, ಶಾಂತಿ ಮತ್ತು ನಂಬಿಕೆಯ ದೃಢೀಕರಣವಾಗಿದೆ.

ಸಾಮರಸ್ಯ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯ ಭರವಸೆ.

ಮಹನೀಯರೇ! ಪ್ರಪಂಚವು ಅಪಾಯಗಳು ಮತ್ತು ಸಂಕಟಗಳಿಂದ ಸುತ್ತುವರೆದಿರುವುದನ್ನು ನಾವು ಇಂದು ನೋಡುತ್ತಿದ್ದೇವೆ. ವರ್ತಮಾನದ ನಕ್ಷೆಯನ್ನು ಚಿತ್ರಿಸುವಾಗ, ಹಝ್ರತ್ ಅಕ್ದಸ್ ಮಸಿಹ್ ಮಊದ್(ಅ) ಸ್ಪಷ್ಟವಾದ ಮಾತುಗಳಲ್ಲಿ ಮುಂಚಿತವಾಗಿ ಘೋಷಿಸಿದರು: "ಓ ಯುರೋಪ್ ನೀನು ಶಾಂತಿಯಲ್ಲಿಲ್ಲ ಮತ್ತು ಓ ಏಷ್ಯಾ ನೀನು ಸುರಕ್ಷಿತವಲ್ಲ." ಮತ್ತು ಓ ದ್ವೀಪಗಳ ನಿವಾಸಿಗಳೇ! ಯಾವುದೇ ಕೃತಕ ದೈವಗಳು ನಿಮ್ಮ ಸಹಾಯಕ್ಕೆ ಬರುವುದಿಲ್ಲ. ನಗರಗಳು ಬೀಳುವುದನ್ನು ನಾನು ನೋಡುತ್ತಿದ್ದೇನೆ ಮತ್ತು ಹಳ್ಳಿಗಳು ನಿರ್ಜನವಾಗಿರುವುದನ್ನು ನಾನು ನೋಡುತ್ತಿದ್ದೇನೆ. ಆತನು (ದೇವನು) ಕೆಲಕಾಲ ಸುಮ್ಮನಿದ್ದನು. ಕಣ್ಣೆದುರೇ ದುಷ್ಕೃತ್ಯಗಳು ನಡೆದರೂ ಸುಮ್ಮನಾದನು, ಆದರೆ ಈಗ ಅವನು ತನ್ನ ಮುಖವನ್ನು ವೈಭವದಿಂದ ತೋರಿಸುತ್ತಾನೆ, ಕೇಳಲು ಕಿವಿ ಇರುವವನು ಕೇಳಲಿ ಆ ಸಮಯ ದೂರವಿಲ್ಲ

ನಾನು ದೇವನ ಆಜ್ಞೆಯ ಅಡಿಯಲ್ಲಿ ಎಲ್ಲರನ್ನೂ ಒಟ್ಟುಗೂಡಿಸಲು ಪ್ರಯತ್ನಿಸಿದೆ, ಆದರೆ ವಿಧಿಯ ಶಾಸನಗಳು ನೆರವೇರುತ್ತವೆ ಎಂದು ಖಚಿತವಾಗಿತ್ತು.

ನಾನು ಸತ್ಯವನ್ನೇ ಮಾತನಾಡುತ್ತೇನೆ. ಈ ದೇಶದ ತಿರುವು ಹತ್ತಿರವಾಗುತ್ತಿದೆ. ನೂಹರ ಸಮಯವು ನಿಮ್ಮ ಕಣ್ಣ ಮುಂದೆ ಬರುತ್ತದೆ ಮತ್ತು ನೀವು ನಿಮ್ಮ ಸ್ವಂತ ಕಣ್ಣುಗಳಿಂದ ಲೂತರ ದೇಶದ ಘಟನೆಗಳನ್ನು ನೋಡುತ್ತೀರಿ.

ಆದರೆ ದೇವನು ಕೋಪಗೊಳ್ಳಲು ನಿಧಾನಿಸುತ್ತಿದ್ದಾನೆ, ಆದ್ದರಿಂದ ನಿಮ್ಮ ಮೇಲೆ ಕರುಣೆ ತೋರಿಸುವಂತಾಗಲು ಪಶ್ಚಾತಾಪ ಪಡಿರಿ. ದೇವನನ್ನು ತ್ಯಜಿಸುವವನು ಹುಳುವೇ ಹೊರತು ಮನುಷ್ಯನಲ್ಲ, ಮತ್ತು ಆತನಿಗೆ ಭಯಪಡದವನು ಸತ್ತಿದ್ದಾನೆ ಮತ್ತು ಜೀವಂತವಾಗಿಲ್ಲ. (ಹಖೀಖತುಲ್ ವಹಿ, ರುಹಾನಿ ಖಝಾಇನ್, ಸಂಪುಟ–22, ಪುಟಗಳು 268,269)

ಇಂದು ಮನುಕುಲದ ಸ್ಥಿತಿ **ವ ಕುನ್ತುಮ್ ಅಲಾ ಶಫಾ ಹುಫ್ರತಿಮ್ಮಿನನ್ನಾರಿ** ಎಂಬಂತೆ ಆಗಿದೆ ಅನೆಂದರೆ ಜಗತ್ತು ದೊಡ್ಡ ದುರಂತದ ಅಂಚಿನಲ್ಲಿ ನಿಂತಿದೆ. ಇಂದು ಜಗತ್ತಿನಲ್ಲಿ ಆತಂಕ ಮತ್ತು ಭಯದ ವಾತಾವರಣವಿದ್ದು, ಯುದ್ಧದ ಮೋಡಗಳು ಸುಳಿದಾಡುತ್ತಿವೆ. ಮಾನವೀಯತೆಯ ಜಗತ್ತಿಗೆ ಈ ಸಮಯದಲ್ಲಿ ಇತರ ಲೌಕಿಕ ಅಗತ್ಯಗಳ ಜೊತೆಗೆ ಶಾಂತಿ, ಸಾಮರಸ್ಯ ಮತ್ತು ಯೋಗಕ್ಷೇಮದ ಅಗತ್ಯವಿದೆ, ಬಹುಶಃ ಹಿಂದೆಂದೂ ಇರಲಿಲ್ಲ. ಮೂರನೇ ಮಹಾಯುದ್ಧದ ಅಪಾಯಗಳು ಹುಟ್ಟಿಕೊಂಡಿವೆ. ಈ ಪರಿಸ್ಥಿತಿಯಲ್ಲಿ, ಮಾನವೀಯತೆಯ ಬಗ್ಗೆ ಸಹಾನುಭೂತಿ ಹೊಂದಿರುವ ಮತ್ತು ನಿಸ್ವಾರ್ಥವಾಗಿ ಸೇವೆ ಸಲ್ಲಿಸುವ ಮತ್ತು ಅದರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುವ ಖಿಲಾಫತ್ ಅಹ್ಮದಿಯಾ ಜಗತ್ತಿನಲ್ಲಿ ಪವಿತ್ರ ಸ್ವರ್ಗೀಯ ವ್ಯವಸ್ಥೆಯಾಗಿದೆ. ಇಂದು ಜಗತ್ತಿನಲ್ಲಿ ಸಾರ್ವಜನಿಕ ಶಾಂತಿಗಾಗಿ ಖಿಲಾಫತ್ ಅಹ್ಮದಿಯಾ ಮಾಡಿದ ಪ್ರಯತ್ನಕ್ಕೆ ಯಾವುದೇ ನಿದರ್ಶನವಿಲ್ಲ. ಇದು ನಮ್ಮ ಪ್ರೀತಿಯ ಇಮಾಮ್, ಹಝ್ರತ್ ಖಲೀಫತ್ ಮಸೀಹ್ ಖಾಮಿಸ್ (ಅಯ್ಯದುಲ್ಲಾಹು ತಆಲಾ ಬಿ ನಸ್ರಿ ಹಿಲ್ ಅಝೀಜ್) ರವರ ಅಸ್ತಿತ್ವವು ಮೂರನೇ ಮಹಾಯುದ್ಧದ ಬಗ್ಗೆ ಜಗತ್ತನ್ನು ನಿರಂತರವಾಗಿ ಎಚ್ಚರಿಸುತ್ತಿದ್ದಾರೆ. ಶಾಂತಿ ಮತ್ತು ಸಾಮರಸ್ಯಕ್ಕಾಗಿ ಶ್ರಮಿಸುವ ಏಕೈಕ ಜಾಗತಿಕ ನಾಯಕ ಅವರ ಅನುಯಾಯಿಗಳಾಗಿರುವ ನಾವು ಅದೃಷ್ಟವಂತರು. ಆದರೆ ಯಾರು ಅವರನ್ನು ನಂಬುವುದಿಲ್ಲವೋ ಅವರ ಬಗ್ಗೆಯೂ ಅದೇ ನೋವು ಹೊಂದಿದ್ದಾರೆ ಮತ್ತು ಅವರಿಗಾಗಿ ಪ್ರಾರ್ಥಿಸುತ್ತಾರೆ ಮತ್ತು ಅವರಿಗೂ

ಒಳ್ಳೆಯದನ್ನು ಬಯಸುತ್ತಾರೆ.

ಏಕೆಂದರೆ ಈ ಯುಗದಲ್ಲಿ ಕೇವಲ ಖಿಲಾಫತ್ ಅಹ್ಮದಿಯಾ ಮಾತ್ರ ನಂಬಿಕೆಯ ಬೇಲಿಯಾಗಿದೆ.

ಇಂದು, ನಾಸ್ತಿಕತೆಯು ಹೆಚ್ಚುತ್ತಿರುವಾಗ ಮತ್ತು ಜನರು ತಮ್ಮ ಸೃಷ್ಟಿಕರ್ತನನ್ನು ಮರೆತು ವೈಯಕ್ತಿಕ ಮತ್ತು ಸಾಮೂಹಿಕ ಅಭದ್ರತೆ ಮತ್ತು ಚಡಪಡಿಕೆಯಿಂದ ಬಳಲುತ್ತಿರುವಾಗ, ನಮ್ಮ ಪ್ರೀತಿಯ ಇಮಾಮ್ ಜಗತ್ತಿಗೆ ನಿಜವಾದ ಆಶ್ರಯದಾತ ಅಂದರೆ ದೇವನತ್ತ ತಿರುಗುವಂತೆ ನಮ್ಮ ಗಮನವನ್ನು ಸೆಳೆಯುತ್ತಿದ್ದಾರೆ. ಜಗತ್ತಿನಲ್ಲಿ ನೈಜ ಮತ್ತು ಸುಸ್ಥಿರ ಶಾಂತಿ ಸ್ಥಾಪನೆಗೆ ಸರ್ವಶಕ್ತ ದೇವನ ವ್ಯಕ್ತಿತ್ವವನ್ನು ಗುರುತಿಸಿ ಅವನ ಹಕ್ಕುಗಳನ್ನು ಪಾವತಿಸುವುದು, ದಾಸರ ಹಕ್ಕುಗಳನ್ನು ಪಾವತಿಸುವುದು ಮತ್ತು ನ್ಯಾಯವನ್ನು ಸ್ಥಾಪಿಸುವುದು ಷರತ್ತುಬದ್ಧವಾಗಿದೆ ಎಂದು ಹುಝೂರ್ ಅನ್ವರ್ ವಿವಿಧ ವೇದಿಕೆಗಳಲ್ಲಿ ಪವಿತ್ರ ಖುರಾನ್ ಮತ್ತು ಐತಿಹಾಸಿಕ ಉದಾಹರಣೆಗಳನ್ನು ನೀಡುವ ಮೂಲಕ ಸಾಬೀತುಪಡಿಸಿದ್ದಾರೆ. ಹುಝೂರ್ ಅನ್ವರ್ (ಅಯ್ಯದುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಜ್) ಅವರು ಜರ್ಮನಿ 2022ರ ವಾರ್ಷಿಕ ಸಭೆಯ ಸಂದರ್ಭದಲ್ಲಿ ಹೇಳಿದರು:

"ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ತರಲು, ಈ ನಂಬಿಕೆ ಮತ್ತು ಆಚರಣೆಯು ಪರಿಣಾಮಕಾರಿಯಾಗಿರುತ್ತದೆ, ಎಲ್ಲಾ ಜನರು ಶಾಂತಿಯಿಂದ ಬದುಕಲು ಬಯಸುವ ದೇವನು ಜಗತ್ತಿನಲ್ಲಿ ಇದ್ದಾನೆ. ಒಬ್ಬ ಪರಮಾತ್ಮನನ್ನು ಗುರುತಿಸುವವರೆಗೆ, ಅವನ ಪ್ರೀತಿ ಹೃದಯದಲ್ಲಿ ಹುಟ್ಟುವವರೆಗೆ ನಿಜವಾದ ಶಾಂತಿಯನ್ನು ಸ್ಥಾಪಿಸಲಾಗುವುದಿಲ್ಲ. ಮತ್ತು ಅಲ್ಲಾಹನು ಶಾಂತಿಯನ್ನು ನೀಡುವವನು ಎಂಬ ಈ ನಂಬಿಕೆಯು ಪವಿತ್ರ ಪ್ರವಾದಿ(ಸ) ರವರ ಮೂಲಕ, ಇಸ್ಲಾಂ ಧರ್ಮದ ಮೂಲಕ ಮಾತ್ರ ಪ್ರಸ್ತುತಪಡಿಸಲ್ಪಟ್ಟಿದೆ. ಜನರ ನಡುವೆ ನಿಜವಾದ ಸೌಹಾರ್ದತೆ ಇರುವವರೆಗೆ ಶಾಂತಿ ನೆಲೆಸಲು ಸಾಧ್ಯವಿಲ್ಲ ಮತ್ತು ಏಕದೇವನನ್ನು ನಂಬದೆ ನಿಜವಾದ ಸಾಮರಸ್ಯವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಸೈಯದ್‌ನಾ ಹುಝೂರ್ ಅನ್ವರ್ (ಅಯ್ಯದುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಜ್) ರವರು ತಮ್ಮ ಪತ್ರಗಳ ಮೂಲಕ ಶಾಂತಿ ಸ್ಥಾಪಿಸಲು ವಿಶ್ವದ ವಿವಿಧ ಮುಖ್ಯಸ್ಥರ ಗಮನ ಸೆಳೆದರು:

"ಮಾರ್ಚ್ 8, 2012 ರಂದು, ಹುಝೂರ್ ಅನ್ವರ್ (ಅಯ್ಯದುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಜ್) ರವರು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಅಧ್ಯಕ್ಷ ಬರಾಕ್ ಒಬಾಮಾ ಅವರನ್ನು ಭೇಟಿ ಮಾಡಿದರು ಮತ್ತು ಹೇಳಿದರು: ಜಗತ್ತಿನಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಹದಗೆಡುತ್ತಿರುವ ಪರಿಸ್ಥಿತಿಯನ್ನು ನೋಡುವಾಗ, ಈ ಪತ್ರವನ್ನು ನಿಮಗೆ ಕಳುಹಿಸುವುದು ಅಗತ್ಯವೆಂದು ನಾನು ಭಾವಿಸಿದೆ. ನೀವು ಯುನೈಟೆಡ್ ಸ್ಟೇಟ್ಸ್‌ನಲ್ಲಿದ್ದೀರಿ, ಮತ್ತು ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷರ ಹುದ್ದೆಯನ್ನು ಹೊಂದಿದ್ದೀರಿ. ಇದು ಮಹಾಶಕ್ತಿಯಾಗಿರುವ ದೇಶ....ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ತಮ್ಮ ಪಾತ್ರವನ್ನು ವಹಿಸಬೇಕೆಂದು ನಾನು ತಮ್ಮಲ್ಲಿ ಮತ್ತು ಜಗತ್ತಿನ ಎಲ್ಲಾ ನಾಯಕರಲ್ಲಿ ವಿನಂತಿಸುತ್ತೇನೆ....

ಅಲ್ಲಾಹನು ನಿಮಗೆ ಮತ್ತು ಪ್ರಪಂಚದ ಎಲ್ಲಾ ನಾಯಕರಿಗೆ ಈ ಸಂದೇಶವನ್ನು ಅರ್ಥಮಾಡಿಕೊಳ್ಳಲು ಮತ್ತು ಕಾರ್ಯನಿರ್ವಹಿಸಲು ಅನುಗ್ರಹವನ್ನು ನೀಡಲಿ.

ಈ ರೀತಿಯಾಗಿ, ಸೈಯದ್‌ನಾ ಹುಝೂರ್ ಅನ್ವರ್ (ಅಯ್ಯದುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್) ರವರು ಕೆನಡಾದ ಇಂಟರ್ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ತಮ್ಮ ಮುಖ್ಯ ಭಾಷಣದಲ್ಲಿ ಹೇಳಿದರು: "ನಾವು ನಿಜವಾಗಿಯೂ ಶಾಂತಿಯನ್ನು ಸ್ಥಾಪಿಸಲು ಬಯಸಿದರೆ, ನಾವು ನ್ಯಾಯದೊಂದಿಗೆ ಕೆಲಸ ಮಾಡಬೇಕು." ನಾವು ನ್ಯಾಯ ಮತ್ತು ಸಮಾನತೆಗೆ ಪ್ರಾಮುಖ್ಯತೆ ನೀಡಬೇಕು. ಹಝ್ರತ್ ಮೊಹಮ್ಮದ್ ಮುಸ್ತಫಾ(ಸ) ರವರು ಎಷ್ಟು ಸೊಗಸಾಗಿ ಹೇಳುತ್ತಾರೆ: "ನೀವು ನಿಮಗಾಗಿ ಏನನ್ನು ಬಯಸುತ್ತೀರೋ ಅದನ್ನು ನೀವು ಇತರರಿಗೂ ಬಯಸಿರಿ" ವಿಶಾಲ ದೃಷ್ಟಿಕೋನದಿಂದ ನಾವು ನಮ್ಮ ಸ್ವಂತ ಲಾಭಕ್ಕಾಗಿ ಮಾತ್ರವಲ್ಲದೆ ಪ್ರಪಂಚದ ಪ್ರಯೋಜನಕ್ಕಾಗಿ ಕೆಲಸ ಮಾಡಬೇಕು. ಇವು ಪ್ರಸ್ತುತದಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸುವ ಸಾಧನಗಳಾಗಿವೆ. (ಅಕ್ಟೋಬರ್ 28, 2016 ರಂದು ಯಾರ್ಕ್ ವಿಶ್ವವಿದ್ಯಾಲಯ, ಇಂಟರ್‌ಯು, ಕೆನಡಾ)

ಖಿಲಾಫ಼ತ್ ಬೇಲಿಯ ನೆರಳಿನಲ್ಲಿ ಆರೋಗ್ಯದ ಉದಾಹರಣೆಯೆಂದರೆ, ಕರೋನಾ ಸಾಂಕ್ರಾಮಿಕ ರೋಗ ಹರಡಿದ ನಂತರ, ಸಾಮೂಹಿಕ ಪ್ರಾರ್ಥನೆ ಮಾಡಲು ವಿಶ್ವದ ಹೆಚ್ಚಿನ ಧಾರ್ಮಿಕ ಗುಂಪುಗಳು ಹಿಂಜರಿಯುತ್ತಿವೆ ಮತ್ತು ಅದಿರುದಾಟಿದಂತೆ ತೋರಿತು. ಮುಸ್ಲಿಂ ವಲಯಗಳಲ್ಲಿ, ಮನೆಗಳನ್ನು ಮಸೀದಿಗಳನ್ನಾಗಿ ಬದಲಾಯಿಸಲಾಗಿದೆ, ದೈನಂದಿನ ಐದು ಪ್ರಾರ್ಥನೆಗಳು ಮತ್ತು ಶುಕ್ರವಾರದ ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳು ಭುಗಿಲೆದ್ದವು ಮತ್ತು ಕೆಲವು ಸ್ಥಳಗಳಲ್ಲಿ ಅವು ಘರ್ಷಣೆಯ ಹಂತವನ್ನು ತಲುಪಿದವು. ಕೆಲವರು ರಜೆಯ ಹೊರತಾಗಿಯೂ ಮಸೀದಿಗೆ ಹಾಜರಾಗುವುದು ಮತ್ತು ಸಾಮೂಹಿಕ ಪ್ರಾರ್ಥನೆಯನ್ನು ಎಚ್ಚರಿಕೆಯಿಂದ ನಿರ್ವಹಿಸುವುದು ಅಗತ್ಯವೆಂದು ಘೋಷಿಸಿದರು. ಮತ್ತು ಫಲಿತಾಂಶವು ನಷ್ಟವನ್ನು ಅನುಭವಿಸಿದರು ಮತ್ತು ಕೆಲವರು ಎಚ್ಚರಿಕೆಯ ಹೆಸರಿನಲ್ಲಿ ಆರಾಧನೆಯನ್ನು ತ್ಯಜಿಸಿದರು, ಆದರೆ ಇಮಾಮ್ ಅಹ್ಮದಿಯಾ ಆಲಂಗೀರ್ ರವರು ಮಾರ್ಚ್ 27, 2020 ರಂದು ತಮ್ಮ ಕಛೇರಿಯಿಂದ ವಿಶೇಷ ಸಂದೇಶವನ್ನು ಪ್ರಸಾರ ಮಾಡಿದರು, ಸಾಂಕ್ರಾಮಿಕ ಸಮಯದಲ್ಲಿ ಪ್ರಪಂಚದಾದ್ಯಂತದ ಅಹ್ಮದಿಯರು ಮನೆಯಲ್ಲಿಯೇ ಇರಬೇಕೆಂದು ಮತ್ತು ತಮ್ಮ ಮನೆಗಳಲ್ಲಿಯೇ. ಐದು ಹೊತ್ತಿನ ಪ್ರಾರ್ಥನೆ ಮತ್ತು ಶುಕ್ರವಾರ ಜುಮಾ ನಮಾಜ್ ಅನ್ನು ನಿರ್ವಹಿಸಲು ಸಲಹೆ ನೀಡಿದರು.

ಇದರ ಮೇಲೆ ಖಲೀಫರ ಬಾಹುಗಳಾದ, ಜಮಾಅತ್ತಿನ ವ್ಯವಸ್ಥೆಯು ಚಲನೆಗೆ ಬಂದಿತು ಮತ್ತು ಅಹ್ಮದೀಯರಿಗೆ ತಮ್ಮ ಮನೆಗಳಲ್ಲಿ ಪ್ರಾರ್ಥನೆ ಮಾಡಲು ಸಾಧ್ಯವಿರುವ ಎಲ್ಲಾ ವಿಧಾನಗಳನ್ನು ಕಲಿಸಲಾಯಿತು. ಇದರಿಂದ ಪ್ರತಿಯೊಂದು ಅಹ್‌ಮದಿಯು ತಮ್ಮ ಮನೆಗಳಲ್ಲಿ ಪ್ರಾರ್ಥನೆಯನ್ನು ಮಾಡಲು ಪ್ರಾರಂಭಿಸಿದರು. ಆದುದರಿಂದ ಕಾಲದ ಇಮಾಮರನ್ನು ಅನುಸರಿಸದವರು ಸಂದಿಗ್ಧ ಪರಿಸ್ಥಿತಿಗೆ ಒಳಗಾದರು. ಇನ್ನೊಂದೆಡೆ ಖಿಲಾಫತ್ತಿನ ಅನುಗ್ರಹದಿಂದ ಭಯ–ಆತಂಕಗಳಿರಲಿಲ್ಲ, ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯವೂ ಇರಲಿಲ್ಲ. ಶಾಂತಿಯ ಭದ್ರಕೋಟೆಯಲ್ಲಿ ಇದ್ದವರು ಚೆನ್ನಾಗಿರದೆ ಇರಲು ಹೇಗೆ ಸಾಧ್ಯ?

ಹಾಗಾಗಿ ಖಿಲಾಫತ್ ವ್ಯವಸ್ಥೆಯು ಒಂದು ಕಡೆ ನಂಬಿಕೆಯ ಗಟ್ಟಿಯಾದ ಬಂಡೆಯ ಮೇಲೆ ಆಧಾರಿತವಾಗಿದ್ದರೆ, ಇನ್ನೊಂದು ಬದಿಯಲ್ಲಿ ಅದರ ಗೋಡೆಗಳು ಲೋಕಗಳ ಪ್ರಭುವಿನ ಸಿಂಹಾಸನವನ್ನು ಸ್ಪರ್ಶಿಸುತ್ತಿವೆ. ಸರ್ವಶಕ್ತ ದೇವನ ಬೆಂಬಲ ಮತ್ತು ಸಹಾಯ ಮತ್ತು ರಕ್ಷಣೆ ಯಾವಾಗಲೂ ಸಮರ್ಪಿತವಾಗಿದೆ. ಹುಝೂರ್ ಅನ್ವರ್ (ಅಯ್ಯದುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್) ರವರ ಪ್ರಾರ್ಥನೆಯ ಫಲವಾಗಿ ಮತ್ತು ಅವರ ಸಾಂತ್ವನ ಮತ್ತು ಉತ್ತೇಜಕ ಮಾತುಗಳ ಮೂಲಕ, ಸಮುದಾಯದ ಸದಸ್ಯರ ಮನಸ್ಸಿಗೆ ಶಾಂತಿ ಸಿಗುತ್ತದೆ. ಮತ್ತು ಅವರು ಶಾಂತಿ, ಸುವ್ಯವಸ್ಥೆಯ ಭರವಸೆಯನ್ನು ಪಡೆಯುತ್ತಾರೆ.

ಮುಕರ್‌ರಂ ಮುನೀರ್ ಜಾವೇದ್ ಸಾಹಿಬ್ ಖಾಸಗಿ ಕಾರ್ಯದರ್ಶಿ ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: ಮೇ 4, 2006ರ ಗುರುವಾರ ದಂದು ಹುಝೂರ್ ಅನ್ವರ್(ಅತಬಿಅ) ರವರು ತಮ್ಮ ಪ್ರವಾಸದ ಸಂದರ್ಭದಲ್ಲಿ ದೂರದ ಪೂರ್ವ ದೇಶವಾದ ನಾಂದಿಯ ಫಿಜಿಯಲ್ಲಿದ್ದರೂ. ರಾತ್ರಿ 2:30 ರ ಸುಮಾರಿಗೆ ರಬ್ವಾ, ಲಂಡನ್ ಮತ್ತು ಪ್ರಪಂಚದ ವಿವಿಧ ದೇಶಗಳಿಂದ ಕರೆಗಳು ಬರಲು ಪ್ರಾರಂಭಿಸಿದವು,

ಆ ಸಮಯದಲ್ಲಿ ಟೀವಿಯ ವರದಿಯ ಪ್ರಕಾರ, ಫಿಜಿ ಮತ್ತು ಪಕ್ಕದ ಟೋಂಗಾ ದ್ವೀಪಗಳಿಗೆ ಭಾರಿ ಸುನಾಮಿ ಚಂಡಮಾರುತ ಅಪ್ಪಳಿಸಿದೆ ಮತ್ತು ಲಕ್ಷಾಂತರ ಜನರನ್ನು ಮುಳುಗಿಸಿದ ಇಂಡೋನೇಷಿಯಾದ ಸುನಾಮಿಗಿಂತ ಪ್ರಬಲವಾಗಿದೆ. ಪ್ರಪಂಚದ ಅನೇಕ ದೇಶಗಳಲ್ಲಿ ವಿನಾಶ ಸಂಭವಿಸಿದೆ. ನಾನು ಟೀವಿ ಆನ್ ಮಾಡಿದಾಗ, ಈ ಸುನಾಮಿ ತನ್ನ ತೀವ್ರತೆ ಮತ್ತು ಶಕ್ತಿಯಲ್ಲಿ ನಿರಂತರವಾಗಿ ಹೆಚ್ಚುತ್ತಿತ್ತು ಮತ್ತು ಬೆಳಿಗ್ಗೆ ನಾಂದಿಯ ಫಿಜಿ ಪ್ರದೇಶವನ್ನು ಸಂಪೂರ್ಣ ಮುಳುಗಿಸುತ್ತದೆ ಎಂದು ಸುದ್ದಿ ಬರುತ್ತಿತ್ತು.

ಬೆಳಗಿನ ಜಾವ 4:30ಕ್ಕೆ ಹುಝೂರ್ ಅನ್ವರ್(ಅತಬಿಅ) ರವರು ಫಜ್ರ್ ನಮಾಝ್ ಮಾಡಲು ಬಂದಾಗ ಚಂಡಮಾರುತದ ವರದಿಯನ್ನು ಹುಝೂರ್ ಅನ್ವರ್(ಅತಬಿಅ) ರವರಿಗೆ ಸಲ್ಲಿಸಿ ಯೋಗಕ್ಷೇಮ ವಿಚಾರಿಸಲು ಬಂದ ದೂರವಾಣಿ ಸಂದೇಶಗಳನ್ನು ತಿಳಿಸಲಾಯಿತು.

ಹುಝೂರ್ ಅನ್ವರ್(ಅತಬಿಅ) ರವರು ನಮಾಝ್ ನೇತೃತ್ವ ವಹಿಸಿ ಸುದೀರ್ಘ ಪ್ರಾರ್ಥನೆ ಸಲ್ಲಿಸಿದರು. ಮತ್ತು ದೇವನ ಮುಂದೆ ಪ್ರಾರ್ಥಿಸಿದರು. ಪ್ರಾರ್ಥನೆ ಮುಗಿದ ನಂತರ, ಮಸೀಹರ ಖಲೀಫರು ಜಮಾತಿನ ಸದಸ್ಯರನ್ನು ಉದ್ದೇಶಿಸಿ, "ಚಿಂತಿಸಬೇಡಿ, ಅಲ್ಲಾಹ್ ನಿಮ್ಮನ್ನು ಅನುಗ್ರಹಿಸುತ್ತಾನೆ ಮತ್ತು ಏನೂ ಆಗುವುದಿಲ್ಲ" ಎಂದು ಹೇಳಿದರು. ಬಳಿಕ ಹುಝೂರ್ ಅನ್ವರ್(ಅತಬಿಅ) ರವರು ಮರಳಿ ಬಂದರು. ಹಿಂದಿರುಗಿ ಬಂದು ಟೀವಿ ಆನ್ ಮಾಡಿದಾಗ ಈ ಸುನಾಮಿಯ ಬಲವು ಕುಸಿಯುತ್ತಿದೆ ಮತ್ತು ಅದರ ತೀವ್ರತೆಯು ನಿಧಾನವಾಗಿ ಕೊನೆಗೊಳ್ಳುತ್ತಿದೆ ಎಂದು ಟೀವಿಯಲ್ಲಿ ಕೇಳಲು ಪ್ರಾರಂಭಿಸಿದೆವು. ನಂತರ, ಎರಡೂವರೆ ಗಂಟೆಗಳ ನಂತರ, ಈ ಚಂಡಮಾರುತದ ಅಸ್ತಿತ್ವವು ಕಣ್ಮರೆಯಾಯಿತು ಎಂದು ತಿಳಿದುಬಂದಿದೆ.

ಅಂದು ಈ ಜಗತ್ತು ಒಂದು ಅದ್ಭುತ ದೃಶ್ಯವನ್ನು ಕಂಡಿತು ಸುನಾಮಿ ಮುಂದಿನ ಕೆಲವೇ ಗಂಟೆಗಳಲ್ಲಿ, ಲಕ್ಷಾಂತರ ಜನರನ್ನು ಮುಳುಗಿಸಿ, ಇಡೀ ಪ್ರದೇಶವು ನಾಶಮಾಡಬೇಕಿತ್ತು.

ಕಾಲದ ಖಲೀಫರ ಪ್ರಾರ್ಥನೆಯೊಂದಿಗೆ, ಕೆಲವೇ ಗಂಟೆಗಳಲ್ಲಿ,

ಸುನಾಮಿಯ ಅಸ್ತಿತ್ವವು ಕಣ್ಮರೆಯಾಗಿದ್ದು ಅದ್ಭುತಕ್ಕಿಂತ ಬೇರೇನೂ ಅಲ್ಲ. ಆ ದಿನ ಫಜಿಯ ಪತ್ರಿಕೆಗಳು ಸಂಪೂರ್ಣ ಸುನಾಮಿ ಪವಾಡಕ್ಕಿಂತ ಕಡಿಮೆಯಿಲ್ಲ ಎಂದು ವರದಿ ಮಾಡಿವೆ.

ಸರ್ವಶಕ್ತನಾದ ಅಲ್ಲಾಹನು ಖಿಲಾಫತ್‌ನ ಅನುಗ್ರಹವನ್ನು ಸೂರಾ ಅಲ್-ನೂರ್‌ನ 56ನೇ ವಚನದಲ್ಲಿ ಉಲ್ಲೇಖಿಸಿದ್ದಾನೆ. ಮತ್ತು ಅವರ ಭಯದ ಸ್ಥಿತಿಯ ನಂತರ, ಅವನು ಖಂಡಿತವಾಗಿಯೂ ಅವರನ್ನು ಶಾಂತಿಯ ಸ್ಥಿತಿಗೆ ಬದಲಾಯಿಸುವನೆಂದು ಅವನು ಹೇಳಿದ್ದಾನೆ. ಅದೇನೆಂದರೆ, ಈ ಮಹಾನ್ ಅನುಗ್ರಹದಿಂದ, ಈ ವಿಶ್ವಾಸಿಗಳ ಗುಂಪಿಗೆ ಮೂರನೇ ಪ್ರತಿಫಲವನ್ನು ನೀಡಲಾಗುವುದು ಎಂದು ಅಲ್ಲಾಹನ ವಾಗ್ದಾನವೂ ಇದೆ, ಅವರು ಯಾವುದಾದರೂ ಕಾರಣಕ್ಕಾಗಿ ಭಯದ ಸ್ಥಿತಿಯನ್ನು ಎದುರಿಸಬೇಕಾಗಿ ಬಂದಾಗ, ಅಲ್ಲಾಹನು ಅದನ್ನು ಶಾಂತಿಯ ಸ್ಥಿತಿಯನ್ನಾಗಿ ಪರಿವರ್ತಿಸುತ್ತಾನೆ. ಈ ಹಿನ್ನೆಲೆಯಲ್ಲಿ 1911ರಲ್ಲಿ ಹಾಲೆಂಡ್‌ನಲ್ಲಿ ಒಂದು ಘಟನೆ ನಡೆಯಿತು. ಹುಝೂರ್ ಅನ್ವರ್(ಅತಬಿಅ)ರವರು ಶುಕ್ರವಾರ, ಡಿಸೆಂಬರ್ 9, 1911 ರಂದು ತಮ್ಮ ಜುಮಾ ಖುತ್ಬಾದಲ್ಲಿ ಹೇಳುತ್ತಾರೆ, ನಾನು ಹಿಂದೆ ಯುರೋಪ್ ಪ್ರವಾಸಕ್ಕೆ ಹೋದಾಗ, ಹಿಂದಿರುಗುವ ಸಂದರ್ಭದಲ್ಲಿ ನಾನು ಒಂದು ಶುಕ್ರವಾರ ಹಾಲೆಂಡ್‌ನಲ್ಲಿ ಖುತ್ಬಾ ನೀಡಿದೆ. ಮತ್ತು ಅಲ್ಲಿ ನಾನು ಸಂಸತ್ತಿನ ರಾಜಕಾರಣಿ ಮತ್ತು ಪಕ್ಷದ ನಾಯಕ ಖೈರತ್ ವಿಲ್ಡರ್‌ರನ್ನು ಭೇಟಿಯಾದೆ.

ನೀವು ಇಸ್ಲಾಂ ಮತ್ತು ಪವಿತ್ರ ಪ್ರವಾದಿ(ಸ) ರವರ ವಿರುದ್ಧ ಕೆಟ್ಟದಾಗಿ ಮಾತನಾಡುತ್ತಿದ್ದೀರಿ ಎಂದು ಅವರಿಗೆ ಜುಮಾ ಖುತ್ಬಾದಲ್ಲಿ ಈ ಸಂದೇಶವನ್ನು ನೀಡಿದ್ದೆ. ನೀವು ಕಠಿಣತೆಯಲ್ಲಿ ಬೆಳೆಯುತ್ತಿದ್ದೀರಾ ಮತ್ತು ದ್ವೇಷದಲ್ಲಿ ಮೀರಿದ್ದೀರಿ. ಇಂತಹ ಕೃತ್ಯಗಳಿಂದ ಹೊರಬನ್ನಿ. ಇಲ್ಲದಿದ್ದರೆ ದೇವನ ಲಾಟಿಗೆ ಹೆದರಿ. ಇದು ದೇವನ ಮೂಕ ಬೆದರಿಸುವಿಕೆಯಾಗಿದೆ, ಸಮಯ ಬಂದಾಗ ನಿಮ್ಮಂತಹವರನ್ನು ನಾಶಪಡಿಸುತ್ತದೆ. ನಿಗದಿತ ಸಮಯ ನಿಮ್ಮಂತಹ ಜನರನ್ನು ಹಿಡಿಯುವ ಶಕ್ತಿಯು ದೇವನಲ್ಲಿದೆ. ನಾವು ಶಕ್ತಿಹೀನರಾಗಿದ್ದೇವೆ.

ನಮ್ಮಲ್ಲಿ ಯಾವುದೇ ಲೌಕಿಕ ಆಯುಧಗಳಿಲ್ಲ ಎಂದು ನಾನು ಅವರಿಗೆ ಹೇಳಿದ್ದೆ ಮತ್ತು ನಿಮ್ಮಂತಹವರ ವಿರುದ್ಧ ಪ್ರಾರ್ಥನೆಯೊಂದಿಗೆ ಹೋರಾಡುತ್ತೇವೆ. ಎಂದು ನಾನು ಅವರಿಗೆ ಹೇಳಿದ್ದೆ. ಪತ್ರಿಕಾ ವಿಭಾಗವು ಕಳುಹಿಸಿರುವ ಖುತ್ಬಾ ಸಾರಾಂಶವನ್ನು ಒಳಗೊಂಡ ಪತ್ರಿಕಾ ಪ್ರಕಟಣೆಯನ್ನು ಉಸ್ತುವಾರಿಯವರು ಸಿದ್ಧ ಪಡಿಸಿ ನನ್ನ ಬಳಿ ತಂದಾಗ, ಎಲ್ಲಾ ವಿಷಯಗಳನ್ನು ಬರೆದಿದ್ದರೂ, ಆದರೆ ಅವರು ಆ ವಾಕ್ಯವನ್ನು ಬರೆದಿರಲಿಲ್ಲ. ಆಗ ನಮ್ಮಲ್ಲಿ ಲೌಕಿಕ ಆಯುಧಗಳಿಲ್ಲ ಎಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಬೇಕು, ಮತ್ತು ಆ ವಾಕ್ಯವನ್ನು ಖಂಡಿತವಾಗಿಯೂ ಬರೆಯಬೇಕು ಎಂದು ನಾನು ಅವರಿಗೆ ಹೇಳಿದೆ. ನೀವು ಮತ್ತು ನಿಮ್ಮಂತಹವರು ನಾಶವಾಗಬೇಕೆಂದು ನಾವು ಪ್ರಾರ್ಥಿಸುತ್ತೇವೆ. ಮತ್ತು ವಾಸ್ತವವೆಂದರೆ ನಮ್ಮ ಎಲ್ಲಾ ವಿರೋಧಿಗಳು ಮತ್ತು ಶತ್ರುಗಳ ವಿರುದ್ಧದ ನಮ್ಮ ಹೋರಾಟವು ವಾದಗಳೊಂದಿಗೆ ಅಥವಾ ಎಲ್ಲಕ್ಕಿಂತ ಹೆಚ್ಚಾಗಿ ಪ್ರಾರ್ಥನೆಗಳೊಂದಿಗೆ ಆಗಿದೆ ಆದಾಗ್ಯೂ, ಈ ಪತ್ರಿಕಾ ಪ್ರಕಟಣೆಯನ್ನು ರಾಜಕಾರಣಿಯಾಗಿರುವ ಖೈರತ್ ವಿಲ್ಡರ್ ಅವರು ಓದಿದರು ಮತ್ತು ಅವರು ತಮ್ಮ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರಕ್ಕೆ, ಗೃಹ ಸಚಿವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಅವರು ಪತ್ರಿಕಾಗೋಷ್ಠಿಗೆ ಬಂದಾಗ ಅಲ್ಲಿನ ಜಮಾತ್‌ನವರು ಹೀಗೆ ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ನನಗೆ ಪತ್ರ ಬರೆದರು. ಜಮಾತ್‌ನವರು ಕೊಂಚ ದಿಗಿಲು ಗೊಂಡಂತಿತ್ತು. ಈ ಕುರಿತು ಗೃಹ ಇಲಾಖೆಯನ್ನು ಕೇಳಿದರೆ ಭಯ ಪಡುವ ಅಗತ್ಯವಿಲ್ಲ, ಆತಂಕ ಪಡುವ ಅಗತ್ಯವಿಲ್ಲ, ನನ್ನ ನಿಲುವನ್ನು ಬಹಿರಂಗವಾಗಿ ಹೇಳುತ್ತೇನೆ ಎಂದು ತಿಳಿಸಿದರು. ಪವಿತ್ರ ಪ್ರವಾದಿ(ಸ) ರವರ ಬಗ್ಗೆ ತಪ್ಪು ತಿಳುವಳಿಕೆಯನ್ನು ಸೃಷ್ಟಿಸಿದನು. ಅವನು ತುಂಬಾ ಕಟುವಾದ ಭಾಷೆ ಬಳಸಿದನು. ಇಸ್ಲಾಂ ಧರ್ಮವನ್ನು ಅವಮಾನಿಸುವುದರ ಮೂಲಕ ಕುಕೃತ್ಯವನ್ನು ಮಾಡುವ ವ್ಯಕ್ತಿಯಿಂದ ಬುನಾದಿಯನ್ನು ಹಾಕಲಾಗಿದೆ. ನಾವು ಅವನ ಪ್ರಶ್ನೆಗೆ ಉತ್ತರಿಸಿದ್ದೇವೆ ಅಷ್ಟೇ.

ಮತ್ತು ಸರ್ವಶಕ್ತನಾದ ದೇವನಿಗೆ ಅವನ ಪ್ರವಾದಿಯ ಬಗ್ಗೆ ಗೌರವವಿದೆ ಮತ್ತು ಅವನನ್ನು ಹಿಡಿಯಬಹುದು ಎಂದು ಹೇಳಿದ್ದೇವೆ. ಸರ್ವಶಕ್ತ ದೇವನಿಗೆ ಭಯಪಡಬೇಕು ಎಂದು ಹೇಳಿದ್ದೆ.

ಆದರೆ, ಕೆಲವು ದಿನಗಳ ನಂತರ ಅವರು ತಮ್ಮ ಸರ್ಕಾರಕ್ಕೆ ಕಳುಹಿಸಿದ ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡಿತು ಮತ್ತು ಅದು ಅಲ್ಲಿನ ಪತ್ರಿಕೆಯಲ್ಲಿಯೂ ಪ್ರಕಟವಾಯಿತು.

ಈ ಲೇಖನದ ಮೂಲಕ ವಿಶ್ವ ಮುಸ್ಲಿಮ್ ನಾಯಕ ಡಚ್ ರಾಜಕಾರಣಿ ಗ್ರೀಟ್ ವಿಲ್ಡರ್‌ಗೆ ಎಚ್ಚರಿಕೆಯನ್ನು ಕಳುಹಿಸಿದ್ದಾರೆ ನೀವು ಅಂದರೆ ಹಾಲೇಂಡ್‌ನ ಆಂತರಿಕ ಸಚಿವಾಲಯದವರಿಗೆ ಇದರ ಬಗ್ಗೆ ತಿಳಿದಿದೆಯೇ? ಎಂದು ವಿಲ್ಡರ್ ಅವರ ಮೊದಲ ಪ್ರಶ್ನೆಯಾಗಿದೆ. ಅದಕ್ಕೆ ಆಂತರಿಕ ಸಚಿವರು ಹೌದು ನಮಗೆ ಗೊತ್ತು. ನಾನು ಈ ಲೇಖನವನ್ನು ಓದಿದ್ದೇನೆ ಎಂದು ಉತ್ತರಿಸಿದರು.

ನಂತರ ಅವರ ಮುಂದಿನ ಪ್ರಶ್ನೆ ಹೀಗಿತ್ತು, (ನನ್ನ ಹೆಸರು ತೆಗೆದುಕೊಳ್ಳಲಾಗಿತ್ತು) ಮಿರ್ಝಾ ಮಸ್ರೂರ್ ಅಹಮದ್, ನಿಮ್ಮ ಪಕ್ಷ ಮತ್ತು ನಿಮ್ಮಂತಹ ಎಲ್ಲರೂ ನಾಶವಾಗುತ್ತಾರೆ ಎಂದು ಹೇಳಿದರು. ನಂತರ ವಿಲ್ಡರ್ ಮಂತ್ರಿಗೆ ಅದನ್ನು ಸ್ವತಃ ವಿವರಿಸಿ ಬರೆಯುತ್ತಾರೆ. ಸಚಿವಾಲಯ ಈ ಭ್ರಷ್ಟ ಹೇಳಿಕೆಯ ಬಗ್ಗೆ ಇಸ್ಲಾಮಿಕ್ ಸಂಘಟನೆಯ ವಿರುದ್ಧ ಎಂತಹ ಕ್ರಮಗಳನ್ನು ತೆಗೆದುಕೊಳ್ಳಲು ಆಂತರಿಕ ಇಲಾಖೆ ಉದ್ದೇಶಿಸಿದೆ? ಡಚ್ ಆಂತರಿಕ ಸಚಿವರು ಪತ್ರಿಕಾ ಪ್ರಕಟಣೆಯ ಪ್ರಕಾರ, ಅಂತಹ ಜನರನ್ನು ಗಲಭೆಗಳು ಅಥವಾ ಇತರ ಜಾತ್ಯತೀತ ತಂತ್ರಗಳಿಂದ ಕೊಲ್ಲಲಾಗುವುದಿಲ್ಲ, ಆದರೆ ಪ್ರಾರ್ಥನೆಯ ಮೂಲಕ ನಾಶವಾಗುತ್ತಾರೆ ಎಂದು ಮಿರ್ಝಾ ಮಸ್ರೂರ್ ಅಹ್ಮದ್ ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಕಿಡಿಗೇಡಿತನವನ್ನು ಅಥವಾ ಪ್ರಚೋದನೆಯನ್ನು ಉಂಟುಮಾಡುವ ಯಾವುದನ್ನೂ ನಾನು ನೋಡುತ್ತಿಲ್ಲ. ಆದ್ದರಿಂದ, ಅಹ್ಮದಿಯಾ ಮುಸ್ಲಿಂ ಜಮಾಅತ್ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲು ನನಗೆ ಯಾವುದೇ ಪುರಾವೆಗಳಿಲ್ಲ. ನಂತರ ಮೂರನೇ ಪ್ರಶ್ನೆ. ಅಹ್ಮದಿಯಾ ಮುಸ್ಲಿಂ ಹಾಲೆಂಡ್ ಸಮುದಾಯ ಮತ್ತು ಜಾಗತಿಕ ಅಹ್ಮದಿಯಾ ಜಮಾಅತ್ ಮತ್ತು ಮಸ್ರೂರ್ ಅಹ್ಮದ್‌ರವರಿಗೆ ಏನು ಸಂಬಂಧ ಎಂದು ಕೇಳಿದರು. ಅಹ್ಮದಿಯಾ ಮುಸ್ಲಿಂ ಹಾಲೆಂಡ್ ಸಮುದಾಯವು ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಒಂದು ಭಾಗವಾಗಿದೆ ಎಂದು ಡಚ್ ಸಚಿವರು ಉತ್ತರಿಸಿದರು.

ಖಿಲಾಫತ್ ಒಂದು ಕೋಟೆಯಾಗಿದ್ದು, ಅದರ ಗೋಡೆಗಳು ಭಯದ ಮಿತಿಗಿಂತ ಎತ್ತರವಾಗಿದೆ. ಅದು ಬೂಟಾಟಿಕೆ ಅಥವಾ ಹಗೆತನದ ಭಯವಾಗಿರಲಿ. ಅದು ಯುದ್ಧವಾಗಲಿ ಅಥವಾ ಗುಂಪಿನ ರಾಜಕೀಯವಾಗಲಿ ಅಥವಾ ರಾಜಪ್ರಭುತ್ವವಾಗಲಿ. ಯಾವುದೇ ಸಂದರ್ಭದಲ್ಲಿ, ಖಿಲಾಫತ್ ಶಾಂತಿಯ ಸಂಕೇತವಾಗಿದೆ. ಅತಿ ದೊಡ್ಡ ಸರಕಾರವೂ ಅದಕ್ಕೆ ಧಕ್ಕೆ ತರಲಾರದು, ಆದರೆ ಖಿಲಾಫತ್‌ಗೆ ವಿರುದ್ಧವಾಗಿ ನಿಂತ ಸರಕಾರ ಛಿದ್ರವಾಗುತ್ತದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಖಿಲಾಫತ್ ಒಂದು ಜೀವಂತ ಪಂಜರವಾಗಿದೆ, ಅದು ಪತ್ರಗಳ ಮೂಲಕವಾದರೂ, ಹುಝೂರ್ ರವರಿಗೆ ಪ್ರಾರ್ಥನೆಗಳನ್ನು ಮಾಡುವ ಮೂಲಕವಾದರೂ ಮತ್ತು ಜಮಾಅತಿನೊಂದಿಗೆ ಸಂಪರ್ಕ ಟ್ಟುಕೊಂಡರೂ ಸರ್ವಶಕ್ತನಾದ ಅಲ್ಲಾಹನು ಅವನನ್ನು ಶಾಂತಿಯ ಆವರಣದಲ್ಲಿ ಇರಿಸುತ್ತಾನೆ.

ಐವರಿ ಕೋಸ್ಟ್‌ನ ಒಬ್ಬ ಯುವ ಪೈಲಟ್ ಒಂದು ವರ್ಷದ ಕೋರ್ಸ್‌ಗಾಗಿ ಬೆಲ್ಜಿಯಂಗೆ ಬಂದಿದ್ದರು. ಇಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಸಭೆಯನ್ನು ನಡೆಸಿದರು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಪ್ರಾರ್ಥನೆಯ ಕಾರಣದಿಂದಾಗಿ ಅವರು ಪೈಲಟ್ ಆಗಿ ಆಯ್ಕೆಯಾದರು ಎಂದು ಹೇಳಿದರು. ಕೆಲವು ವರ್ಷಗಳ ಹಿಂದೆ ಐವರಿಕೋಸ್ಟ್‌ನಲ್ಲಿ ಜಲ್ಸ ಸಾಲಾನದ ಸಮಾರಂಭದಲ್ಲಿ ಭಾಗವಹಿಸಿದಾಗ, ಅಲ್ಲಿ ಅವನ ಸ್ನೇಹಿತ ಅವನಿಗೆ ಹೇಳಿದನು, ನಾನು ಒಂದು ಜಾಹೀರಾತನ್ನು ನೋಡಿದೆ ಐವರಿಕೋಸ್ಟ್ ತನ್ನ ಸೇವೆಗೆ ಸೇರಲು ಜನರಿಗೆ ಪೈಪೋಟಿ ಏರ್ಪಡಿಸಿದೆ. ಆದರೆ ಅರ್ಜಿ ಸಲ್ಲಿಕೆ ದಿನಾಂಕ ಮೀರಿದೆ. ಅವರು ಹೇಳುತ್ತಾರೆ, ನಾನು ಪ್ರಾರ್ಥನೆಗಾಗಿ ಹುಝೂರ್ ಅನ್ವರ್‌ಗೆ ದುವಾ ಮಾಡಲಿಕ್ಕಾಗಿ ಪತ್ರ ಬರೆದೆ ಮತ್ತು ನನ್ನ ಅರ್ಜಿಯನ್ನು ಸಹ ಸಲ್ಲಿಸಿದೆ. ಕೆಲವು ದಿನಗಳ ನಂತರ ನೀವು ಅರ್ಜಿಯನ್ನು ತಡವಾಗಿ ಸಲ್ಲಿಸಿದ್ದೀರಿ, ಆದರೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ನಾವು ನಿಮಗೆ ಅವಕಾಶ ನೀಡುತ್ತೇವೆ ಎಂಬ ಉತ್ತರವು ಬಂದಿತು. ನಂತರ ಅವರು ಈ ಸ್ಪರ್ಧೆಗೆ ಲಿಖಿತ ಪರೀಕ್ಷೆಯನ್ನು ನೀಡಿದರು ಮತ್ತು 1000 ಅಭ್ಯರ್ಥಿಗಳಲ್ಲಿ 15 ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಯಿತು. ಇದರಲ್ಲಿ ಅವರ ಹೆಸರೂ ಸೇರಿತ್ತು. ಇದೆಲ್ಲವೂ ಹುಝೂರ್ ಅನ್ವರ್(ಅತಬಿಅ) ಅವರ ಪ್ರಾರ್ಥನೆಯಿಂದ ನಡೆದಿದೆ ಎಂದರು. (ಅಕ್ಟೋಬರ್ 25, 2019 ರಂದು ಅಲ್-ಫಜಲ್ ಇಂಟರ್‌ನ್ಯಾಷನಲ್‌ನಿಂದ ವರದಿಯಾಗಿದೆ, ಪುಟ 20)

ಜರ್ಮನಿಯ ಮಗುವೊಂದು ಇದನ್ನು ವ್ಯಕ್ತಪಡಿಸಿದೆ. ಸರ್ವಶಕ್ತನಾದ ಅಲ್ಲಾಹನು ನನ್ನ ಕುಟುಂಬವನ್ನು ಎಲ್ಲಾ ರೀತಿಯ ಸಮಸ್ಯೆಗಳಿಂದ ದೂರ ವಿಡಲಿ ಮತ್ತು ಯಾರಿಗೂ ಯಾವುದೇ ರೀತಿಯ ತೊಂದರೆಯಾಗಬಾರದು ಎಂದು ನನ್ನ ಪ್ರೀತಿಯ ಹುಝೂರ್‌ರವರಲ್ಲಿ ನಾನು ಪ್ರಾರ್ಥನೆಗೆ ಪತ್ರ ಬರೆದಿದ್ದೆ ಎಂದು ಅವರು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ಚಿಕ್ಕಪ್ಪ ಒಬ್ಬರು ಪಾಕಿಸ್ತಾನದಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಿದ್ದರು, ಅವರ ಸಂಬಂಧಿಕರೆಲ್ಲರೂ ಹೊರ ದೇಶಗಳಲ್ಲಿ ಇದ್ದರು ಮತ್ತು ದೊಡ್ಡ ಸಮಸ್ಯೆಗಳನ್ನು ಎದುರಿಸುತ್ತಿದ್ದರು, ಆ ಸಮಯದಲ್ಲಿ, ನಾನು ಪ್ರೀತಿಯ ಹುಝೂರ್

ಅವರಿಗೆ ಪ್ರಾರ್ಥನೆ ಮಾಡಲಿಕ್ಕಾಗಿ ಪತ್ರವನ್ನು ಬರೆದಿದ್ದೆನು, ನಂತರ ಪರಿಸ್ಥಿತಿ ಅದ್ಭುತವಾದ ತಿರುವು ಪಡೆಯಿತು. ಕೆಲವೇ ದಿನಗಳಲ್ಲಿ ನಾರ್ವೆಯಿಂದ ಸಂಬಂಧವೊಂದು ಬಂದಿತ್ತು. ಮತ್ತು ಸಂಬಂಧವು ಇತ್ಯರ್ಥವಾಯಿತು. ಮತ್ತು ಅವರು ಅಲ್ಲಾಹನ ಕೃಪೆಯಿಂದ ನಾರ್ವೆಗೆ ಬಂದರು ಮತ್ತು ಈಗ ಅವರು ತಮ್ಮ ಹೆಂಡತಿ ಮಕ್ಕಳು ಮತ್ತು ಕುಟುಂಬದೊಂದಿಗೆ ಅಲ್ಲಿ ಸಂತೋಷದಿಂದ ಬದುಕುತ್ತಿದ್ದಾರೆ. ಇದು ಖಿಲಾಫತ್ತಿನ ಅನುಗ್ರಹವಾಗಿದೆ. ಈ ತೃಪ್ತಿಯು ಜೀವನದ ಸಾಧನವಾಗಿದೆ.

ಕೆನಡಾದ ದರ್ಹಮ್ ಜಮಾತ್‌ನ ಮಹಿಳೆಯೊಬ್ಬರು ತಮ್ಮ ಕಥೆಯನ್ನು ಮುರಬ್ಬಿ ಸಾಹೇಬರಿಗೆ ವಿವರಿಸಿದರು, ಈ ಘಟನೆಯೂ, ತುಂಬಾ ಆಸಕ್ತಿದಾಯಕವಾಗಿದೆ, ಅದರಲ್ಲಿ ಅವರು ಕೆಲವು ವರ್ಷಗಳ ಹಿಂದೆ ನಮ್ಮ ಕುಟುಂಬ ಜೀವನದಲ್ಲಿ ಅನೇಕ ಏರಿಳಿತಗಳನ್ನು ಅನುಭವಿಸಿದ್ದೆವು. ಮತ್ತು ಅವರ ನಡುವೆ ಅಂತಹ ಗಂಭೀರ ವ್ಯತ್ಯಾಸಗಳು ಇದ್ದವು, ಇನ್ನು ಮುಂದೆ ಈ ವ್ಯಕ್ತಿಯೊಂದಿಗೆ ಬದುಕಲು ಬಯಸುವುದಿಲ್ಲ ಎಂದು ನಾನು ನಿರ್ಧರಿಸಿದೆ. ಮತ್ತು ಈಗ ನಾನು ಬೇರ್ಪಡಲು ತೀರ್ಮಾನಿಸಿದ್ದೇನೆ. ಇದೇ ವೇಳೆ ಹುಝೂರ್ ಕೆನಡಾಕ್ಕೆ ಭೇಟಿ ನೀಡಿದರು. ಭೇಟಿಯ ಸಂದರ್ಭದಲ್ಲಿ ನಾನು ಸಹ ಹುಝೂರ್ ರವರೊಂದಿಗೆ ಮಾತುಕತೆ ನಡೆಸಲು ಅವಕಾಶ ನೀಡಬೇಕೆಂದು ಮನವಿ ಮಾಡಿದ್ದೆ. ಆ ಸಂದರ್ಭದಲ್ಲಿ ನಾನು ಪರಿಸ್ಥಿತಿಯನ್ನು ವಿವರಿಸಿದೆ ಮತ್ತು ಮಕ್ಕಳಿಗಾಗಿ ದುಆ ಮಾಡಬೇಕಾಗಿ ಕೋರಿದೆ ಮತ್ತು ನಾನು ಪ್ರತ್ಯೇಕಗೊಳ್ಳಲು ನಿರ್ಧರಿಸಿದ್ದೇನೆ ಎಂದು ಹುಝೂರ್ ರವರ ಬಳಿಯಲ್ಲಿ ನನ್ನನಿರ್ಧಾರವನ್ನು ಪ್ರಕಟಿಸಿದೆ. ಹುಝೂರ್ ಹೇಳಿದರು: ನಿಮ್ಮ ಪತಿ ಏನು ಹೇಳುತ್ತಾರೆ? ಅವನು ರಾಜಿಯಾಗಲು ಒಲವು ತೋರುತ್ತಾನೆ ಎಂದು ಮಹಿಳೆ ಹೇಳುತ್ತಾಳೆ. ಆದರೆ ನಾನು ಈಗ ಅಂತಿಮ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ, ರಾಜಿ ಮಾಡುವುದು, ಮತ್ತು ನಾನು ಹಿಂದಿರುಗುವುದು ಸಾಧ್ಯವೇ ಇಲ್ಲ, ಎಂದು ಉತ್ತರಿಸಿದಳು. ಆ ಸಮಯದಲ್ಲಿ ಹುಝೂರ್ ಹೇಳಿದರು, ಅವರು ರಾಜಿಯ ಕಡೆಗೆ ಒಲವು ತೋರಿದರೆ, ನಂತರ ರಾಜಿಯನ್ನು ಮಾಡಿಕೊಳ್ಳಿ, ಎಲ್ಲವೂ ಸರಿಯಾಗುವುದು, ಇನ್ಶಾಅಲ್ಲಾಹ್ ನಾನು ನಿರ್ಧಾರ ಮಾಡಿದ್ದೇನೆ, ಎಲ್ಲವೂ ಮುಗಿದಿದೆ ಮತ್ತು ಹುಝೂರ್‌ರವರು ಇಲ್ಲ, ರಾಜಿ ಮಾಡಿಕೊಳ್ಳಿ ಎಲ್ಲವೂ ಸರಿಹೋಗುತ್ತದೆ, ಇನ್ಶಾ ಅಲ್ಲಾಹ್ ಎಂದು ಹೇಳುವುದು ವಿಚಿತ್ರವಾಗಿದೆ. ಹಾಗಾಗಿ ಈಗ ನನಗೆ ಶರಣಾಗುವುದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ ಎಂದು ಅವಳು ಹೇಳುತ್ತಾಳೆ. ಅಲ್ಲಿಂದ ಹೊರಬಂದು ನನ್ನ ಪತಿಯನ್ನು ನಾನೇ ಕರೆದು ರಾಜಿ ಮಾಡಿಕೊಂಡೆ. ಅಲ್ಲಾಹ್ ತಾಲಾ ಹುಝೂರ್ ಅವರ ಈ ಮಾತುಗಳಲ್ಲಿ ಅಂತಹ ಸಾಂತ್ವನವನ್ನು ನೀಡಿದ್ದಾನೆ ಮತ್ತು ಈ ರಾಜಿಯ ನಂತರ ನಮ್ಮ ಜೀವನವು ಬದಲಾಗುವ ರೀತಿಯಲ್ಲಿ ಈ ಪದಗಳ ಮೂಲಕ ಅನುಗ್ರಹಿಸಿದನು. ಈಗ ನಮ್ಮಿಬ್ಬರ ನಡುವೆ ಪ್ರೀತಿ ವಾತ್ಸಲ್ಯ ತುಂಬಿದ ಸಂಬಂಧದ ಬುನಾದಿ ಹಾಕಿದ್ದು, ದಿನೇ ದಿನೇ ಮದುವೆ ಆಗುತ್ತಿದೆ ಎನ್ನುವಂತೆ ಅನ್ನಿಸುತ್ತಿದೆ. ಖಿಲಾಫತ್‌ನ ಈ ಅನುಗ್ರಹದಿಂದ ವಂಚಿತರಾದವರು ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯವಾದರೆ, ಅವುಗಳನ್ನು ವಿವರಿಸಲು ಯಾರೂ ಇಲ್ಲದಿರುವಾಗ, ಅವರಿಗಾಗಿ ಪ್ರಾರ್ಥಿಸಿ ಮತ್ತು ಅವರಿಗೆ ಸಾಂತ್ವನದ ಮಾತುಗಳನ್ನು ನೀಡಿದರೆ, ಅಹ್ಮದಿಯರ ಬಳಿ ತಮ್ಮ ಕಲೀಪರ ನ್ನು ಹೊಂದಿದ್ದಾರೆ. ಇದು ಒಂದು ದೊಡ್ಡ ಅನುಗ್ರಹದಂತೆ ನಮಗೆ ಲಭ್ಯವಿದೆ. ಖಿಲಾಫತೆ ಹಕ್ಕಾ ಇಸ್ಲಾಮ್ ಅಹ್ಮದಿಯಾದ ಅನುಗ್ರಹವಾಗಿದೆ ಮತ್ತು ಈ ಅನುಗ್ರಹವು ತೃಪ್ತಿಗೆ ಕಾರಣವಾಗಿದೆ.

ಮಹನೀಯರೇ! ಹುಝೂರ್ ಅನ್ವರ್(ಅತಬಿಅ) ಅವರು ವಿಶ್ವದ ಅಸಂಖ್ಯಾತ ದೇಶಗಳ ಸಭಾಂಗಣಗಳಿಗೆ ಹೋಗಿ ಇಸ್ಲಾಂ ಧರ್ಮದ ಶಾಂತಿಯುತ ಬೋಧನೆಗಳ ಬಗ್ಗೆ ಅತ್ಯಂತ ಪ್ರಭಾವಶಾಲಿ ಭಾಷಣಗಳನ್ನು ನೀಡಿದರು, ಇದರಿಂದಾಗಿ ಅವರಿಗೆ 'ಶಾಂತಿಯ ರಾಯಭಾರಿ' ಎಂಬ ಬಿರುದು ನೀಡಲಾಗಿದೆ. ಹುಝೂರ್ ರವರ ಭಾಷಣಗಳ ಮೂಲಕ ಇಸ್ಲಾಂ ಧರ್ಮದ ಪರಿಚಯವನ್ನು ಕೇಳಿದ ನಂತರ, ಅವರ ಧ್ವನಿಯು ನಮ್ಮ ಹೃದಯದಲ್ಲಿ ನೆಲೆಯಾಗಿದೆ ಮತ್ತು ನಮ್ಮ ಹೃದಯ ಮತ್ತು ಮನಸ್ಸು ಇಸ್ಲಾಂ ಧರ್ಮದ ಬೋಧನೆಗೆ ಮೀಸಲಾಗಿದೆ ಎಂದು ಅನೇಕ ಜನರು ಒಪ್ಪಿಕೊಂಡಿದ್ದಾರೆ. ನಾನು ಒಂದೇ ಒಂದು ಅಂಗೀಕಾರದ ಉದಾಹರಣೆಯನ್ನು ನೀಡುತ್ತೇನೆ

2012 ರಲ್ಲಿ, ಹುಝೂರ್ ಅನ್ವರ್(ಅತಬಿಅ) ಬ್ರಸೆಲ್ಸ್‌ನಲ್ಲಿ ಯುರೋಪಿಯನ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಜುಮಾ ಖುತ್ಬಾದಲ್ಲಿ ಪಾಲ್ಗೊಳ್ಳಲು ಬಿಷಪ್ ಡಾಕ್ಟರ್ ಅಮನ್ ಹಾವೋಡ್ ಜಿನೇವಾ (ಸ್ವಿಜರ್ಲ್ಯಾಂಡ್) ನಿಂದ ಬಂದಿದ್ದರು. ಅವರು ಗಮನವಿಟ್ಟು ಕೇಳುವ ಮಾತುಗಳಲ್ಲಿ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದರು. ಅವರು ಹೇಳಿದರು: ಈ ವ್ಯಕ್ತಿ ಮಾಂತ್ರಿಕನಲ್ಲ ಆದರೆ ಅವರ ಪದಗಳು ಮಾಂತ್ರಿಕ ಪರಿಣಾಮವನ್ನು ಹೊಂದಿವೆ. ಸ್ವರವು ಮೃದುವಾಗಿರುತ್ತದೆ ಆದರೆ ಅವರ ಬಾಯಿಂದ ಹೊರಹೊಮ್ಮುವ ಪದಗಳು ಅಸಾಧಾರಣ ಶಕ್ತಿ, ಮತ್ತು ಪ್ರಭಾವವನ್ನು ತನ್ನೊಳಗೆ ಹೊಂದಿದೆ. ನನ್ನ ಜೀವನದಲ್ಲಿ ಅಂತಹ ಧೈರ್ಯಶಾಲಿ ವ್ಯಕ್ತಿಯನ್ನು ನಾನು ನೋಡಿಲ್ಲ. ನಿಮ್ಮಂತಹ ಮೂರು ಜನರು ಮಾತ್ರ ಈ ಜಗತ್ತಿಗೆ ಬಂದರೆ, ಸಾರ್ವಜನಿಕ ಸುವ್ಯವಸ್ಥೆಯ ವಿಷಯದಲ್ಲಿ ಅದ್ಭುತ ಕ್ರಾಂತಿಯು ಈ ಜಗತ್ತಿನಲ್ಲಿ ತಿಂಗಳಲ್ಲ ಆದರೆ ದಿನಗಳಲ್ಲಿ ಸಂಭವಿಸಬಹುದು ಮತ್ತು ಜಗತ್ತು ಶಾಂತಿ ಮತ್ತು ಸಹೋದರತ್ವದ ತೊಟ್ಟಿಲು ಆಗಬಹುದು. (ಅಹಮದಿಯಾ ಗೆಜೆಟ್ ಕೆನಡಾ, ಮೇ 2018, ಪುಟ 20)

ಖಿಲಾಪತ್ತಿನ ಮಹಾನ್ ಅನುಗ್ರಹಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಲು ಸಾಧ್ಯವಿದೆ. ಖಿಲಾಫತ್‌ನ ಅನುಗ್ರಹಗಳಿಗೆ ಕೃತಜ್ಞರಾಗಿರಲು ಮತ್ತು ಈ ಮಹಾನ್ ರಕ್ಷಣೆಯ ಅನುಗ್ರಹವನ್ನು ಪಡೆಯಲು ನಾವೆಲ್ಲರೂ ನಮ್ಮ ಸ್ವಂತ ಸ್ಥಳಗಳಲ್ಲಿ ಶಾಂತಿಯ ಸಣ್ಣ ತೊಟ್ಟಿಲುಗಳನ್ನು ರಚಿಸಬೇಕಾಗಿದೆ.

ಅಲ್ಲಾಹನ ಹಕ್ಕುಗಳನ್ನು ನೀಡಲು, ಅವನ ಸೇವಕರ ಹಕ್ಕುಗಳನ್ನು ನೀಡಲು, ಸರ್ವಶಕ್ತ ದೇವನಲ್ಲಿ ನಂಬಿಕೆ ಇಡಲು, ಪ್ರಾರ್ಥನೆಗಳತ್ತ ವಿಶೇಷ ಗಮನ ಕೊಡಲು, ಹಝ್ರ‌ತ್ ಮಸೀಹ್ ಮೌಊದ್(ಅ) ಅವರೊಂದಿಗೆ ಮಾಡಿರುವ ಬೈಅತ್ ಅನ್ನು ಪೂರೈಸಲು. ತನ್ನಲ್ಲಿ ಶುದ್ಧವಾದ ಪ್ರಾಯೋಗಿಕ ಬದಲಾವಣೆಯನ್ನು ಸೃಷ್ಟಿಸಲು, ತಮ್ಮ ತಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಲು ಮತ್ತು ತಮ್ಮ ಭವಿಷ್ಯದ ಪೀಳಿಗೆಗೆ ಉತ್ತಮ ತರಬೇತಿ ಸೇರಿದಂತೆ ಒಳ್ಳೆಯ ಕಾರ್ಯಗಳನ್ನು ಮಾಡಲು ಹುಝೂರ್(ಅತಬಿಅ) ರವರು ಪದೇ ಪದೇ ನಮ್ಮೆಲ್ಲರ ಗಮನವನ್ನು ಸೆಳೆಯುತ್ತಿದ್ದಾರೆ. ನಾವೆಲ್ಲರೂ ಈ ಸಲಹೆಗಳನ್ನು ಪ್ರಾಮಾಣಿಕ ಉದ್ದೇಶದಿಂದ ಅನುಸರಿಸಲು ಪ್ರಯತ್ನಿಸಿದರೆ, ಸರ್ವಶಕ್ತನಾದ ಅಲ್ಲಾಹನು ಖಂಡಿತವಾಗಿಯೂ ನಮ್ಮ ಪ್ರಯತ್ನಗಳನ್ನು ಪ್ರೀತಿಯಿಂದ ನೋಡುತ್ತಾನೆ ಮತ್ತು ಅವುಗಳನ್ನು ಅನುಸರಿಸುವ ಸಾಮರ್ಥ್ಯವನ್ನು ನಮಗೆ ನೀಡುತ್ತಾನೆ ಮತ್ತು ನಾವೆಲ್ಲರೂ ನಮ್ಮ ಸ್ವಂತ ವಲಯದಲ್ಲಿ, ನಮ್ಮ ಸ್ವಂತ ಘಟಕದಲ್ಲಿ ನಿಜವಾದ ಶಾಂತಿ ಮತ್ತು ಯೋಗಕ್ಷೇಮದ ರಾಯಭಾರಿ ಗಳಾಗುತ್ತೇವೆ. ಮತ್ತು ಯಾವ ಸಮಾಜದಲ್ಲಿ ಮೂಲಭೂತ ಘಟಕ, ಅಂದರೆ ವ್ಯಕ್ತಿ, ತನ್ನ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಳ್ಳುತ್ತಾನೋ ಮತ್ತು ಉತ್ತಮ ನೈತಿಕತೆಯನ್ನು ಅಳವಡಿಸಿಕೊಳ್ಳುತ್ತಾನೋ ಆ ಸಮಾಜವು ನೈತಿಕ ಔನ್ನತ್ಯವನ್ನು ಮುಟ್ಟುವ ಮೂಲಕ ನಿಜವಾದ ಕ್ರಾಂತಿಯ ಮುಂಚೂಣಿಯಲ್ಲಿದೆ. ಆ ಸಮಾಜವು ಸ್ವ-ಕಲ್ಯಾಣದ ಬೇಲಿಯಾಗುತ್ತದೆ. ಅದರಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ನರಭಕ್ಷಕಗಳಿಂದ ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ.

ಖಿಲಾಫತ್‌ನ ಶಾಶ್ವತ ಅನುಗ್ರಹಕ್ಕಾಗಿ ಕೃತಜ್ಞರಾಗಿರಲು ಮತ್ತು ಖಿಲಾಫತ್‌ನ ನಿಜವಾದ ಅನುಯಾಯಿಗಳಾಗಲು ಅಲ್ಲಾಹನು ನಮಗೆ ಅವಕಾಶವನ್ನು ನೀಡಲಿ. **ಆಮೀನ್**.

ಹಮಾರಿ ಜಾನ್ ಖಿಲಾಫತ್ ಪರ್ ಫಿದಾ ಹೈ
ಯೆ ರೂಹಾನಿ ಮರೀಝೋಂ ಕೀ ದುವಾ ಹೈ

ಅಂಧೇರಾ ದಿಲ್ ಕಾ ಇಸ್ ಸೆ ಮಿಟ್ ಗಯಾ
ಯಹೀ ಝುಲ್ಮಾತ್ ಮೇ ಶಮ್ಏ ಹುದಾ ಹೈ

ಹಿದಾರೆ ಅಮನ್ ಈಮಾನ್ ವ ಯಖೀನ್ ಹೈ
ಕಿನಾರೆ ಆಫಿಯತ್ ಹಬ್ಲುಲ್ ಮತೀನ್ ಹೈ

ನಮ್ಮ ಜೀವನವು ಖಿಲಾಪತ್ತಿಗಾಗಿ ತ್ಯಾಗವಾಗಿದೆ. ಇದು ಆಧ್ಯಾತ್ಮಿಕ ರೋಗಿಗಳ ಔಷಧವಾಗಿದೆ.

ಇದು ಹೃದಯದ ಕತ್ತಲೆಯನ್ನು ಹೋಗಲಾಡಿಸಿದೆ. ಇದು ಕತ್ತಲೆಯಲ್ಲಿನ ಮೇಣದ ಬತ್ತಿಯಾಗಿದೆ.

ಇದು ಸುರಕ್ಷತೆ, ನಂಬಿಕೆ ಮತ್ತು ನಿಶ್ಚಿತತೆಯ ಬೇಲಿಯಾಗಿದೆ.

ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ತಮ್ಮೆಲ್ಲರಿಗೂ ಧನ್ಯವಾದಗಳು ಅರ್ಪಿಸುತ್ತಾ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

**(ವ ಆಖಿರುದ್ದಾವನಾ ಅನಿಲ್ ಹಮ್ದುಲಿಲ್ಲಾಲಾಹಿ ರಬ್ಬಿಲ್ ಆಲಮೀನ್)**

**********

***ವಿಶೇಷ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

**MUSLIM TELEVISION AHMADIYYA INTERNATIONAL**
**www.mta.tv**

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ

## ಹಝ್ರತ್ ಅಮೀರುಲ್–ಮುಮಿನೀನ್ ಖಲೀಫತುಲ್ ಮಾಸೀಹ್ ಅಲ್‌ಖಾಮಿಸ್(ಅತಬಿಅ) ಅವರ ದುಆಗಳ ಸ್ವೀಕಾರದ ವಿಶ್ವಾಸವರ್ಧಕ ಘಟನೆಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ದುಆಗಳಿಗೆ ಸಂಬಂಧಿಸಿದಂತೆ ಯೋಜನೆಗಳು ಮತ್ತು ಸಲಹೆಗಳು

(ಮಾನ್ಯ ಅತಾಉಲ್ ಮುಜೀಬ್ ಲೋನ್ ಸಾಹಿಬ್, ರಾಷ್ಟ್ರಾಧ್ಯಕ್ಷರು ಮಜ್ಲಿಸ್ ಅನ್ಸಾರುಲ್ಲಾ ಭಾರತ್ ಮತ್ತು ಪ್ರಾಂಶುಪಾಲ ಜಾಮಿಯಾ ಅಹ್ಮದಿಯಾ ಖಾದಿಯಾನ್)

**ಯಾ ಅಯ್ಯುಹಲ್ಲಝೀನ ಆಮನೂಸ್ತಜೀಬೂ ಲಿಲ್ಲಾಹಿ ವ ಲಿರ್‍ರಸೂಲಿ ಇಝಾ ದಆ ಕುಮ್ ಲಿಮಾ ಯುಹ್‌ಯೀಕುಮ್; ವಾಅ್‌ಲಮೂ ಅನ್ನಲ್ಲಾಹ ಯಹೂಲು ಬೈನಲ್ ಮರ್‌ಇ ವ ಖಲ್‌ಬಿಹೀ; ಇನ್ನಹೂ ಇಮೈಹಿ ತುಹ್‌ಶರೂನ್** (ಸೂರತುಲ್ ಅನ್‌ಫಾಲ್: 25)

ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ. ಖಂಡಿತವಾಗಿಯೂ ಅಲ್ಲಾಹನು ಮನುಷ್ಯನಿಗೂ ಅವನ ಹೃದಯಕ್ಕೂ ಮಧ್ಯೆ ಇದ್ದಾನೆಂದೂ ಅವನೆಡೆಗೆಯೇ ನೀವೆಲ್ಲರೂ ಒಂದುಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ.

ಗೌರವಾನ್ವಿತ ಸಭಾಧ್ಯಕ್ಷರೆ ಮತ್ತು ಗೌರವಾನ್ವಿತ ಕೇಳುಗರೇ! ಇಂದು ನನ್ನ ಭಾಷಣದ ಶೀರ್ಷಿಕೆಯು "ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯಗಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ದುಆಗಳ ಸ್ವೀಕಾರದ ವಿಶ್ವಾಸವರ್ಧಕ ಘಟನೆಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ದುಆಗಳಿಗೆ ಸಂಬಂಧಿಸಿದಂತೆ ಯೋಜನೆಗಳು ಮತ್ತು ಸಲಹೆಗಳು" ಎಂದಾಗಿದೆ.

ಈಗಷ್ಟೆ ನಾನು ಪಠಿಸಿದ ಪವಿತ್ರ ಖುರ್‌ಆನ್‌ನ ಆಯತ್ತಿನಲ್ಲಿ, ಸರ್ವಶಕ್ತನಾದ ಅಲ್ಲಾಹನು ತನ್ನ ಸಂದೇಶವಾಹಕರನ್ನು ಕಳುಹಿಸುವ ಮೂಲ ಉದ್ದೇಶ ಏನೆಂದರೆ ಆಧ್ಯಾತ್ಮಿಕವಾಗಿ ಸತ್ತ ಜನರನ್ನು ಜೀವಗೊಳಿಸುವುದು ಎಂದು ಹೇಳಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ನಿಯೋಜಿಸಲ್ಪಟ್ಟ ಪ್ರವಾದಿಯರು ತಮ್ಮ ದಾಸರನ್ನು ಆಧ್ಯಾತ್ಮಿಕವಾಗಿ ಪುನರುಜ್ಜೀವನಗೊಳಿಸುವ ಪ್ರಮುಖ ವಿಧಾನವೆಂದರೆ ಅವರು ತಮ್ಮ ದಾಸರಿಗಾಗಿ ಮಾಡುವ ಪ್ರಾರ್ಥನೆಗಳು (ದುಆಗಳು) ಮತ್ತು ಸರ್ವಶಕ್ತನಾದ ಅಲ್ಲಾಹನು ಆ ದುಆಗಳನ್ನು ಸ್ವೀಕರಿಸುವ ಮೂಲಕ ಜನರನ್ನು ಆಧ್ಯಾತ್ಮಿಕ ಜೀವನವನ್ನು ನೀಡುತ್ತಾನೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ನುಡಿದರು **ಮಾ ಕಾನತ್ ಅನ್ನಬುವ್ವತು ಖತ್ತು ಇಲ್ಲಾ ತಬಿಅತ್‌ಹಾ ಖಿಲಾಫತುನ್** (ನಕ್‌ಝುಲ್ ಅಅ್‌ಮಾಲ್, ಸಂಪುಟ–1) ಅಂದರೆ ಪ್ರವಾದಿಯನ್ನು ಜಗತ್ತಿಗೆ ಕಳುಹಿಸಿದಾಗಲೆಲ್ಲಾ ಅವರ ಕೆಲಸವನ್ನು ಮುಂದುವರಿಸಲು ಖಿಲಾಫತ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ನಿಧನದ ನಂತರವೂ, ಅಹ್ಮದಿಯಾ ಜಮಾತ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನ ವಾಗ್ದಾನ ಮತ್ತು ಹಝ್ರತ್ ಪೈಗಂಬರ್(ಸ) ಅವರ ಸುವಾರ್ತೆಯ ಪ್ರಕಾರ ಖಿಲಾಫತ್ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ಮತ್ತು ಸರ್ವಶಕ್ತನಾದ ಅಲ್ಲಾಹನು ಸಂಯೋಜಿಸಿರುವ ಖಿಲಾಫತ್‌ನ ಅನುಗ್ರಹಗಳನ್ನು ಖಿಲಾಫತ್‌ನ ಅನುಯಾಯಿಗಳು ಆನುಭವಿಸುತ್ತಿದ್ದಾರೆ. ಮತ್ತು ಆಧ್ಯಾತ್ಮಿಕವಾಗಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಂತರ ಖಿಲಾಫತ್ ಮೂಲಕ ಪುನರುಜ್ಜೀವಗೊಳ್ಳುತ್ತಿರುವ ಜನರಲ್ಲಿ ಸೇರುತ್ತಿದ್ದಾರೆ. ದುಆಗಳ ಸ್ವೀಕಾರದ ಮೂಲಕ ಹೇಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರು ತಮ್ಮ ಅನುಯಾಯಿಗಳನ್ನು ಪುನರುಜ್ಜೀವಗೊಳಿಸಿದ್ದಾರೊ ಅದೇ ನಿಟ್ಟಿನಲ್ಲಿ ಅವರ ನಂತರವೂ ಪ್ರತಿಯೊಬ್ಬ ಖಲೀಫರು ಅವರನ್ನು ಪುನರುಜ್ಜೀವನಗೊಳಿಸುವುದನ್ನು ಮುಂದುವರೆಸಿದರು ಮತ್ತು ಈಗಲೂ ಈ ಸರಣಿಯು ಐದನೇ ಖಿಲಾಫತ್‌ನಲ್ಲಿ ತನ್ನ ಸಂಪೂರ್ಣ ವೈಭವದೊಂದಿಗೆ ಮುಂದುವರಿಯುತ್ತಾ ಇದೆ.

ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ಪ್ರಾರ್ಥನೆಯ ಸ್ವೀಕಾರದ ಕೆಲವು ಘಟನೆಗಳನ್ನು ನಾನು ನಿಮ್ಮ ಮುಂದೆ ಪ್ರಸ್ತುತಪಡಿಸುವ ಮೊದಲು. ಪ್ರಾರ್ಥನೆಯ ಉಪಯುಕ್ತತೆ, ಪ್ರಾಮುಖ್ಯತೆ ಮತ್ತು ಅನುಗ್ರಹಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇನೆ ಏಕೆಂದರೆ ಈ ಯುಗದಲ್ಲಿ ನೀವು ಪ್ರಾರ್ಥನೆಯ ಬಗ್ಗೆ ಪ್ರತಿ ಲೇಖನವನ್ನು ವಿವರವಾಗಿ ವಿವರಿಸಿದ ಏಕೈಕ ವ್ಯಕ್ತಿಯಾಗಿದ್ದಾರೆ. ಅಲ್ಲದೆ ಈ ಲೇಖನವೂ ಸಹ ಪ್ರತಿಯೊಬ್ಬ ಅಹ್ಮದಿಯರ ಮನಸ್ಸಿನಲ್ಲಿ ಹೇಗೆ ದೃಢಗೊಳಿಸಿದ್ದಾರೆ ಎಂದರೆ ಈಗ ಪ್ರತಿಯೊಬ್ಬ ಅಹ್ಮದಿಯರ ಜೀವನವು ಕೇವಲ ಪ್ರಾರ್ಥನೆಯಾಗಿದೆ ಮತ್ತು ಇದು ಅವನ ಆಧ್ಯಾತ್ಮಿಕ ಜೀವನವನ್ನು ಪೂರೈಸುವ ಏಕೈಕ ಆಹಾರವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಪ್ರಾರ್ಥನೆಯು (ದುಆ) ಕಷ್ಟಕರ ಸಂದರ್ಭಗಳನ್ನು ಪರಿಹರಿಸುವ ಒಂದು ವೈಭವಯುತ್ವಾದ ಶಕ್ತಿಯಾಗಿದೆ ಮತ್ತು ಕಷ್ಟಕರವಾದ ಗುರಿಗಳನ್ನು ವ್ಯಕ್ತಿಯಿಂದ ಸುಲಭವಾಗಿ ಪರಿಹರಿಸಲಾಗುತ್ತದೆ ಏಕೆಂದರೆ ಪ್ರಾರ್ಥನೆಯು ಸರ್ವಶಕ್ತನಾದ ಅಲ್ಲಾಹನಿಂದ ಬರುವ ಅನುಗ್ರಹ ಮತ್ತು ಶಕ್ತಿಯನ್ನು ಹೀರಿಕೊಳ್ಳುವ ನಾಳವಾಗಿದೆ. ಆಗಾಗ್ಗೆ ಪ್ರಾರ್ಥನೆಯಲ್ಲಿ ತೊಡಗಿರುವ ವ್ಯಕ್ತಿಯು ಅಂತಿಮವಾಗಿ ಈ ಅನುಗ್ರಹವನ್ನು ಸೆಳೆಯುತ್ತಾನೆ ಮತ್ತು ಸರ್ವಶಕ್ತನಾದ ಅಲ್ಲಾಹನ ಬೆಂಬಲದೊಂದಿಗೆ ತನ್ನ ಗುರಿಗಳನ್ನು ಸಾಧಿಸುತ್ತಾನೆ ......ಪ್ರಾರ್ಥನೆಯು ಒಂದು ದೊಡ್ಡ ಸಂಪತ್ತು ಎಂದು ನಿಸ್ಸಂದೇಹವಾಗಿ ಅರ್ಥಮಾಡಿಕೊಳ್ಳಿ. ಪ್ರಾರ್ಥನೆಯನ್ನು ಬಿಡದ ವ್ಯಕ್ತಿಗೆ ಅವನ ಧರ್ಮ ಮತ್ತು ಪ್ರಪಂಚದ ಮೇಲೆ ಯಾವುದೇ ವಿಪತ್ತು ಉಂಟಾಗುವುದಿಲ್ಲ. ಅವನು ಯಾವಾಗಲೂ ಶಸ್ತ್ರಸಜ್ಜಿತ ಸೈನಿಕರಿಂದ ಸುತ್ತುವರೆದಿರುವ ಕೋಟೆಯಲ್ಲಿ ಸುರಕ್ಷಿತವಾಗಿರುತ್ತಾನೆ, ಆದರೆ ಪ್ರಾರ್ಥನೆಯ ಬಗ್ಗೆ ಎಚ್ಚರವಿಲ್ಲದವನು ನಿರಾಯುಧ ಮತ್ತು ಬಲಹೀನ ಮತ್ತು ಕಾಡುಮೃಗಗಳಿಂದ ತುಂಬಿದ ಮತ್ತು ಕ್ರಿಮಿಕೀಟಗಳಿಂದ ತುಂಬಿದ ಕಾಡಿನಲ್ಲಿರುವ ವ್ಯಕ್ತಿಯಂತೆ ಆಗಿರುತ್ತಾನೆ. ಅವನು ಉತ್ತಮನಾಗಿಲ್ಲ ಎಂದು ಅರಿತುಕೊಳ್ಳಬಹುದು. ಒಂದು ಕ್ಷಣದಲ್ಲಿ ಅವನು ಕಾಡುಮೃಗಗಳಿಗೆ ಬಲಿಯಾಗುತ್ತಾನೆ ಮತ್ತು ಅವನ ಮೂಳೆಗಳು ಸಹ ಕಾಣಿಸುವುದಿಲ್ಲ. ಆದ್ದರಿಂದ, ಈ ಪ್ರಾರ್ಥನೆಯು (ದುಆ) ಮಾನವ ಸಂತೋಷ ಮತ್ತು ರಕ್ಷಣೆಯ ಮುಖ್ಯ ಮೂಲವಾಗಿದೆ ಎಂದು ನೆನಪಿಡಿ. ಈ ದುಆವನ್ನು ಅವರು ನಿರಂತರವಾಗಿ ಮಾಡುತ್ತಿದ್ದರೆ ಅವರಿಗೆ ಇದು ಆಶ್ರಯವಾಗಿರುತ್ತದೆ. (ಮಲ್‌ಫೂಝಾತ್, ಸಂಪುಟ–7, ಪುಟ–192, 1984)

ಪ್ರಾರ್ಥನೆಯ ಸ್ವೀಕಾರದ ಸ್ಥಿತಿಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪ್ರಾರ್ಥನೆ ಎಂದರೆ ಒಬ್ಬ ಸಾತ್ವಿಕ ದಾಸ ಮತ್ತು ಅವನ ಪ್ರಭುವಾದ ಅಲ್ಲಾಹನ ಮಧ್ಯೆ ಒಂದು ಆಕರ್ಷಣೆಯ ಸಂಬಂಧವಿರುತ್ತದೆ. ಎಂದರೆ ಮೊದಲು ಅಲ್ಲಾಹನ ರಹ್ಮಾನಿಯ್ಯತ್ ದಾಸನನ್ನು ತನ್ನ ಕಡೆಗೆ ಸೆಳೆಯುತ್ತವೆ. ಅನಂತರ ದಾಸನ ಸತ್ಯಸಂಧತೆಯ ಆಕರ್ಷಣೆಯಿಂದ ಅಲ್ಲಾಹನು ದಾಸನಿಗೆ ಸಮೀಪವಾಗುತ್ತಾನೆ. ಪ್ರಾರ್ಥನೆ ಮಾಡುವಾಗ ಈ ಸಂಬಂಧ ಒಂದು ವಿಶಿಷ್ಟ ಸ್ಥಾನಕ್ಕೆ ತಲಪುತ್ತದೆ ಮತ್ತು ತನ್ನ ಅದ್ಭುತ ವೈಶಿಷ್ಟ್ಯವನ್ನು ಸೃಷ್ಟಿಸುತ್ತದೆ. ದಾಸನು ಯಾವುದಾದರೂ ಕಠಿಣವಾದ ಕಷ್ಟಕ್ಕೆ ಪಾತ್ರನಾಗಿ ಅಲ್ಲಾಹನ ಕಡೆಗೆ ಪರಿಪೂರ್ಣ ನಂಬಿಕೆಯಿಂದಲೂ ಪರಿಪೂರ್ಣ ಪ್ರತೀಕ್ಷೆಯಿಂದಲೂ ಪರಿಪೂರ್ಣ ಪ್ರೀತಿಯಿಂದಲೂ ಪರಿಪೂರ್ಣ ನಿಷ್ಠೆಯಿಂದಲೂ ಪರಿಪೂರ್ಣ ಧೈರ್ಯದಿಂದಲೂ ಬಾಗುತ್ತಾನೆ. ಅವನು ಅತ್ಯಂತ ಪ್ರಜ್ಞೆಯಿಂದ ನಿರ್ಲಕ್ಷ್ಯದ ಪರದೆಗಳನ್ನು ಹರಿದು ಹಾಕುತ್ತಾ ಆತ್ಮ ಸಮರ್ಪಣೆಯ ಮೈದಾನದಲ್ಲಿ ಮುಂದೆ ಸಾಗುತ್ತಾನೆ. ಅವನು ದೇವನ ಸನ್ನಿಧಾನವನ್ನು ಕಾಣುತ್ತಾನೆ. ಅವನ ಜೊತೆಗೆ ಸಹಭಾಗಿ ಯಾರೂ ಇಲ್ಲ. ಆಗ ದಾಸನ ಆತ್ಮ ಆ ಸನ್ನಿಧಾನದಲ್ಲಿ ತಲೆಯನ್ನು ಇರಿಸುತ್ತದೆ ಮತ್ತು ಅದರ ಒಳಗೆ ಇರಿಸಲಾದ ಆಕರ್ಷಣೆ ಶಕ್ತಿ ಅದು ಅಲ್ಲಾಹನ ಅನುಗ್ರಹಗಳನ್ನು ತನ್ನ ಕಡೆಗೆ ಎಳೆಯುತ್ತದೆ. ಆಗ ಸರ್ವಶಕ್ತನಾದ ಅಲ್ಲಾಹನು ತನ್ನ ದಾಸನ ಆವಶ್ಯಕತೆಗಳನ್ನು ನೆರವೇರಿಸಲು ಗಮನ ಹರಿಸುತ್ತಾನೆ. ತನ್ನ ದಾಸನ ಪ್ರಾರ್ಥನೆಯ ಪ್ರಭಾವವನ್ನು ಮೂಲ ವಸ್ತುಗಳ ಮೇಲೆ ಹಾಕುತ್ತಾನೆ ಆ ಮೂಲಕ ದಾಸನ ಆವಶ್ಯಕತೆ ಈಡೇರುವಂತಹ ಸ್ಥಿತಿ ತಲೆದೋರುತ್ತದೆ. ಉದಾಹರಣೆಗೆ ಮಳೆಗೋಸ್ಕರ ಪ್ರಾರ್ಥಿಸಿದರೆ ಆ ಪ್ರಾರ್ಥನೆಯನ್ನು ಅಂಗೀಕರಿಸಿದ ನಂತರ ಮಳೆಗೆ ಆವಶ್ಯಕವಾದ ಪ್ರಕೃತಿ ಪರಿಸ್ಥಿತಿಗಳನ್ನು ಅಲ್ಲಾಹನು ಸೃಷ್ಟಿಸುತ್ತಾನೆ. ಕ್ಷಾಮ ಉಂಟಾಗಲಿ ಎಂದು ಶತ್ರುಗಳ ವಿರುದ್ಧ ಪ್ರಾರ್ಥಿಸಿದರೆ ಅಲ್ಲಾಹನು ಅದಕ್ಕೆ ಅನುಸಾರವಾದ ಪರಿಸ್ಥಿತಿಯನ್ನು ಸೃಷ್ಟಿಸುತ್ತಾನೆ. ಸ್ವಪ್ನ ದರ್ಶನಗಳನ್ನು

ತಡೆಯುವ ಪರಿಪೂರ್ಣ ಜನರು ಅನುಭವದಿಂದ ತಿಳಿದುಕೊಳ್ಳುತ್ತಾರೆ. ಪರಿಪೂರ್ಣ ವ್ಯಕ್ತಿಯ ಪ್ರಾರ್ಥನೆಯಿಂದ ಸೃಷ್ಟಿ ಕ್ರಿಯೆಯ ಶಕ್ತಿ ತಲೆದೋರುತ್ತದೆ ಎಂದು. ಎಂದರೆ ಅಲ್ಲಾಹನ ಅನುಮತಿ ಪ್ರಕಾರ ಭೂಲೋಕದಲ್ಲಿಯೂ ಆಕಾಶದಲ್ಲಿಯೂ ಅದರ ಪ್ರಭಾವ ಉಂಟಾಗುತ್ತದೆ. ಪ್ರಾರ್ಥನೆಯ ಅಂಗೀಕಾರಕ್ಕೆ ಅನುಕೂಲವಾದ ಸ್ಥಿತಿ ಅಕಾಶದಲ್ಲಿಯೂ ಜನರ ಹೃದಯಗಳಲ್ಲಿಯೂ ಉಂಟಾಗುತ್ತದೆ. (ಬರ್ಕಾತುದ್ದುಆ, ರೂಹಾನಿ ಖಝಾಇನ್, ಸಂಪುಟ-6, ಪುಟ-9-10)

ಆತ್ಮೀಯ ಕೇಳುಗರೇ! ಈಗ ನಾನು ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರ ದುಆ ಸ್ವೀಕಾರದ ಹಲವಾರು ಘಟನೆಗಳಲ್ಲಿ ಕೆಲವನ್ನು ಮಾತ್ರ ಪ್ರಸ್ತುತಪಡಿಸುತ್ತೇನೆ.

(1)

ಖಿಲಾಫತೇ ಅಹ್ಮದಿಯಾ ಎಷ್ಟು ಅನುಗ್ರಹದಾಯಕವಾಗಿದೆ ಎಂದರೆ ಅದು ಹೇಗೆ ಬಾಯಾರಿದ ಆತ್ಮಗಳಿಗೆ ನೀರುಣಿಸುತ್ತದೆಯೋ ಹಾಗೆಯೇ ಅದು ಬಂಜರು ಭೂಮಿಗೂ ನೀರುಣಿಸುತ್ತದೆ. 2012 ರ ಜಲ್ಸ ಸಾಲಾನದಲ್ಲಿ (ವಾರ್ಷಿಕ ಸಮ್ಮೇಳನದಲ್ಲಿ) ಎರಡನೇ ದಿನದಂದು ತಮ್ಮ ಭಾಷಣದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಆಫ್ರಿಕಾ ಖಂಡದಲ್ಲಿ ಕಾಣಿಸಿಕೊಂಡ ನೂರಾರು ಕುರುಹುಗಳಲ್ಲಿ ಒಂದನ್ನು ಈ ಕೆಳಗಿನಂತೆ ಉಲ್ಲೇಖಿಸಿದರು:

"ಮಾಲಿ ಜಮಾಅತ್‌ನ ಅಮೀರ್ ಸಾಹೇಬರು ಬರೆಯುತ್ತಾರೆ, ಕಳೆದ ವರ್ಷ ಬಹಳ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದ್ದು, ಇದರಿಂದಾಗಿ ತೀವ್ರ ತೊಂದರೆಗಳು ಉಂಟಾಗಿವೆ. ಅವರು ನನಗೆ ಪ್ರಾರ್ಥನೆಗಾಗಿ ಬರೆದಿದ್ದಾರೆ, ಆದ್ದರಿಂದ ನಾನು ಅವರಿಗೆ ಇಸ್ತಿಖಾ ನವಾಝುನ್ನು ನಿರ್ವಹಿಸಲು ಹೇಳಿದೆ. ಸರ್ವಶಕ್ತನಾದ ಅಲ್ಲಾಹನು ಕೃಪೆ ನೀಡಿದನು. ನಮ್ಮ ಓರ್ವ ಮುಅಲ್ಲಿಮ್ ಸಾಹೇಬರು ಹೇಳುತ್ತಾರೆ ಒಂದು ಶಾಲೆಯ ಶಿಕ್ಷಕ ಮುಹಮ್ಮದ್ ತೋರೆ ಸಾಹಿಬ್ ಅವರು ತಮ್ಮ ಬಳಿಗೆ ಬಂದು ರೇಡಿಯೋ ಅಹ್ಮದಿಯಾವನ್ನು ನಿಯಮಿತವಾಗಿ ಕೇಳುತ್ತಿದ್ದರು ಆದರೆ ಜಮಾತ್‌ನೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರಲಿಲ್ಲ. ಒಂದು ದಿನ ಜಮಾಅತ್‌ನ ಖಲೀಫರು ಈ ಪ್ರದೇಶಕ್ಕಾಗಿ ಮಳೆಗಾಗಿ ವಿಶೇಷ ಪ್ರಾರ್ಥನೆಯನ್ನು ಮಾಡಿದರು ಎಂದು ನಾನು ಕೇಳಿದೆ. ಮತ್ತೆ ಮಾಲಿ ಜಮಾಅತ್‌ನ ಅಮೀರ್ ಸಾಹಿಬ್ ಅವರ ನಗರಕ್ಕೆ ಬರುತ್ತಿದ್ದಾರೆಂದು ಕೇಳಿ ತಾವೇ ಹೋಗಿ ಭೇಟಿಯಾಗಬೇಕು ಎಂದುಕೊಂಡರು. ಹಾಗಾಗಿ ಅವರು ಕಾರ್ಯಕ್ರಮವಿದ್ದ ಫರಾಕೋ ಗ್ರಾಮವನ್ನು ತಲುಪಿದರು. ಅಲ್ಲಿಯೂ ಅವರು ಅಮೀರ್ ಸಾಹಿಬ್ ಅವರಿಂದ ಖಲೀಫತುಲ್ ಮಸೀಹ್ ಅವರು ಈ ಪ್ರದೇಶದಲ್ಲಿ ಮಳೆಗಾಗಿ ಪ್ರಾರ್ಥಿಸಿದರು ಮತ್ತು ನಂತರ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆಯೇ? ಎಂದು ಕೇಳಿದರು. ಈ ವರ್ಷ ಅಸಾಮಾನ್ಯ ಮಳೆಯಾದರೆ ಅದು ಪ್ರಾರ್ಥನೆಯ ಫಲ ಮಾತ್ರ ಎಂದು ಅವರು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡರು. ಏಕೆಂದರೆ ಹಲವು ವರ್ಷಗಳಿಂದ ಉತ್ತಮ ಮಳೆಯಾಗಿರಲಿಲ್ಲ. ಮಳೆಗಾಲ ಪ್ರಾರಂಭವಾದಾಗ ಪ್ರತಿ ಎರಡನೇಯ ದಿವಸ ಮೂರನೆ ದಿನಕ್ಕೊಮ್ಮೆ ಜೋರಾಗಿ ಮಳೆ ಬೀಳುವುದನ್ನು ಕಂಡರು. ಕಳೆದ ಹತ್ತು ವರ್ಷಗಳಿಂದ ಈ ರೀತಿಯ ಮಳೆಯೇ ಆಗಿರಲಿಲ್ಲ ಎಂಬುದಕ್ಕೆ ಅವರೇ ಸಾಕ್ಷಿಯಾಗಿದ್ದರು. ದೇವರು ಖಲೀಫನೊಂದಿಗೆ ಇರುವುದರಿಂದ ಇಂದು ಅವರು ಅಹ್ಮದಿಯ್ಯತ್ ಅನ್ನು ಪ್ರವೇಶಿಸಲು ಬಂದಿದ್ದಾರೆ. ಅಲ್ಹಮ್ದುಲಿಲ್ಲಾಹ್ ಈಗ ಈ ಗ್ರಾಮದಲ್ಲಿ ಅನೇಕ ಜನರು ಬೈಅತ್ ಮಾಡುತ್ತಿದ್ದಾರೆ. (ಅಲ್-ಫಝಲ್ ಇಂಟರ್‌ನ್ಯಾಶನಲ್, ಆಗಸ್ಟ್ 3, 2018, ಪುಟ 18)

ಹುಝೂರ್ ಅನ್ವರ್(ಅತಬಿಅ) ಅವರು ಈ ವರ್ಷ ರಿವ್ಯೂ ಆಫ್ ರಿಲಿಜಿಯನ್ಸ್ ಆಯೋಜಿಸಿದ GOD SUMMIT ನ ಸಂದರ್ಭದಲ್ಲಿ ತಮ್ಮ ವಿಶೇಷ ಸಂದೇಶದಲ್ಲಿ ಕೆಲವು ಘಟನೆಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ನಾನು ಉಲ್ಲೇಖಿಸುತ್ತೇನೆ.

(2)

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಐವರಿ ಕೋಸ್ಟ್‌ನ ಒಂದು ಘಟನೆಯನ್ನು ನಮ್ಮ ಮುಅಲ್ಲಿಮ್ ಸಾಹೇಬರು ಬರೆದಿದ್ದಾರೆ. ಓರ್ವ ನಿಷ್ಠಾವಂತ ಅಹ್ಮದಿ ಅಬ್ದುಲ್ಲಾ ಸಾಹಿಬ್ ಎಂಬವರು ಇದ್ದಾರೆ. ಅವರ ಬಗ್ಗೆ ಬರೆಯುತ್ತಾರೆ ನನ್ನ ಸಹೋದರನಿಗೆ ಪೊಲೀಸರು ಹಿಡಿದುಕೊಂಡು ಹೋಗಿದ್ದರು ಮತ್ತು ನ್ಯಾಯಾಲಯವು ಅವನಿಗೆ ಡ್ರಗ್ಸ್ ಮಾರಾಟ ಮಾಡಿದ ಅಪರಾಧಕ್ಕಾಗಿ ಇಪ್ಪತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಅವರು ಹೇಳುತ್ತಾರೆ ನನ್ನ ಸಹೋದರ ಈ ರೀತಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಕ್ಕೆ ನಾನು ತುಂಬಾ ಚಿಂತಿತನಾಗಿದ್ದೆ. ಆತನು ಅಪರಾಧಿಯಾಗಿರಲಿಲ್ಲ. ಈ ಸಂದಿಗ್ಧ ಸ್ಥಿತಿಯಲ್ಲಿ ಲಂಡನ್‌ನಲ್ಲಿರುವ ನನಗೆ ಪತ್ರ ಬರೆದಿದ್ದಾರೆ ಎಂದು ಹೇಳಲಾಗಿದೆ. ನಾನು ಖಲೀಫತುಲ್ ಮಸೀಹ್ ಅವರಿಗೆ ಪ್ರಾರ್ಥನೆ ಮಾಡಲು ಪತ್ರ ಬರೆದಿದ್ದೇನೆ ಮತ್ತು ನಾನು ಸಹ ಸಹೋದರನ ಬಿಡುಗಡೆಗಾಗಿ ಪ್ರಾರ್ಥಿಸಲು ಪ್ರಾರಂಭಿಸಿದೆ. ಅವರು ಹೇಳುತ್ತಾರೆ, ಆದರೆ ಇದರ ಹೊರತಾಗಿಯೂ, ಬಿಡುಗಡೆಗೆ ಯಾವುದೇ ಮಾರ್ಗವಿರಲಿಲ್ಲ. ಒಂದು ದಿನ ನಾನು ಕನಸಿನಲ್ಲಿ ಕಂಡಿದ್ದೇನೆಂದರೆ ಖಲೀಫತುಲ್ ಮಸೀಹ್ ಅವರನ್ನು ಕನಸ್ಸಿನಲ್ಲಿ ಬಂದು ಚಿಂತಿಸಬೇಡಿ, ತಾಳ್ಮೆಯಿಂದಿರಿ, ನಿಮ್ಮ ಸಹೋದರನನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಹೇಳಿದನ್ನು ನೋಡಿದರು. ಮುಂಜಾನೆ ಎದ್ದಾಗ ನನಗೆ ತುಂಬಾ ಸಮಾಧಾನವಾಯಿತು, ಇನ್‌ಶಾಅಲ್ಲಾಹ್, ಅಲ್ಲಾಹನು ಪವಾಡವನ್ನು ತೋರಿಸುತ್ತಾನೆ ಮತ್ತು ನನ್ನ ಸಹೋದರ ಬಿಡುಗಡೆಯಾಗಿ ಬರುತ್ತಾನೆ ಎಂದು ನನಗೆ ಖಾತ್ರಿಯಾಯಿತು. ಆದರೆ ನಹೋದರನು ಬಿಡುಗಡೆಗೊಳ್ಳದೆ ಕೆಲವು ದಿನಗಳ ನಂತರ ಅವರ ತಾಯಿಯ ಆರೋಗ್ಯವು ಹದಗೆಟ್ಟಿತು. ಅವರಿಗೆ ನಗರದ ದೊಡ್ಡ ಆಸ್ಪತ್ರೆಗೆ ಕರೆದೊಯ್ದು ಅಡ್ಮಿಟ್ ಮಾಡಬೇಕಿತ್ತು. ಮೊದಲು ಒಂದು ಸಮಸ್ಯೆ ಇದ್ದದ್ದು ಈಗ ಮತ್ತೊಂದು ಸಮಸ್ಯೆ ಬಂದಿರುವುದು ತುಂಬಾ ಚಿಂತೆಯಾಗಿತ್ತು ಎನ್ನುತ್ತಾರೆ. ತಾಯಿ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ, ಬಹಳ ಸಂಕಟದ ಸ್ಥಿತಿ ಇತ್ತು, ತುಂಬಾ ಅಸಹಾಯಕ ಸ್ಥಿತಿ ಇತ್ತು, ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ನಾನು ತುಂಬಾ ಚಿಂತೆ ಮಾಡುತ್ತಿದ್ದೆ. ನಂತರ ನಾನು ಪ್ರಾರ್ಥಿಸಿದೆ ಮತ್ತು ಅವರು ಹೇಳುತ್ತಾರೆ ರಾತ್ರಿ ಮಲಗಿದ್ದಾಗ ಪುನಃ ಅವರು ನನ್ನನ್ನು ಕನಸಿನಲ್ಲಿ ನೋಡಿದರು ನಾನು ಅವರಿಗೆ ಎದ್ದು ಹೋಗಿ ಬಾಗಿಲು ತೆರೆಯಲು ಹೇಳಿದೆ. ಅವರು ಹೇಳುತ್ತಾರೆ ನಾನಗೆ ಎಚ್ಚರವಾಯಿತು. ಒಮ್ಮೆಲೇ ಎಚ್ಚರಗೊಂಡು ಕಣ್ಣು ತೆರೆದಾಗ ಯಾರೋ ಬಾಗಿಲು ಬಡಿಯುತ್ತಿರುವುದು ಕಂಡಿತು. ಹೋಗಿ ಬಾಗಿಲು ತೆರೆದಾಗ ಸಹೋದರನಿದ್ದನು ಎನ್ನುತ್ತಾರೆ. ಪೊಲೀಸರು ಇಂದು ನನ್ನನ್ನು ಬಿಡುಗಡೆ ಮಾಡಿದ್ದಾರೆ ಮತ್ತು ಇದೆಲ್ಲವೂ ಅಲ್ಲಾಹನ ಅನುಗ್ರಹದಿಂದ ಮತ್ತು ದುಆವಿನ ಪವಾಡದ ಅನುಗ್ರಹದಿಂದ ಹಾಗೂ ಖಲೀಫರೊಂದಿಗಿನ ಸಂಬಂಧದ ಪವಾಡದವಾಗಿದೆ ಎಂದು ಅವರು ಹೇಳಿದರು. (ಸ್ಹ್ ರೋಝು ಅಲ್-ಫ್‌ಝಲ್ ಇಂಟರ್ನ್ಯಾಷನಲ್ 27 ಮೇ 2022)

(3)

ನಂತರ ಗ್ಯಾಂಬಿಯಾದ ಒಂದು ಘಟನೆಯನ್ನು ವಿವರಿಸುತ್ತಾ ಹುಝೂರ್ ಅನ್ವರ್(ಅತಬಿಅ)ರವರು ಹೇಳುತ್ತಾರೆ: ಉಮರ್ ಸಾಹಿಬ್ ಎಂಬವರು ಸ್ನೇಹಿತರು ಹೇಳುತ್ತಾರೆ, ಅವರು 2017 ರಲ್ಲಿ ಕುಟುಂಬ ಸಮೇತ ಬೈಅತ್ ಮಾಡಿದರು. ಅವರ ಪತ್ನಿಗೆ ಗರ್ಭಕೋಶದ ಕ್ಯಾನ್ಸರ್ ಇತ್ತು. ಏಳು ವರ್ಷಗಳ ಹಿಂದೆ, ಒಂದು ಮಗು ಜನಿಸಿತು ಮತ್ತು ನಂತರ ಅವರು ಕ್ಯಾನ್ಸರ್‌ಗೆ ಒಳಗಾಗಿದ್ದರು. ಅದಕ್ಕೆ ಚಿಕಿತ್ಸೆ ಇಲ್ಲ, ಮಕ್ಕಳಾಗುವುದು ಸಾಧ್ಯವಿಲ್ಲ ಎಂದು ವೈದ್ಯರು ಹೇಳಿದ್ದರು. ಇದರಿಂದ ಅವರ ಪತ್ನಿ ತುಂಬಾ ಚಿಂತಿತರಾಗಿದ್ದರು. ರೋಗವೂ ಇದೆ ಮತ್ತು ಮಕ್ಕಳು ಜನಿಸಲು ಸಾಧ್ಯವಿಲ್ಲ ಎಂದು. ಜೀವನ ಮತ್ತು ಸಾವಿನ ಪ್ರಶ್ನೆಯಾಗಿತ್ತು. ಜೀವನ ಇರುತ್ತೋ ಇಲ್ಲವೋ ಗೊತ್ತಿಲ್ಲ. ಚಿಕ್ಕ ಮಗುವು ಇದೆ ಆತನ ಸುಖವನ್ನೂ ನೋಡುತ್ತೇನೋ ಇಲ್ಲವೂ ಎಂದಾಗಿತ್ತು. ಆದರೆ, ಬೈಅತ್ ಮಾಡಿದ ನಂತರ ಅವರ ಪತ್ನಿ ನನ್ನ ಚಿತ್ರವಿರುವ ಲೀಫ್‌ಲೆಟ್ ಅನ್ನು ತೆಗೆದುಕೊಂಡರು. ಅವರು ಹೇಳುತ್ತಾರೆ, "ನನಗೆ ಗೊತ್ತಿಲ್ಲ, ಚಿತ್ರವನ್ನು ನೋಡಿದ ನಂತರ, ನನ್ನ ಹೃದಯದಲ್ಲಿ ಒಂದು ಆಲೋಚನೆ ಮತ್ತು ನೆಮ್ಮದಿ ಲಭಿಸಿತು, ಆದ್ದರಿಂದ ನಾನು ಹೆಚ್ಚು ತೃಪ್ತಿಗಾಗಿ ಸರ್ವಶಕ್ತನಾದ ಅಲ್ಲಾಹನನ್ನು ಪ್ರಾರ್ಥಿಸುತ್ತಿದ್ದೆ." ನಂತರ ಅವರು ನನಗೆ ಪತ್ರ ಬರೆದರು ಮತ್ತು ಅವರ ಪ್ರಾರ್ಥನೆಯ ವಿನಂತಿಯೊಂದಿಗೆ ಅವರ ಅನಾರೋಗ್ಯ ಮತ್ತು ಮಕ್ಕಳ ಬಯಕೆಯನ್ನು ಸಹ ಹೇಳಿದರು. ಅಲ್ಲಾಹನ ಕೃಪೆ ಎಷ್ಟಿತ್ತೆಂದರೆ ಸ್ವಲ್ಪ ಸಮಯದ ನಂತರ ಆಕೆ ಗರ್ಭಿಣಿಯಾದಳು ಮತ್ತು ವೈದ್ಯರು ಮತ್ತು ದಾದಿಯರು ಪರೀಕ್ಷಿಸಿದಾಗ ಅವರೆಲ್ಲರಿಗೂ ಆಶ್ಚರ್ಯವಾಯಿತು. ಅವರೆಲ್ಲರು ಹೇಳುತ್ತಾರೆ ನಾವು ಇವರಿಗೆ ಮಗು ಜನಿಸುವುದಿಲ್ಲ ಎಂದು ಉತ್ತರ ನೀಡಿದ್ದೆವು ಮತ್ತು ಈ ಮಹಿಳೆಗೆ ಈಗ ಮಗುವಾಗುವುದು ವೈದ್ಯಕೀಯವಾಗಿ ಸಾಧ್ಯವಿಲ್ಲ ಎಂದು ಸಹ ಹೇಳಿದರು. ನಂತರ ಅವರು ಪುನಃ ಗರ್ಭಧಾರಣೆಯ ಪರೀಕ್ಷೆಯ ನಂತರ ಮತ್ತೊಮ್ಮೆ ಕ್ಯಾನ್ಸರ್ ಪರೀಕ್ಷೆಯನ್ನು ಮಾಡಿ ನೋಡಿದಾಗ ಅದು ಕೂಡ ಸಂಪೂರ್ಣವಾಗಿ ನೆಗೆಟಿವ್ ಬಂದಿತ್ತು. ವೈದ್ಯರು ತುಂಬಾ ಆಶ್ಚರ್ಯಚಕಿತರಾದರು. ಈ ಕ್ಯಾನ್ಸರ್ ಅನ್ನು ಗುಣಪಡಿಸಲು ಮತ್ತು ನಿಮ್ಮ ಕಷ್ಟ ಮತ್ತು ನೋವನ್ನು ತೆಗೆದುಹಾಕಲು ನೀವು ಯಾವ ಔಷಧಿಯನ್ನು ಬಳಸಿದ್ದೀರಿ ಮತ್ತು ಇದೂ ವೈದ್ಯಕೀಯವಾಗಿ ಗುಣಪಡಿಸಲು ಸಾಧ್ಯವಿಲ್ಲ ಎಂದು ವೈದ್ಯರೆಲ್ಲರು ಈ ನವ ಅಹ್ಮದಿ ಮಹಿಳೆಗೆ ಕೇಳಿದರು. ಅದಕ್ಕೆ ಆಕೆ ಹೇಳಿದರು ನಾನು ಯಾವುದೇ ಔಷಧ ಬಳಸಿಲ್ಲ. ಪ್ರಸ್ತುತ ಕಾಲಘಟ್ಟದ ಖಲೀಫರಿಗೆ ದುಆಗಾಗಿ ಪತ್ರ ಬರೆದಿದ್ದೆ ಮತ್ತು

ನಾನೂ ಸಹ ಪ್ರಾರ್ಥಿಸುತ್ತಿದ್ದೆ ಮತ್ತು ಇವುಗಳು ಪ್ರಾರ್ಥನೆಯ ಅನುಗ್ರಹಗಳು ಮತ್ತು ಇದು ನನ್ನ ಚಿಕಿತ್ಸೆಯಾಗಿದೆ, ಅದರ ಕಾರಣದಿಂದಾಗಿ ಸರ್ವಶಕ್ತನಾದ ಅಲ್ಲಾಹನು ಒಲವು ತೋರಿದ್ದಾನೆ. (ಸೆಹ್ ರೋಝು, ಅಲ್‌ಫಝಲ್ ಇಂಟರ್‌ನ್ಯಾಶ್ನಲ್, 27-05-2022)

(4)

ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: ಭಾರತದ ಬಂಗಾಳದ ಮಾಲ್ಡಾ ಪ್ರಾಂತ್ಯದ ಓರ್ವ ಮುಅಲ್ಲಿಮ್ ಸಾಹೇಬರಿದ್ದಾರೆ, ಅವರ ಮೂತ್ರಪಿಂಡಗಳು ವಿಫಲವಾಗಿವೆ. ಇದು 2005ರ ವಿಷಯವಾಗಿದೆ. ಇದಕ್ಕೆ ವೈದ್ಯರು ಚಿಕಿತ್ಸೆ ನೀಡಲು ಪ್ರಯತ್ನಿಸಿದರು. ಏನೂ ಪ್ರಯೋಜನವಾಗುತ್ತಿರಲಿಲ್ಲ. ಈಗ ಏನೂ ಮಾಡಲು ಸಾಧ್ಯವಿಲ್ಲ ಎಂದು ವೈದ್ಯರು ಉತ್ತರಿಸಿದ್ದರು. 2005 ರಲ್ಲಿ, ನಾನು ಖಾದಿಯಾನ್‌ಗೆ ಹೋದಾಗ, ಅಲ್ಲಿ ಕುಟುಂಬದೊಂದಿಗೆ ಭೇಟಿ ಇತ್ತು ಮತ್ತು ಅವರು ತಮ್ಮ ಅನಾರೋಗ್ಯದ ಬಗ್ಗೆ ಹೇಳಿದರು. ಮುಅಲ್ಲಿಮ್ ಸಾಹಿಬ್ ದುಆ ಮಾಡಲು ಕೇಳಿಕೊಂಡರು ಮತ್ತು ಸ್ವಲ್ಪ ಕಾಲದ ನಂತರ ಅವರು ಮತ್ತೊಂದು ತಪಾಸಣೆಗಾಗಿ ಆಸ್ಪತ್ರೆಗೆ ಹೋದರು, ಮೂತ್ರಪಿಂಡಗಳು ಗಮನಾರ್ಹವಾಗಿ ಚೇತರಿಸಿಕೊಂಡಿರುವುದನ್ನು ಕಂಡು ವೈದ್ಯರು ಆಶ್ಚರ್ಯಚಕಿತರಾದರು ಮತ್ತು ಅಲ್ಲಾಹನ ಅನುಗ್ರಹದಿಂದ ಅವರು ಸಂಪೂರ್ಣವಾಗಿ ಚೇತರಿಸಿಕೊಂಡರು. ಹೀಗೆ ಇದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಾಗಿದೆ.

ಇದು ಅಸಾಧ್ಯವಾದುದನ್ನು ಸಾಧ್ಯವಾಗುವಂತೆ ಮಾಡುತ್ತದೆ. (ಸೆಹ್‌ರೋಝು, ಅಲ್-ಫಝಲ್ ಇಂಟರ್ನ್ಯಾಷನಲ್ 27 ಮೇ 2022)

ಹುಝೂರ್ ಅನ್ವರ್(ಅತಬಿಅ) ಅವರ ದುಆ ಸ್ವೀಕಾರದ ಕುರಿತು ನಾನು ಸ್ವೀಕರಿಸಿದ ಕೆಲವು ಘಟನೆಗಳು ವಕೀಲ ತಬ್ಶೀರ್ ಲಂಡನ್‌ನಿಂದ ವಕಾಲತ್ ತಅ್‌ಮೀಲ್ ವ ತನ್‌ಫೀದ್(ಭಾರತ, ನೇಪಾಳ, ಭೂತಾನ್‌ಗೆ) ಅವರ ಮೂಲಕ ಪಡೆದದ್ದರಿಂದ ಕೆಲವು ಘಟನೆಗಳನ್ನು ವಿವರಿಸುತ್ತೇನೆ:

(WTT-46797/25-9-22 ಉಲ್ಲೇಖದೊಂದಿಗೆ ವಕೀಲ ತಬ್ಶೀರ್ ಲಂಡನ್‌ನಿಂದ T-9313-19 R/14-9-22 ಪತ್ರವನ್ನು ಸ್ವೀಕರಿಸಲಾಗಿದೆ)

(5)

ಮಹಾರಾಷ್ಟ್ರದ 'ಚಂದರ್‌ಪುರ' ಜಿಲ್ಲೆಯ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್ ಹೀಗೆ ಬರೆಯುತ್ತಾರೆ:

ಇಂಜಿನಿಯರ್ ಆಗಿರುವ ಜಮಾಅತ್ ಅಹ್ಮದೀಯ "ಬಲಾರಪುರ"ದ ನಿಷ್ಠಾವಂತ ಯುವಕರಾದ ಮುನವ್ವರ್ ಅಲೀ ಸಾಹಿಬ್ ಹಲವಾರು ದಿನಗಳಿಂದ ವಿವಿಧ ಕಂಪನಿಗಳಲ್ಲಿ ಉದ್ಯೋಗಕ್ಕಾಗಿ ಸಂದರ್ಶನ ಇತ್ಯಾದಿಗಳನ್ನು ನೀಡುತ್ತಿದ್ದರೂ ಎಲ್ಲಿಯೂ ಯಶಸ್ಸು ಸಿಗುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ರವರು ಮಸ್ಜಿದ್ ಬೈತುಲ್ ಫುತೂಹ್ ಲಂಡನ್‌ನ ರೆನೋವೇಶನ್‌ಗಾಗಿ ಯೋಜನೆಯನ್ನು ನೀಡಿದ್ದರು. ಅದಕ್ಕೆ ಅವರು ಅಪಾರ ಮೊತ್ತವನ್ನು ವಾಗ್ದಾನವಾಗಿ ಬರೆದಿದ್ದರು ಆಗ ಅವರ ಬಳಿ ಕೆಲಸವೂ ಇರಲಿಲ್ಲ. ಇದರ ಜೊತೆಗೆ ಹುಝೂರ್ ಅನ್ವರ್(ಅತಬಿಅ)ರವರ ಸೇವೆಯಲ್ಲಿ ಪ್ರಾರ್ಥನೆಗಾಗಿ ಬರೆದರು. ಅಲ್ಲಾಹನು ಖಂಡಿತ ಸಹಾಯ ಮಾಡುತ್ತಾನೆ ಎಂಬ ದೇವರಲ್ಲಿ ನನಗೆ ನಂಬಿಕೆ ಇತ್ತು ಎಂದು ಅವರು ಹೇಳುತ್ತಾರೆ. ಹೀಗೆ ಸರ್ವಶಕ್ತನಾದ ಅಲ್ಲಾಹನು ಅವರನ್ನು ಮೆಚ್ಚಿದನು ಮತ್ತು ಅವರಿಗೆ ಖತರ್‌ನಲ್ಲಿ ಕೆಲಸ ಸಿಕ್ಕಿತು ಮತ್ತು ಅವರು ವಾಗ್ದಾನ ಮಾಡಿದ ಹಣವಷ್ಟು ಸಂಬಳವಾಗಿ ನಿಗದಿಪಡಿಸಲಾಯಿತು.

(6)

ಬುರ್ಕಿನಾ ಫಾಸೊದ ಅಮೀರ್ ಸಾಹಿಬ್ ಬರೆಯುತ್ತಾರೆ:

ಬುರ್ಕಿನಾ ಫಾಸೋವಿನ ಅಫ್ಸರ್(ಅಧಿಕಾರಿ) ಜಲ್ಸ ಸಾಲಾನ ಮಾನ್ಯ ಜಿಯಾಲು ಅಬ್ದುಲ್ ರಹಮಾನ್ ಸಾಹಿಬ್ ಅವರು ಈ ವರ್ಷದ ಮಾರ್ಚ್‌ನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿ ಮಾಡಿ ನಮ್ಮ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ನಡೆಯಲಿದೆ ಆದರೆ ಅಲ್ಲಿ ತುಂಬ ಶಕೆ ಇದೆ ಎಂದು ಅವರು ವಿನಂತಿಸಿದರು. ಅದಕ್ಕೆ ಹುಝೂರ್(ಅತಬಿಅ) ರವರು ಹೇಳಿದರು: ನೀವು ಮಳೆಯಾಗಬೇಕು ಎಂದು ಬಯಸುತ್ತಿದ್ದೀರೋ? ಅದಕ್ಕೆ ಅವರು ಉತ್ತರಿಸಿದರು ಹೌದು ಹುಝೂರ್! ಅದಕ್ಕೆ ಹುಝೂರ್(ಅತಬಿಅ) ಹೇಳಿದರು 'ಸರಿ'. ಹೀಗೆ, ಜಲ್ಸ ಆಯೋಜಿಸಿದಾಗ ಮೊದಲ ದಿನ ತಾಪಮಾನವು 42 ಡಿಗ್ರಿಗಳಷ್ಟಿತ್ತು. ಆದರೆ ಅಸರ್ (ಸಂಜೆ) ನಂತರ ವಾತಾವರಣವು ಹಿತಕರವಾಯಿತು ಮತ್ತು ಸ್ವಲ್ಪ ಮಳೆಯಾಯಿತು ನಂತರ ರಾತ್ರಿ ಎಂಟು ಗಂಟೆಗೆ ಧಾರಾಕಾರ ಮಳೆ ಪ್ರಾರಂಭವಾಯಿತು ಹೀಗೆ ರಾತ್ರಿ 11:00 ಗಂಟೆಯ ನಂತರ ಮಳೆ ನಿಂತಿತು ಮತ್ತು ಇಡೀ ಸ್ಥಳವು ಗಾಳಿಯಿಂದ ಒಣಗಲು ಪ್ರಾರಂಭಿಸಿತು. ಕಾರ್ಯಕ್ರಮದ ಪ್ರಕಾರ ಬೆಳಿಗ್ಗೆ ನಮಾಝೆ ತಹಜ್ಜುದ್ ನಿರ್ವಹಿಸಲಾಯಿತು. ನನಗೆ ಇಪ್ಪತ್ತು ವರ್ಷಕ್ಕಿಂತ ಹೆಚ್ಚು ಕಾಲವಾಗಿದೆ ಮತ್ತು ಜಮಾಅತ್‌ನ ಹಿರಿಯ ಜನರನ್ನು ಕೇಳಿದಾಗ ಅವರು ಹೇಳಿದರು ಎಂದಿಗೂ ಜಲ್ಸದ ಸಂದರ್ಭದಲ್ಲಿ ಮಳೆಯಾಗಿರಲಿಲ್ಲ ಮತ್ತು ಹೀಗೆ ಈ ಮಾಸದಲ್ಲಿ ಮಳೆಯಾಗುವುದು ಅಸಾಮಾನ್ಯ ವಿಷಯವಾಗಿದೆ. ಮತ್ತೆ ಅಫ್ಸರ್ ಸಾಹಿಬ್ ಅವರು ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಭೇಟಿ ಮತ್ತು ಜಲ್ಸ ಸಾಲಾನದ ವಿನಂತಿಯನ್ನು ವಿವರಿಸಿದಾಗ ಅಲ್ಲಿನ ಸಂಪೂರ್ಣ ವಾತಾವರಣವೇ ಬದಲಾಯಿತು ಎಲ್ಲರ ಹೃದಯವು ಪ್ರಾರ್ಥನೆ ಸ್ವೀಕಾರದಿಂದ ಮತ್ತು ಖಿಲಾಫತೆ ಅಹ್ಮದಿಯಾದ ಮೇಲಿನ ಪ್ರೀತಿ ಮತ್ತು ಭಕ್ತಿಯಿಂದ ತುಂಬಿತು. ಹೀಗೆ ಇಡೀ ವಾತಾವರಣವೂ "ನಅ್‌ರಾಯೆ ತಕ್ಬೀರ್" ಎಂಬ ಘೋಷಣೆಯೊಂದಿಗೆ ದೀರ್ಘಕಾಲ ಪ್ರತಿಧ್ವನಿಸುತ್ತಲೇ ಇತ್ತು.

(7)

ಕಾಂಗೋ ಬ್ರಾಝಿಲ್‌ನಲ್ಲಿರುವ ಪಾಯಿಂಟ್ ನೌವರ್ ನಗರದ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ಕಾಂಗೋ ಬ್ರಝಾವೀಲ್‌ನಲ್ಲಿರುವ ಪಾಯಿಂಟ್ ನೋರ್ ನಗರದಲ್ಲಿ 2015ರಲ್ಲಿ ಅಹ್ಮದಿಯಾ ಮಿಷನ್ ಸ್ಥಾಪನೆಯಾದ ನಂತರ ಒಂದು ದಿನ, ಮಾರುಕಟ್ಟೆಯಲ್ಲಿ ಓರ್ವ ಪಾಕಿಸ್ತಾನದ ಸ್ನೇಹಿತ ಮುಹಮ್ಮದ್ ಇಕ್ಬಾಲ್ ಅವರನ್ನು ಭೇಟಿಯಾದರು. ಮೊದಲು ಅವರು ಬಹಳ ಸಂತೋಷದಿಂದ ಭೇಟಿಯಾದರು, ಫೋನ್ ನಂಬರ್ ಸಹ ಪಡೆದುಕೊಂಡರು. ಆದರೆ ನಾನು ಅಹ್ಮದಿ ಎಂದು ಹೇಳಿದಾಗ ಅವರ ವರ್ತನೆಯಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಯಾಯಿತು.

ಸಮಯ ಕಳೆದಂತೆ, ಪ್ರತಿ ಬಾರಿ ನಾನು ಅವರನ್ನು ಸಂಪರ್ಕಿಸಿ ಮಿಷನ್ ಹೌಸ್‌ಗೆ ಬರಲು ಆಹ್ವಾನಿಸಿದಾಗ ಅವರು ಏನಾದರು ನೆಪ ಮಾಡುತ್ತಿದ್ದರು. 2017 ರಲ್ಲಿ ಅವರ ಕೆಲಸ ಇದ್ದಕ್ಕಿದ್ದಂತೆ ಕೊನೆಗೊಂಡಿತು ಮತ್ತು ದೊಡ್ಡ ಮೊತ್ತದ ಹಣವೂ ಸಿಕ್ಕಿಬಿದ್ದಿತು. ಅದೇ ಸಮಯದಲ್ಲಿ ಅವರ ಪಾಸ್‌ಪೋರ್ಟ್‌ನ ಅವಧಿಯು ಸಹ ಮುಕ್ತಾಯವಾಗಿತ್ತು. ಅವರು ತುಂಬಾ ಚಿಂತಿತರಾಗಿದ್ದರು ಮತ್ತು ಎಲ್ಲೆಡೆ ಪ್ರಯತ್ನಿಸಿದರು ಆದರೆ ಯಾವುದೇ ಪರಿಹಾರವನ್ನು ಕಂಡುಹಿಡಿಯಲಾಗಲಿಲ್ಲ.

ನಂತರ 2018 ರ ಜನವರಿಯಲ್ಲಿ ಒಂದು ದಿನ, ಅವರು ತೀವ್ರ ಸಂಕಟದಲ್ಲಿ ಇದ್ದಕ್ಕಿದ್ದಂತೆ ಕರೆ ಬಂತು, ನಾನು ನಿಮ್ಮನ್ನು ಭೇಟಿ ಮಾಡಲು ಮಿಷನ್ ಹೌಸ್‌ಗೆ ಬರಲು ಬಯಸುತ್ತೇನೆ ಎಂದು ಹೇಳಿದರು. ಇಲ್ಲಿಗೆ ತಲುಪಿದ ನಂತರ ಅವರು ತಮ್ಮ ಕಳವಳವನ್ನು ವ್ಯಕ್ತಪಡಿಸಿ ನನಗೆ ಪಾಸ್‌ಪೋರ್ಟ್ ಮಾಡಿಸಿ ಕೊಡಿ ಎಂದು ಕೇಳಿಕೊಂಡರು. ಜಮಾಅತ್ ಅಹ್ಮದಿಯಾ ಮಾತ್ರ ನಿಮಗೆ ಸಹಾಯ ಮಾಡಬಹುದು ಎಂದು ಎಲ್ಲರೂ ನನಗೆ ಹೇಳಿದ್ದಾರೆ ಎಂದು ಅವರು ಹೇಳಿದರು.

ಹಾಗಾಗಿ ಅವರ ಪಾಸ್‌ಪೋರ್ಟ್‌ಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲಾಯಿತು ಮತ್ತು ಕೆಲವೇ ದಿನಗಳಲ್ಲಿ ಅವರ ಪಾಸ್‌ಪೋರ್ಟ್ ಅನ್ನು ತಯಾರಿಸಲಾಯಿತು. ಪಾಸ್ಪೋರ್ಟ್ ಸಿದ್ಧವಾದ ನಂತರ ಜಮಾಅತ್‌ನ ಬಗ್ಗೆ ಅವರ ಸ್ವಭಾವ ಮೃದುವಾಗಲು ಪ್ರಾರಂಭಿಸಿತು. ಅವರು ಆಗಾಗ್ಗೆ ಮಿಷನ್ ಹೌಸ್‌ಗೆ ಬರಲು ಮತ್ತು ಒಟ್ಟಿಗೆ ಊಟ ಮಾಡಲು ಪ್ರಾರಂಭಿಸಿದರು. ನಂತರ ಜಲ್ಸಾ ಸಾಲಾನ ಕಾಂಗೋ 2018 ರಲ್ಲಿ ಭಾಗವಹಿಸಿದರು. ಅವರು ಕೆಲಸ ಕಳೆದುಕೊಂಡು ಒಂದು ದೊಡ್ಡ ಮೊತ್ತದ ಹಣವೂ ಸಿಕ್ಕಿಬಿದ್ದಿತ್ತು ಅವರಿಗೆ ಅದನ್ನು ಪಡೆಯಲು ಯಾವುದೇ ಮಾರ್ಗವಿರಲಿಲ್ಲ. ಇದೇ ಅವಧಿಯಲ್ಲಿ 15 ತಿಂಗಳು ಕಳೆಯಿತು. ಮತ್ತು ಅವರ ಚಿಂತೆ ಹೆಚ್ಚಾಗುತ್ತಲೇ ಇತ್ತು.

ಒಂದು ದಿನ, ಮಿಷನ್ ಹೌಸ್‌ನಲ್ಲಿ ಕುಳಿತಾಗ, ಅವರು ತುಂಬಾ ದುಃಖಿತರಾಗಿ ನೀವು ನಿಮ್ಮ ಜಮಾಅತ್‌ನ ಖಲೀಫರಿಗೆ ನನ್ನ ಪರವಾಗಿ ಪ್ರಾರ್ಥನೆ ಪತ್ರವನ್ನು ಬರೆಯುವಂತೆ ಕೇಳಿಕೊಂಡರು. ಮತ್ತು ಮತ್ತೆ ಮತ್ತೆ ಒತ್ತಾಯಿಸಲು ಪ್ರಾರಂಭಿಸಿದರು. ನಾವು ಈಗ ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಪ್ರಾರ್ಥನಾ ಪತ್ರವನ್ನು ಬರೆಯುತ್ತೇವೆ ಎಂದು ನಾನು ಹೇಳಿದೆ, ಆದರೆ ನೀವು ಅಹ್ಮದಿಯಾಗಿರಲಿ ಅಥವಾ ಇಲ್ಲದಿರಲಿ, ಈ ಪ್ರಾರ್ಥನೆಯನ್ನು ಸ್ವೀಕರಿಸುವುದು ಅಹ್ಮದಿಯಾ ಜಮಾಅತ್‌ನ ಸತ್ಯತೆಗೆ ಅಲ್ಲಾಹನ ಕಡೆಯಿಂದ ಸಂಕೇತವಾಗಿರುವುದು ಎಂದು ನೆನಪಿಡಿ. ಏಕೆಂದರೆ ನಿಮ್ಮ ಹಣವನ್ನು ಮರಳಿ ಪಡೆಯುವ ಭರವಸೆ ನಿಮಗೆ ಸ್ವಲ್ಪವೂ ಇಲ್ಲ. ಆದ್ದರಿಂದ, ಆ ರಾತ್ರಿಯೇ ಅವರು ಪ್ರಾರ್ಥನಾ ಪತ್ರವನ್ನು ಫ್ಯಾಕ್ಸ್ ಮಾಡಿದರು ಮತ್ತು ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯನ್ನು ಶೀಘ್ರದಲ್ಲೇ ನೀಡಲೆಂದು ಕಾಯಲು ಪ್ರಾರಂಭಿಸಿದರು.

ಸರ್ವಶಕ್ತನಾದ ಅಲ್ಲಾಹನು ಕೂಡ ಅತ್ಯಂತ ಮಹಿಮಾನ್ವಿತನಾಗಿರುತ್ತಾನೆ ಮತ್ತು ಅಲ್ಲಾಹನೂ ತನ್ನ ಖಲೀಫನ ಮೇಲೆ ಅಪಾರ ಪ್ರೀತಿಯನ್ನು ಹೊಂದಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಅನುಗ್ರಹಿಸಿದನು ಮತ್ತು ಅಂತಿಮವಾಗಿ ನಾಲ್ಕು ದಿನಗಳ ನಂತರ ಅವರು ನಗುತ್ತಾ ಮಿಷನ್ ಹೌಸ್‌ಗೆ ಬಂದು ಹೀಗೆ ಹೇಳಿದರು ಆ ರಾತ್ರಿ ನಾವು ಖಲೀಫಾ ಸಾಹಿಬ್ ಅವರಿಗೆ ಪತ್ರವನ್ನು ಫ್ಯಾಕ್ಸ್ ಮಾಡಿದೆವು, ಮರುದಿನವೇ ನನಗೆ ಕಚೇರಿಯಿಂದ ನೀವು ಪುನಃ ಕೆಲಸಕ್ಕೆ ಸೇರ್ಪಡೆಯಾಗಿರಿ ಎಂದು

ಕರೆ ಬಂದಿತು. ಮತ್ತು ಹಣ ಪಡೆಯುವ ಬಗ್ಗೆಯೂ ಭರವಸೆಯನ್ನೂ ನೀಡಿದ್ದಾರೆ.

ನಾನು ಅಲ್ಹಮ್ದುಲಿಲ್ಲಾಹ್ ಪಠಿಸಿದೆ ಮತ್ತು "ನೋಡಿ, ಸರ್ವಶಕ್ತನಾದ ಅಲ್ಲಾಹನು ನಿಮಗೆ ದಯಪಾಲಿಸಿದ್ದಾನೆ ಮತ್ತು ಪ್ರೀತಿಯ ಖಲೀಫರ ಪ್ರಾರ್ಥನೆಯಿಂದ ಅಹ್ಮದಿಯಾತ್‌ನ ಸತ್ಯಾಸತ್ಯತೆಯ ಪವಾಡವು ನಿಮಗೆ ತೋರಿಸಲ್ಪಟ್ಟಿದೆ. ಅವರು ಅಹ್ಮದೀಯತ್‌ಗೆ ವಹಳ ಸಮೀಪಿಸಿದ್ದಾರೆ, ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡುವ ಸಾಧನವನ್ನು ಸೃಷ್ಟಿಸಲಿ. ಆಮೀನ್. **(ವಕಾಲತ್ ತಬ್ಶೀರ್ ಲಂಡನ್)**

(8)

ಅಬ್ರಾರ್ ಅಹ್ಮದ್ ಸಾಹಿಬ್ ಜರ್ಮನಿಯಿಂದ ಬರೆಯುತ್ತಾರೆ: ಜರ್ಮನಿಗೆ ಬಂದ ನಂತರ ನಾನು ಬರ್ಗರ್ಕಿಂಗ್ (ಫಾಸ್ಟ್ ಫುಡ್ ರೆಸ್ಟೋರೆಂಟ್) ನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದೆ. ಒಂದು ದಿವಸ ನಾನು ಹುಝೂರ್ ಅನ್ವರ್(ಅತಬಿಅ)ರವರ ಒಂದು ಉಲ್ಲೇಖವನ್ನು ಹೀಗೆ ಓದಿದೆ "ಹಂದಿ ಮಾಂಸ ಅಥವಾ ಮದ್ಯ ಮಾರಾಟದ ಜಾಗದಲ್ಲಿ ಕೆಲಸ ಮಾಡುವವರಿಂದ ಚಂದ ಪಡೆಯಬಾರದು" ಎಂದು.

ಅವರು ಹೇಳುತ್ತಾರೆ ಹುಝೂರ್ ಅನ್ವರ್(ಅತಬಿಅ) ಅವರ ಈ ಹೇಳಿಕೆಯನ್ನು ಓದಿದಾಗ ಅವರು ತಮ್ಮ ಪ್ರಜ್ಞೆಯನ್ನು ಕಳೆದುಕೊಂಡಂತೆ ಆಯಿತು. ಅವರಿಗೆ ಇಡೀ ರಾತ್ರಿ ಅಸವಾಧಾನವಿತ್ತು ಮತ್ತು ಓ ಸರ್ವಶಕ್ತನಾದ ಅಲ್ಲಾಹನೇ! ನನ್ನ ಪರಿಸ್ಥಿತಿ ನಿನಗೆ ತಿಳಿದಿದೆ ಎಂದು ನಫಿಲ್ ನಮಾಝ್ ನಿರ್ವಹಿಸಿದೆ ಅದೇ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರಿಗೆ ಪತ್ರವನ್ನು ಸಹ ಬರೆದಿದೆ. ಮತ್ತು ಈ ಪುಟ್ಟ ಊರಿನಲ್ಲಿ ಬೇರೆ ಯಾರು ನನಗೆ ಕೆಲಸ ನೀಡುತ್ತಾರೆ ಎಂದು ಯೋಚಿಸುತ್ತಾ ಇದ್ದೆ. ಮತ್ತು ಅದೇ ಸಮಯದಲ್ಲಿ, ಜಮಾಅತ್‌ನ ಜನರು ಇತನು ನಮಗೆಲ್ಲ ವಸಿಯ್ಯತ್ ಮಾಡಲು ಹೇಳುತ್ತಾನೆ ಆದರೆ ಈಗ ಇತನು ತನ್ನ ವಸಿಯ್ಯತ್ ಹೇಗೆ ಕಾಪಾಡಿಕೊಳ್ಳುತ್ತಾನೆ ಎಂದು ಹೇಳತೊಡಗಿದರು.

ಅದೇ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರಿಂದ ಪತ್ರಕ್ಕೆ ಉತ್ತರ ಬಂದಿತು, ಅದರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಸರ್ವಶಕ್ತನಾದ ಅಲ್ಲಾಹನು ಖಂಡಿತವಾಗಿಯೂ ನಿಮಗೆ ಅನುಗ್ರಹಿಸುವ ಕೆಲಸವನ್ನು ನೀಡುತ್ತಾನೆ ಆದ್ದರಿಂದ ನೀವು ಬಹಳಷ್ಟು ದುಆ ಮಾಡಬೇಕು ಎಂದು ಹೇಳಿದರು.

ಆದ್ದರಿಂದ ತಕ್ಷಣವೇ ಎದ್ದು ಕೆಲಸದ ಮಾಲಿಕರಿಗೆ ಕೆಲಸದಿಂದ ರಾಜೀನಾಮೆಯನ್ನು ನೀಡಿ ಇದು ನನ್ನ ಕೊನೆಯ ದಿನ ಎಂದು ಹೇಳಿದೆನು. ಮಾಲೀಕರು ಹಣ ಸಿಗುವುದಿಲ್ಲ, ತುಂಬಾ ಕಷ್ಟವಾಗುತ್ತದೆ ಎಂದು ಬೆದರಿಕೆ ಹಾಕಿದರೂ ನಾನು ಅಲ್ಲಿಂದ ರಾಜೀನಾಮೆ ನೀಡಿ ಮನೆಗೆ ಮರಳಿದೆ. ಮನೆಗೆ ಬಂದು ಲೆಟರ್ ಬಾಕ್ಸ್ ತೆರೆದು ನೋಡಿದಾಗ ಅಂಚೆ ಇಲಾಖೆಯಿಂದ ನಾಳೆಯಿಂದ ಕೆಲಸಕ್ಕೆ ಬರುವಂತೆ ಪತ್ರ ಬಂದಿತ್ತು. ತಕ್ಷಣ ದೇವರ ಮುಂದೆ ತಲೆಬಾಗಿದೆ ಒಂದು ದಿನದ ಹಿಂದೆ ಕೆಲಸ ಮುಗಿದು ಮರುದಿನ ಹೊಸ ಕೆಲಸ ಸಿಕ್ಕಿತು ಎಂದು. ಈಗ ಸರ್ವಶಕ್ತನಾದ ಅಲ್ಲಾಹನು ವಾಹನವನ್ನೂ ನೀಡಿದ್ದು ಅಲ್ಲಾಹನ ಅನುಗ್ರಹದಿಂದ ಸೆಕ್ರೇಟರಿ ವಸಾಯಾದ ಟಾರ್ಗೆಟ್ ಅನ್ನು ಸಹ ಪೂರ್ಣಗೊಳಿಸಲು ಸಾಧ್ಯವಾಯಿತು. ಅಲ್ಹಮ್ದುಲಿಲ್ಲಾಹ್

ಆತ್ಮೀಯ ಕೇಳುಗರೇ! ಈ ಘಟನೆಗಳನ್ನು ಕೇಳಿದ ನಂತರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮಾತುಗಳಲ್ಲಿ ಮನಸ್ಸಿನಿಂದ ಅದೇ ಧ್ವನಿ ಬರುತ್ತದೆ:

ಖುದ್ರತ್ ಸೆ ಅಪ್ನಿ ಝಾತ್ ಕಾ ದೇತಾ ಹೈ ಹಖ್ ಸಬೂತ್
ಉಸ್ ಬೇ ನಿಶಾಂ ಕಿ ಚೆಹ್ರಾ ನುಮಾಯಿ ಯಹೀ ತೊ ಹೈ
ಜಿಸ್ ಬಾತ್ ಕೊ ಕಹೇ ಕೆ ಕರೂಂಗಾ ಮೆಂ ಯೆಹ್ ಝರೂರ್
ಟಲ್ತೀ ನಹೀಂ ಡೊ ಬಾತ್ ಖುದಾಯೀ ಯಹೀ ತೊಹೈ
ಗೈರ್ ಮುಮ್‌ಕಿನ್ ಕೊ ಯೆಹ್ ಮುಮ್ಕಿನ್ ಮೇಂ ಬದಲ್ ದೇತೀ ಹೈ
ಅಯ್ ಮೆರೆ ಫಲ್ಸಫಿಯೋಂ! ಝೋರೆ ದುಆ ದೇಖೋ ತೋ

ಅಹ್ಮದಿಯಾ ಜವಾಅತ್, ಅಲ್ಲಾಹನ ಅನುಗ್ರಹದಿಂದ, ಪೋಷಕರಿಗಿಂತ ಹೆಚ್ಚು ನೋವು ಹೊಂದಿರುವ ಹಾಗೂ ಪ್ರಾರ್ಥನೆಗಳನ್ನು ಮಾಡುವ ಓರ್ವ ವ್ಯಕ್ತಿತ್ವ ಹೊಂದಿರುವ ವಿಶ್ವದ ಏಕೈಕ ಜಮಾಅತ್ ಆಗಿದೆ. ಪ್ರತಿಯೊಬ್ಬರೂ ರಾತ್ರಿಯಲ್ಲಿ ಮಲಗಲು ಹೋದಾಗ, ಅವರು ಎಚ್ಚರಗೊಂಡು ತನ್ನ ಭಗವಂತನ ಮುಂದೆ ಪ್ರಪಂಚದ ಎಲ್ಲಾ ಜನರಿಗಾಗಿ ಪ್ರಾರ್ಥಿಸುತ್ತಾರೆ. ತಮ್ಮ ಆತ್ಮೀಯರಲ್ಲದೆ ಅನ್ಯರೂ ಸಹ ಈ ವಿಷಯವನ್ನು ಅನುಭವಿಸುತ್ತಾರೆ.

ಆತ್ಮೀಯ ಕೇಳುಗರೇ, ನಾನು ಈಗ ಅಮೀರುಲ್ ಮೊಮಿನೀನ್(ಅತಬಿಅ) ಅವರ ಯೋಜನೆಗಳು ಮತ್ತು ಪ್ರಾರ್ಥನೆಯ ಕುರಿತು ಸಲಹೆಗಳಿಗೆ ಸಂಬಂಧಿಸಿದಂತೆ ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇನೆ.

ಮೇ 21, 2004 ರಂದು ಮಾಡಿದ ಅವರ ಖುತ್‌ಬ ಜುಮುಅದಲ್ಲಿ (ಶುಕ್ರವಾರದ ಧರ್ಮೋಪದೇಶದಲ್ಲಿ) ಹುಝೂರ್ ಅನ್ವರ್(ಅತಬಿಅ)ರವರು ಹೇಳುತ್ತಾರೆ:

ನೆನಪಿಡಿರೀ, ಆತನು ನಿಜವಾದ ವಾಗ್ದಾನಗಳ ದೇವರಾಗಿದ್ದಾನೆ. ಅವನು ಇಂದಿಗೂ ಸಹ ತನ್ನ ಪ್ರೀತಿಯ ಮಸೀಹನ ಈ ಪ್ರೀತಿಯ ಜಮಾಅತ್‌ನ ಮೇಲೆ ತನ್ನ ಹಸ್ತವನ್ನು ಇರಿಸಿದ್ದಾನೆ. ಅವನು ನಮ್ಮನ್ನು ಎಂದಿಗೂ ಬಿಡುವುದಿಲ್ಲ ಮತ್ತು ಎಂದಿಗೂ ಬಿಡುವುದಿಲ್ಲ ಮತ್ತು ಎಂದಿಗೂ ಬಿಡುವುದಿಲ್ಲ.

ಅವನು ಮೊದಲ ಖಿಲಾಫತ್‌ಗಳಲ್ಲಿ ಮಾಡಿದಂತೆಯೇ ಇಂದಿಗೂ ಮಸೀಹನಿಗೆ ನೀಡಿದ ವಾಗ್ದಾನಗಳನ್ನು ಪೂರೈಸುತ್ತಾನೆ. ಅವನು ಮೊದಲು ಅನುಗ್ರಹಿಸಿದ ಹಾಗೆ ಇಂದಿಗೂ ತಮ್ಮ ಕರುಣೆ ಹಾಗೂ ಅನುಗ್ರಹಗಳನ್ನು ನೀಡುತ್ತಿದ್ದಾನೆ. ಮತ್ತು ಇನ್‌ಶಾಅಲ್ಲಾಹ್ ಮುಂದೆಯೂ ಅನುಗ್ರಹಿಸುತ್ತಾನೆ.... ಆದ್ದರಿಂದ ದುಆ ಮಾಡುತ್ತಾ ಮತ್ತು ಆತನಿಗೆ ಬಾಗುತ್ತಾ ಹಾಗೂ ಆತನ ಅನುಗ್ರಹಗಳನ್ನು ಯಾಚಿಸುತ್ತಾ ಯಾವಾಗಲೂ ಆತನ ಆಸ್ತಾನದಲ್ಲಿ ಬಿದ್ದಿರಿ. ಮತ್ತು ಈ ಬಲವಾದ ಸರಪಳಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಿ, ಆಗ ಯಾರೂ ನಿಮ್ಮನ್ನು ಮುಟ್ಟಲು ಸಾಧ್ಯವಿಲ್ಲ. ಸರ್ವಶಕ್ತನಾದ ಅಲ್ಲಾಹನು ಎಲ್ಲರಿಗೂ ಇದನ್ನು ಅನುಸರಿಸಲು ಸೌಭಾಗ್ಯ ನೀಡಲಿ."

(ಖುತ್‌ಬ ಜುಮುಅ, ಮೇ 21, 2004, ಅಲ್–ಫಜಲ್ ಇಂಟರ್ನ್ಯಾಷನಲ್, ಜೂನ್ 4, 2004, ಪುಟ–9)

ಹುಝೂರ್ ಅನ್ವರ್(ಅತಬಿಅ) ಅವರು ಹೇಳುತ್ತಾರೆ: "ಅಹ್ಮದೀಯರು ಎಲ್ಲೆಲ್ಲಿ ಹಿಂಸಾಚಾರಕ್ಕೆ ಒಳಗಾಗುತ್ತಿದ್ದಾರೆ, ಇದು ಸೈತಾನನೊಂದಿಗಿನ ಕೊನೆಯ ಯುದ್ಧವಾಗಿದೆ ಮತ್ತು ಸರ್ವಶಕ್ತನಾದ ಅಲ್ಲಾಹನಿಗಾಗಿ ನೀವು ಇಂದಿನ ಕಾಲದ ಇಮಾಮರು ರಚಿಸಿದ ಸೈನ್ಯಕ್ಕೆ ನೀವು ಸೇರಿದ್ದೀರಿ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ, ನೀವು ನಿಮ್ಮ ನಂಬಿಕೆಯನ್ನು ದೃಢಗೊಳಿಸುವಾಗ ಯಾವಾಗಲೂ ತಾಳ್ಮೆ ಮತ್ತು ಧೈರ್ಯವನ್ನು ತೋರಿಸಿ, ಸ್ಥಿರಚಿತ್ತತೆ ಮತ್ತು ಸ್ಥಿರತೆಗಾಗಿ ಅಲ್ಲಾಹನನ್ನು ಕೇಳಿಕೊಳ್ಳಿ. ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಹೆಚ್ಚು ಸ್ತುತಿಸಿರಿ. ಅಂತಿಮ ವಿಜಯ ಇನ್‌ಶಾಅಲ್ಲಾಹ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್‌ಗೆ ಸೇರಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ ಈ ಪೈಶಾಚಿಕ ಮತ್ತು ನಿರಂಕುಶ ಶಕ್ತಿಗಳನ್ನು ಸೋಲಿಸಲು ಸರ್ವಶಕ್ತನಾದ ಅಲ್ಲಾಹನು ಈ ಜಮಾಅತ್ ಅನ್ನು ಸ್ಥಾಪಿಸಿದ್ದಾನೆ. ಆದರೆ ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕಾದ ಒಂದು ವಿಷಯವೆಂದರೆ ಬಾಹ್ಯ ಸೈತಾನನನ್ನು ಸೋಲಿಸಲು, ಆಂತರಿಕ ಸೈತಾನನನ್ನು ಸಹ ನಿಗ್ರಹಿಸಬೇಕು. ಏಕೆಂದರೆ ನಮ್ಮ ವಿಜಯವು ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗಿನ ಸಂಬಂಧದಿಂದ ಆಗಿದೆ ಬಾಹ್ಯ ಕಾರಣಗಳಿಂದಲ್ಲ, ಆದರೆ ಪ್ರಾರ್ಥನೆಗಳ ಮೂಲಕ ಮತ್ತು ಪ್ರಾರ್ಥನೆಯ ಸ್ವೀಕಾರಕ್ಕಾಗಿ, ದೇವರ ಚಿತ್ತಕ್ಕೆ ಅನುಗುಣವಾಗಿ ನಡೆಯುವಂತೆ ಮಾಡುವುದು ಅವಶ್ಯಕವಾಗಿದೆ. ಮತ್ತು ಇದಕ್ಕಾಗಿ, ಆತ್ಮದೊಂದಿಗೆ ಜಿಹಾದ್ ಬಹಳ ಮುಖ್ಯವಾಗಿದೆ.

(ಖುತ್‌ಬ ಜುಮುಅ, ಮಾರ್ಚ್ 6, 2009)

ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: "ದೇವರು ತನ್ನ ಸೇವಕನಿಗೆ ಇಷ್ಟು ಹತ್ತಿರವಾದಾಗ ಆತನು ಮತ್ತು ಸೇವಕನು ಪರಸ್ಪರ ಲೀನವಾಗುತ್ತಾರೆ. ನಂತರ ಓರ್ವ ದಾಸನು ದುಆ ಮಾಡುವಾಗ, ಅಂತಹ ಸ್ಥಿತಿಯಲ್ಲಿ ಮಾಡಿದ ದುಆ ಮನುಷ್ಯನು ಊಹಿಸಲೂ ಸಾಧ್ಯವಾಗದಂತಹ ವಿಚಿತ್ರ ಪವಾಡಗಳನ್ನು ತೋರಿಸುತ್ತದೆ. ಆದ್ದರಿಂದ ಈ ಸ್ಥಿತಿಯನ್ನು ಸೃಷ್ಟಿಸುವುದು ಅಗತ್ಯವಾಗಿದೆ ಇದನ್ನು ಹಝ್ರತ್ ಮಸೀಹ್ ಮೌಊದ್(ಅ) ಅವರು ವಿವರಿಸಿದ್ದಾರೆ. ಸಾಮಾನ್ಯವಾಗಿ ಜಗತ್ತಿನಲ್ಲಿ ಗಮನಿಸಿ ನೋಡಿರಿ ಸಂಕಟದ ಸಂದರ್ಭದಲ್ಲಿ ಯಾರಾದರೂ ಪರಿಶುದ್ಧನಾಗಿ ಅಲ್ಲಾಹನ ಮುಂದೆ ಬಾಗಿದಾಗ ಆ ಸಂದರ್ಭದಲ್ಲಿ ಆತನು ಪ್ರಾಪಂಚಿಕ ಭೋಗಗಳಿಂದ ನಿರಾಸಕ್ತಿ ಹೊಂದಿರುತ್ತಾನೆ, ಅವನು ಪ್ರಪಂಚದತ್ತ ಗಮನ ಹರಿಸುವುದಿಲ್ಲ, ಕಷ್ಟದಲ್ಲಿ ಸಿಲುಕಿರುತ್ತಾನೆ, ಅವನು ತೊಂದರೆಯಲ್ಲಿ ಸಿಲುಕಿರುತ್ತಾನೆ, ಸರ್ವಶಕ್ತನಾದ ಅಲ್ಲಾಹನ ಮುಂದೆ ಬಾಗಿರುತ್ತಾನೆ, ಅಲ್ಲಾಹನ ಅಸ್ತಿತ್ವ ಮಾತ್ರ ಅವನ ಮುಂದೆ ಇರುತ್ತದೆ, ಹೀಗೆ ಸಂಕಟಗಳು ಈ ವ್ಯಕ್ತಿಯೊಳಗೆ ಒಂದು ಸ್ಥಿತಿಯನ್ನು ಸೃಷ್ಟಿಸಿರುತ್ತವೆ. ಆದ್ದರಿಂದ, ಅಂತಹ ಸ್ಥಿತಿಯಲ್ಲಿ ಪ್ರಾರ್ಥನೆ ಮಾಡುವ ಹೆಚ್ಚಿನ ಜನರು ಪ್ರಾಥನೆ ಸ್ವೀಕಾರವನ್ನು ಸಹ ವೀಕ್ಷಿಸುತ್ತಾರೆ.

ಹೀಗೆ, ಒಬ್ಬ ವ್ಯಕ್ತಿಯು ತನ್ನ ಮುಂದೆ ಅಲ್ಲಾಹನ (ರಹ್ಮಾನಿಯ್ಯತ್) ಕರುಣೆಯನ್ನು ಇಟ್ಟುಕೊಂಡು ಸರ್ವಶಕ್ತನಾದ ಅಲ್ಲಾಹನಿಗೆ ಹತ್ತಿರವಾಗಲು ಪ್ರಯುತ್ನಿಸುತ್ತಿದ್ದರೆ, ಒಂದು ಕೆಲಸ ಮುಗಿದ ನಂತರ, ನೋವು ನಿವಾರಣೆಯಾದ ನಂತರ, ಅವನು ಹತ್ತಿರವಾಗಲು ಪ್ರಯತ್ನಿಸುವುದನ್ನು ಬಿಡುವುದಿಲ್ಲ. ಅವನಿಗೆ, ಆಗ ಸರ್ವಶಕ್ತನಾದ ಅಲ್ಲಾಹನು ಯಾವಾಗಲೂ

ಅವನೊಂದಿಗೆ ಇರುತ್ತಾನೆ ಎಂದು ದುಆಗಳ ಸ್ವೀಕಾರದ ದರ್ಶನಗಳನ್ನು ತೋರಿಸುತ್ತಾನೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳು ಯಾವಾಗಲೂ ನಮ್ಮ ಮೇಲೆ ಬೀಳುವಂತೆ ಮಾಡಲು, ಸರ್ವಶಕ್ತನಾದ ಅಲ್ಲಾಹನ ಹತ್ತಿರವಾಗಿರಲು ಪ್ರಯತ್ನಿಸುವುದು ಅವಶ್ಯಕ. ಹೀಗೆ, ಇಂತಹ ಸಂದರ್ಭದಲ್ಲಿ, ಸರ್ವಶಕ್ತನಾದ ಅಲ್ಲಾಹನು ಈ ದಾಸನ ಅಗತ್ಯಗಳನ್ನು ಪೂರೈಸಲು ಎಲ್ಲಾ ಲೌಕಿಕ ಸಾಧನಗಳನ್ನು ಮತ್ತು ಪ್ರಪಂಚದ ಎಲ್ಲಾ ವಸ್ತುಗಳನ್ನು ಪ್ರಾರ್ಥನೆಯ ರೂಪದಲ್ಲಿ ಇರಿಸುತ್ತಾನೆ. ಆತನು ತನ್ನ ದಾಸನಿಗೆ ಸಹಾಯ ಮಾಡಲು ಎಲ್ಲಾ ಐಹಿಕ ಮತ್ತು ಸ್ವರ್ಗೀಯ ಸಾಧನಗಳನ್ನು ಲಭ್ಯವಾಗುವಂತೆ ಮಾಡುತ್ತಾನೆ. ಕೆಲವೊಮ್ಮೆ ಅಲ್ಲಾಹನು ದಾಸನ ಪ್ರಾರ್ಥನೆಯನ್ನು ಸ್ವೀಕರಿಸುತ್ತಾ ಮೋಡಗಳಿಂದ ಮಳೆಯನ್ನು ಕಳುಹಿಸುತ್ತಾನೆ; ಕೆಲವೊಮ್ಮೆ ಅವನು ಶತ್ರುಗಳ ಪರವಾಗಿ ತನ್ನ ದಾಸನ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಕ್ಷಾಮ ಮತ್ತು ವಿಪತ್ತುಗಳನ್ನು ಉಂಟುಮಾಡುತ್ತಾನೆ. ಹೀಗೆ ಇಂತಹ ಸ್ಥಿತಿಯು ಒಬ್ಬ ವಿಶ್ವಾಸಿಯ ಮನಸ್ಸಿನಲ್ಲಿ ದುಆ ಸ್ವೀಕಾರದ ಬಗ್ಗೆ ಉಟ್ಟಾಗಬೇಕು, ಇಂತಹ ಸ್ಥಿತಿಯು ಪ್ರತಿಯೊಬ್ಬ ಅಹ್ಮದಿಯು ತನ್ನ ಮನಸ್ಸಿನಲ್ಲಿ ಸೃಷ್ಟಿಸಬೇಕಾದ ಸ್ಥಿತಿಯಾಗಿದೆ."

(ಖುತ್‌ಬ ಜುಮುಅ, 22-09-2006)

ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ: "ಇಂದು ನಾವು ನಮ್ಮ ಉಳಿವಿಗಾಗಿ, ನಮ್ಮ ಆತ್ಮದ ಉಳಿವಿಗಾಗಿ, ನಮ್ಮ ಕುಟುಂಬದ ಉಳಿವಿಗಾಗಿ, ಅಹ್ಮದೀಯ ಜಮಾತ್‌ನ ಅಭಿವೃದ್ಧಿಗಾಗಿ ಮಾತ್ರವಲ್ಲದೆ ಮುಸ್ಲಿಂ ಉಮ್ಮಾ ಮತ್ತು ಅದಕ್ಕೂ ಮೀರಿ ಇಡೀ ಮಾನವೀಯತೆಯ ಉಳಿವಿಗಾಗಿ ದುಆದ ಕಡೆಗೆ ಗಮನ ಹರಿಸಬೇಕಾಗಿದೆ. ಆದ್ದರಿಂದ ಈ ದಿನಗಳಲ್ಲಿ (ಈ ದಿನಗಳಲ್ಲಿ ಎಂದರೆ ಯಾವಾಗಲೂ ಎಂದರ್ಥ) ಮತ್ತು ಇಂದಿನ ದಿನಗಳಲ್ಲಿ ವಿಶೇಷವಾಗಿ ಪರಿಸ್ಥಿತಿಯು ಹದಗೆಡುತ್ತಿರುವಾಗ ಪ್ರತಿಯೊಬ್ಬ ಅಹ್ಮದಿಯು ತಲೆಬಾಗಿ ತನ್ನ ಭಗವಂತನನ್ನು ಪ್ರಾರ್ಥಿಸಬೇಕು. ಮುಝ್‌ತರ್‌ನ (ಚಿಂತಾಕ್ರಾಮತನ) ಹಾಗೆ ಅಲ್ಲಾಹನನ್ನು ಕರೆಯಿರಿ. ಇಂದು ಮುಸ್ಲಿಂ ಉಮ್ಮಾ ಎಂತಹ ಪರಿಸ್ಥಿತಿಗಳನ್ನು ಅನುಭವಿಸುತ್ತಿದಿಯೊ ಮತ್ತು ಮುಸ್ಲಿಂ ರಾಷ್ಟ್ರಗಳು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಪ್ರಾರ್ಥನೆಯ ಹೊರತು ಯಾವ ಪರಿಹಾರವಿಲ್ಲ ಮತ್ತು ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದ್ದಾರೆ ಪ್ರಾರ್ಥನೆಯ ಸುರಕ್ಷಿತ ಕೋಟೆಯಲ್ಲಿ ಅಹ್ಮದಿಯರು ಹೊರತು ಬೇರೆ ಯಾರೂ ಇಲ್ಲ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಆಂತರಿಕ ಮತ್ತು ಬಾಹ್ಯ ಪ್ರಲೋಭನೆಗಳಿಂದ ರಕ್ಷಿಸಲಿ ಎಂದು ಮುಸ್ಲಿಂ ಉಮ್ಮಾಕ್ಕಾಗಿ ಪ್ರಾರ್ಥಿಸಿರಿ. ಹದಿನಾಲ್ಕು ನೂರು ವರ್ಷಗಳ ಹಿಂದೆ ಪ್ರವಾದಿ ಮುಹಮ್ಮದ್(ಸ) ಅವರು ಮುಸ್ಲಿಂ ಸಮುದಾಯಕ್ಕೆ ನೀಡಿದ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸರ್ವಶಕ್ತನಾದ ಅಲ್ಲಾಹನು ತೌಫೀಕ್ ನೀಡಲಿ. ಸರ್ವಶಕ್ತನಾದ ಅಲ್ಲಾಹನು ಈ ಪ್ರಪಂಚದಿಂದ ಹಿಂಸಾಚಾರವನ್ನು ತೊಡೆದುಹಾಕಲಿ ಎಂದು ಪ್ರಾರ್ಥಿಸಿ. ಮನುಷ್ಯನು ತನ್ನ ಸೃಷ್ಟಿಕರ್ತನಾದ ಅಲ್ಲಾಹನ ಕಡೆಗೆ ತಿರುಗಬೇಕು. ಅದನ್ನು ಗುರುತಿಸುವ ಮೂಲಕ, ತಮ್ಮ ಮೊಂಡುತನ ಮತ್ತು ಅಹಂಕಾರದ ಬಲೆಯಿಂದ ಹೊರಬರಬೇಕು. ಸರ್ವಶಕ್ತನಾದ ಅಲ್ಲಾಹನು ಅಸಮಾಧಾನ ಮತ್ತು ಕೋಪಕ್ಕೆ ಧ್ವನಿ ನೀಡಬೇಡಿ, ಬದಲಿಗೆ ಅಲ್ಲಾಹನ ಕಡೆಗೆ ಬಾಗಿರಿ. ಸರ್ವಶಕ್ತನಾದ ಅಲ್ಲಾಹನ ಈ ಸಂದೇಶವನ್ನು ಅರ್ಥಮಾಡಿಕೊಳ್ಳುವವರಾಗಿ, ನನ್ನ ಬಳಿಗೆ ಬನ್ನಿ ಎಂಬ ಸಂದೇಶವನ್ನು ಅರ್ಥಮಾಡಿಕೊಳ್ಳುವವರಾಗಲಿ, ನನ್ನನ್ನು ಪರಿಶುದ್ಧತೆಯಿಂದ ಕರೆ ಮಾಡಿ ಇದರಿಂದ ನಾನು ನಿಮ್ಮ ಪ್ರಾರ್ಥನೆಗಳನ್ನು ಕೇಳುತ್ತೇನೆ ಮತ್ತು ನೀವು ಎಲ್ಲವನ್ನೂ ಪರಿಗಣಿಸುವ ಈ ಜಗತ್ತನ್ನು ಉಳಿಸುತ್ತೇನೆ, ವಾಸ್ತವವೇನೆಂದರೆ ಅದು ತಾತ್ಕಾಲಿಕವಾಗಿದೆ. ನಿಮಗಾಗಿ ಅದನ್ನು ಶಾಂತಿಯ ಭದ್ರಕೋಟೆಯನ್ನಾಗಿ ಮಾಡುತ್ತೇನೆ. ಇದರಿಂದಾಗಿ ನಿಮ್ಮ ಸತ್ಕಾರ್ಯಗಳಿಂದ ನನ್ನ ಶಾಶ್ವತ ಸ್ವರ್ಗವನ್ನು ನೀವು ಪಡೆದುಕೊಳ್ಳುವಂತೆ ಮಾಡುತ್ತೇನೆ.... ನಂತರ, ನಾನು ಹೇಳಿದಂತೆ, ಈ ಜಗತ್ತಿಗಾಗಿ, ಮಾನವೀಯತೆಗಾಗಿಯೂ ಪ್ರಾರ್ಥಿಸಿರಿ. ಜಗತ್ತು ತನ್ನ ಅಹಂಕಾರ ಮತ್ತು ಮೊಂಡುತನದಿಂದ ವಿನಾಶದ ಕೂಪಕ್ಕೆ ವೇಗವಾಗಿ ಸಾಗುತ್ತಿದೆ. ಅದು ತನ್ನ ಸೃಷ್ಟಿಕರ್ತನನ್ನು ಮರೆತಿದೆ ಮತ್ತು ಅದರ ಪರಿಣಾಮವಾಗಿ ಅದು ಸರ್ವಶಕ್ತನಾದ ಅಲ್ಲಾಹನ ವಿಕೋಪಕ್ಕೆ ಧ್ವನಿ ನೀಡುತ್ತಿದೆ. ಕ್ರೌರ್ಯ ಎಷ್ಟರಮಟ್ಟಿಗೆ ಹೆಚ್ಚಿದೆ ಎಂದರೆ ಅದಕ್ಕೆ ನ್ಯಾಯ ಎಂಬ ಹೆಸರಿಡಲಾಗುತ್ತಿದೆ, ಅಲ್ಲಾಹನು ಈ ಜನರ ಮೇಲೆ ಕರುಣಿಸಲಿ.

ಈ ಹಿಂದೆ ನಾನು ತಮಗಾಗಿ ಮತ್ತು ಜಮಾತ್‌ಗಾಗಿ ಬಹಳಷ್ಟು ಪ್ರಾರ್ಥಿಸಲು ಹೇಳಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ಜಮಾಅತ್‌ನ ವಿರೋಧಿಗಳನ್ನು ನಿಷ್ಪ್ರಯೋಜಿತಗೊಳಿಸಲಿ. ಯಾವಾಗಲೂ ದೈವಿಕ ಜಮಾಅತ್‌ಗಳೊಂದಿಗೆ ಆಗುತ್ತದೆ ಅಂದರೆ ವಿರೋಧಿಗಳನ್ನು ಎದುರಿಸಬೇಕಾಗುತ್ತದೆ, ಇದು ಮುಂದುವರಿಯುತ್ತದೆ ಮತ್ತು ಮುಂದುವರಿಯುತ್ತಾ ಇರುತ್ತದೆ. ಹೀಗಾದರೆ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ. ಇದು ಸಹ ಸತ್ಯಾಂಶಕ್ಕೆ ಒಂದು ಪುರಾವೆಯಾಗಿದೆ. ಇದು ಬೇರೆಯವರ ಬಳಿ ಇಲ್ಲದಿದ್ದರೆ ಅವರು ಕಷ್ಟತೆಗಳನ್ನು ನೀಡುತ್ತಾರೆ. ಆದ್ದರಿಂದ ಅಹ್ಮದೀಯರು ಈ ವಿರೋಧಗಳಿಗೆ ಹೆದರುವುದಿಲ್ಲ ಮತ್ತು ಇನ್‌ಶಾಅಲ್ಲಾಹ್ ಹೆದರುವುದಿಲ್ಲ. ಇದು ನಂಬಿಕೆಯಲ್ಲಿ (ಈಮಾನ್) ಪ್ರಗತಿ ಮತ್ತು ಜಮಾಅತ್‌ನ ಪ್ರಗತಿಗೆ ಕಾರಣವಾಗುತ್ತದೆ, ಮತ್ತು ಈ ವಿರೋಧಗಳು ಯಾವಾಗಲೂ ಗೊಬ್ಬರವಾಗಿ ಕಾರ್ಯನಿರ್ವಹಿಸುತ್ತವೆ, ಆದರೆ ಈ ವಿರೋಧದಿಂದಾಗಿ ಆ ವಿರೋಧಿಗಳ ಕೆಟ್ಟ ಪರಿಣಾಮವನ್ನು ಅನುಭವಿಸುತ್ತಾರೆ ಆದ್ದರಿಂದ ಮಾನವ ಸಹಾನುಭೂತಿಯಿಂದ, ನಾವು ಅಂತಹ ಜನರಿಗಾಗಿ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುವುದೇನೆಂದರೆ ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ ಮತ್ತು ಇವರು ಈ ಕೆಟ್ಟ ಪರಿಣಾಮಕ್ಕಿಂತ ಮೊಂಚೆಯೇ ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವ ಮೂಲಕ ಅದರಿಂದ ತಪ್ಪಿಸಿಕೊಳ್ಳಲಿ. ಮತ್ತು ನಮ್ಮ ನ್ಯೂನತೆಗಳು ಮತ್ತು ತಪ್ಪುಗಳಿಂದಾಗಿ, ಸರ್ವಶಕ್ತನಾದ ಅಲ್ಲಾಹನು ನಮಗೆ ವಿಧಿಸಿರುವ ಸರ್ವಶಕ್ತನಾದ ಅಲ್ಲಾಹನ ಪ್ರತಿಫಲದಿಂದ ನಾವು ವಂಚಿತರಾಗಬಾರದು ಎಂದು ನಾವು ನಮಗಾಗಿ ಪ್ರಾರ್ಥಿಸಬೇಕು. ಶತ್ರುವಿನ ಪ್ರತಿಯೊಂದು ದುಷ್ಟ ಮತ್ತು ಪ್ರತಿ ಪ್ರಯತ್ನವು ನಮ್ಮ ನಂಬಿಕೆಯಲ್ಲಿ ಪ್ರಗತಿ ಮತ್ತು ಒಳ್ಳೆಯದನ್ನು ತರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ಪರಿಶ್ರಮವನ್ನು ತೋರಿಸೋಣ. ನಮ್ಮ ಶುಭ ಹಾರೈಕೆಗಳನ್ನು ಸರ್ವಶಕ್ತನಾದ ಅಲ್ಲಾಹನು ಯಾವಾಗಲೂ ಸ್ವೀಕರಿಸುವಂತಾಗಲಿ. ಮತ್ತು ಈ ಕಾರಣದಿಂದಾಗಿ ನಾವು ಅಲ್ಲಾಹನ ಪ್ರೀತಿಯನ್ನು ಪಡೆಯುವಂತಾಗಲಿ. ಅಲ್ಲಾಹನು ನಮಗೆ ತಿಳಿದಿರಲಿ ಅಥವಾ ಇಲ್ಲದಿರಲಿ, ಅವನ ಎಲ್ಲಾ ಒಳ್ಳೆಯ ಗುಣಗಳ ಆಶ್ರಯದಲ್ಲಿ ನಮ್ಮನ್ನು ತೆಗೆದುಕೊಳ್ಳಲಿ ಮತ್ತು ಅವನ ಸೃಷ್ಟಿಯ ಹಾನಿಯಿಂದ ನಮ್ಮನ್ನು ರಕ್ಷಿಸಲಿ. ಆಮೀನ್

(ಖುತ್‌ಬ ಜುಮುಅ, ಆಗಸ್ಟ್ 11, 2006)

**ವ ಆಖಿರುದ್ದಾಅ್‌ವನಾ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್**

...*...*...*...


**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತೆಹ್ರೀಕೆ ಜದೀದ್, ಅಂಜುಮನ್ ವಖ್‌ಫೆ ಜದೀದ್ ಖಾದಿಯಾನ್‌ನಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ (3) ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ (6) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (7) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ (8) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ. (**ಗಮನಿಸಿ:** ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09682627592, 09682587713,
ಕಛೇರಿ: 01872-501130
ಇ-ಮೇಲ್: diwan@qadian.in

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ (ಮಹಿಳೆಯರ ಸಭಾಂಗಣದಿಂದ)

# ಮಕ್ಕಳ ತರಬೇತಿ ಮತ್ತು ಅಹ್ಮದಿ ಮಾತೆಯರ ಜವಾಬ್ದಾರಿಗಳು ದೇಶಪ್ರೇಮ, ನಮಾಝ್, ತಿಲಾವತ್, ಖಿಲಾಫತ್‌ನೊಂದಿಗೆ ಪ್ರೇಮ ಮತ್ತು ಜವಾಬ್ದಾರಿಗಳು ದೇಶಪ್ರೇಮ, ನಮಾಝ್, ತಿಲಾವತ್, ಖಿಲಾಫತ್‌ನೊಂದಿಗೆ ಪ್ರೇಮ ಮತ್ತು ಉತ್ತಮ ಗುಣಲಕ್ಷಣಗಳು.

ಮಾನ್ಯ ಡಾ॥ ಮನ್ಸೂರ ಅಲಾಉದ್ದೀನ್ ಸಾಹಿಬ, ಸದರ್ ಲಜ್ನ ಇಮಾಅಲ್ಲಾಹ್ ಖಾದಿಯಾನ್

**ರಬ್ಬನಾ ಹಬ್‌ಲನಾ ಮಿನ್ ಅಝ್ವಾಜಿನಾ ವ ಝುರ್ರಿಯ್ಯಾತಿನಾ ಖುರ್ರತ ಅಲ್‌ಯುನಿವ್ವಜ್‌ಅಲ್‌ನಾ ಲಿಲ್‌ಮುತ್ತಖೀನ ಇಮಾಮಾ.** (ಸೂರ: ಅಲ್-ಫುರ್ಖಾನ್-75)

ನಿಕ್ಲೇಂ ತುಮ್‌ಹಾರಿ ಗೋದ್‌ಸೇ ಪಲ್‌ಕರ್ ವೋ ಹಕ್‌ಪರಸ್ತ್
ಹಾತೊಂ ಸೇ ಜಿನ್‌ಕೇ ದೀನ್ ಕೋ ನುಸ್ರತ್ ನಸೀಬ್ ಹೋ
ಅಯ್‌ಸೀ ತುಮ್‌ಹಾರಿ ಘರ್‌ಕೇ ಚರಾಗೋಂ ಕೀ ಹೋ ಝಿಯಾ
ಆಲಂ ಕೋ ಜಿನ್‌ಸೇ ನೂರ್ ಹಿದಾಯತ್ ನಸೀಬ್ ಹೋ

ಅನುವಾದ: ನಿಮ್ಮ ಮಡಿಲಿನಿಂದ ಪೋಷಣೆ ಪಡೆದು ಬರಲಿ ಇಂತಹ ಸತ್ಯವಾದಿಗಳು
ಅವರ ಕೈಗಳಿಂದ ಧರ್ಮೋತ್ಥಾನಕ್ಕೆ ಸಹಾಯವಾಗಲಿ
ನಿಮ್ಮ ಮನೆಗಳ ದೀಪದ ಬೆಳಕು ಹೇಗಿರಬೇಕೆಂದರೆ
ಅದರ ಪ್ರಕಾಶದಿಂದ ಪ್ರಪಂಚಕ್ಕೆ ಬೆಳಕು, ಮಾರ್ಗದರ್ಶನದ ಭಾಗ್ಯ ಒದಗಿ ಬರಬೇಕು.

ಸನ್ಮಾನ್ಯ ಅಧ್ಯಕ್ಷೆ ಸಾಹಿಬಾ ಹಾಗೂ ಪ್ರೀತಿಯ ಸಹೋದರಿಯರೇ ಹಾಗೂ ಮಕ್ಕಳೇ! ನನ್ನ ಭಾಷಣದ ವಿಷಯ **"ಮಕ್ಕಳ ತರಬೇತಿ ಮತ್ತು ಅಹ್ಮದಿ ಮಾತೆಯರ ಜವಾಬ್ದಾರಿಗಳು, ದೇಶಪ್ರೇಮ, ನಮಾಝ್, ತಿಲಾವತ್, ಖಿಲಾಫತ್‌ನೊಂದಿಗೆ ಪ್ರೇಮ ಮತ್ತು ಉತ್ತಮ ಗುಣಗಳು** ಎಂದಾಗಿದೆ.

ಇದೀಗ ಪಠಿಸಿದ ಪವಿತ್ರ ವಚನದ ಅನುವಾದ ಹೀಗಿದೆ: ನಮ್ಮ ಪ್ರಭೂ, ನಮ್ಮ ಬಾಳಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾಂದಕರವಾಗಿ ಮಾಡು ಹಾಗೂ ನಮ್ಮನ್ನು ಸಜ್ಜನರಿಗೆ ನಾಯಕನನ್ನಾಗಿ ಮಾಡು.

ಪ್ರೀತಿಯ ಸಹೋದರಿಯರೇ! ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞರಾದರೂ ಕಡಿಮೆ. ಏಕೆಂದರೆ ಅವನು ನಮಗೆ ಕಾಲದ ಇಮಾರನ್ನು ಗುರುತಿಸುವ ಹಾಗೂ ಅವರ ಮೇಲೆ ವಿಶ್ವಸ ಹೊಂದುವ ಭಾಗ್ಯ ದಯಪಾಲಿಸಿದ್ದಾನೆ. ಇಂದಿನಿಂದ ಒಂದು ಶತಮಾನದ ಹಿಂದೆ ನಾಲ್ಕೂ ಸುತ್ತುಗಳಲ್ಲಿ ಅಂಧಕಾರ ವಿರಾಜಿಸುತ್ತಿತ್ತು. ಮತ್ತು ಇಸ್ಲಾಮಿನ ಹಡಗು ನೀರಿನ ಸುಳಿಯಲ್ಲಿ ಸಿಲುಕಿ ತೇಲಾಡುತ್ತಿತ್ತು. ಅಂಥ ಸಮಯದಲ್ಲಿ ಅಲ್ಲಾಹನು ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರನ್ನು ಲೋಕಕ್ಕೆ ಕಳುಹಿಸಿದನು. ಅವರು ಅಲ್ಲಾಹನ ಸಹಾಯದಿಂದ ವಿರೋಧಿಗಳ ಘೋರ ವಿರೋಧ'ವನ್ನು ಎದುರಿಸುತ್ತಾ ಇಸ್ಲಾಮಿನ ಹಡಗುಗಳನ್ನು ಮುಳುಗುವುದರಿಂದ ರಕ್ಷಿಸಿದರು. ಮತ್ತು ಅಲ್ಲಾಹನ ಧರ್ಮಕ್ಕೋಸ್ಕರ ತನ್ನ ಸಂಪತ್ತು, ಗೌರವ ಮತ್ತು ಮಕ್ಕಳನ್ನು ತ್ಯಾಗ ಮಾಡುವಿಕೆಯ, ಒಂದು ಎಂತಹ ಜಮಾಅತನ್ನು ಸ್ಥಾಪಿಸಿದರೆಂದರೆ, ಇಂದು ಶತ್ರುಗಳು ಸಹ ಸಮರ್ಥನೆ ನೀಡುತ್ತಾರೆ. ಇಂದಿನ ಕಾಲದಲ್ಲಿ ಇಸ್ಲಾಮಿನ ಸೇವೆ ಮಾಡುವ ಅದಕ್ಕಾಗಿ ಪಣತೊಟ್ಟಿರುವ ಜಮಾಅತ್ ಒಂದು ಇದೆ ಎಂದಾದರೆ ಅದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ.

ಪ್ರೀತಿಯ ಸಹೋದರಿಯರೇ, ಈ ಜಮಾಅತಿಗೆ ಸೇರುವ ಭಾಗ್ಯ ನಮಗೆ ಒದಗಿ ಬಂದಿದೆಯಾದರೆ ಅದು ನಮ್ಮ ಮೇಲೆ ಕೆಲವು ಜವಾಬ್ದಾರಿಗಳನ್ನು ಬಯಸುತ್ತದೆ. ಆ ಕಡೆ ನಾನು ನಮ್ಮ ಸಹೋದರಿಯರ ಗಮನವನ್ನು ಸೆಳೆಯಬಯಸುತ್ತೇನೆ.

ಇದೊಂದು ಉತ್ತಮವಾಗಿದೆ ಮತ್ತು ಪ್ರಪಂಚದ ಇತಿಹಾಸ ಸಾಕ್ಷಿಯಾಗಿದೆ. ಯಾವುದೇ ಒಂದು ಸಮುದಾಯ ಅಭಿವೃದ್ಧಿಗೊಂಡಿದೆ ಎಂದಾದರೆ ಅದರ ಹಿಂದೆ ಮಹಿಳೆಯರ ಬುದ್ಧಿವಂತಿಕೆ, ಶೌರ್ಯ ಹಾಗೂ ಉತ್ತಮ ಚಾರಿತ್ರ್ಯವಿದೆ. ಅಂತೆಯೇ ಯಾವುದೇ ಒಂದು ಸಮುದಾಯದ ಅಧಃಪತನದ ಕಾರಣಗಳನ್ನು ಹುಡುಕಲು ಹೋದರೆ ಅದರಲ್ಲಿಯೂ ಮಹಿಳೆಯರ ಕೈವಾಡ ದೃಷ್ಟಿಗೆ ಬೀಳುತ್ತದೆ. ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ಅ) ಅದೇ ವಾಸ್ತವವನ್ನು ಅರಿತು ಜಮಾಅತಿನ ಮಹಿಳೆಯರ ತರಬೇತಿ ಕುರಿತು ಬಹಳ ಕಾಳಜಿ ಹೊಂದಿದ್ದರು. ಅದಕ್ಕಾಗಿ ಅವರ ಧಾರ್ಮಿಕ ಮತ್ತು ಶೈಕ್ಷಣಿಕ ಪ್ರಗತಿಗೋಸ್ಕರ **"ಲಜ್ನ ಇಮಾವುಲ್ಲಾಹ್"** ಎಂಬ ಉಪ ಸಂಘಟನೆ ಸ್ಥಾಪಿಸಿದರು. ಅವರ ದೂರದೃಷ್ಟಿ ಊಹಿಸುತ್ತಿತ್ತು. ಜಮಾಅತಿನ ಮಹಿಳೆಯರ ಸುಧಾರಣೆಯಾಗದಿದ್ದರೆ ಜಮಾಅತ್ ಅಭಿವೃದ್ಧಿಗೊಳ್ಳುವುದಿಲ್ಲ ಎಂದು.

ಅವರು ಹೇಳುತ್ತಾರೆ. ಮಕ್ಕಳ ತರಬೇತಿ ಮಹಿಳೆಯರ ಪ್ರಥಮ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯು ಜಿಹಾದ್ ಗಿಂತ ಕಡಿಮೆಯೇನಲ್ಲ. ಮಕ್ಕಳ ತರಬೇತಿ ಒಳ್ಳೆಯದಾದರೆ ಸಮುದಾಯದ ಬುನಾದಿ ದೃಢವಾಗುತ್ತದೆ ಮತ್ತು ಅದು ಅಭಿವೃದ್ಧಿ ಹೊಂದುತ್ತದೆ. ಮಕ್ಕಳ ತರಬೇತಿ ಆಗಲಿಲ್ಲ ಎಂದಾದರೆ ಒಂದಿಲ್ಲ ಒಂದು ದಿನ ಅದು ನಾಶಗೊಳ್ಳುತ್ತದೆ. ಹೀಗೆ ಯಾವುದೇ ಸಮುದಾಯದ ಏಳಿಗೆ ಅಥವಾ ಅದರ ಅಧಃಪತನ ಆ ಸಮುದಾಯದ ಮಹಿಳೆಯರ ಮೇಲೆ ಅವಲಂಬಿತವಾಗಿರುತ್ತದೆ. ಇಂದಿನ ಮಾತೆಯರು ತನ್ನ ಮಕ್ಕಳ ತರಬೇತಿ ಸಹಾಬಿ ಮಹಿಳೆಯರ ರೀತಿಯಲ್ಲಿ ಮಾಡುತ್ತಿದ್ದರೆ, ಅದರಂತೆಯೇ ತ್ಯಾಗಮಯಿಗಳಾಗುತ್ತಿರಲಿಲ್ಲವೇ. ಇಂದು ಸಹ ಜಮಾಅತಿನಲ್ಲಿ ಕೆಡುಕು ಬರುವ ಸಾಧ್ಯತೆಯಿದ್ದರೆ, ಅದಕ್ಕೆ ಮಹಿಳೆಯರೇ ಜವಾಬ್ದಾರರಾಗುವರು. (ಅಲ್ ಅಝುಹಾರ್-ಪುಟ-327).

ಮಕ್ಕಳ ತರಬೇತಿಯಲ್ಲಿ ಮುಖ್ಯ ಪಾತ್ರ ವಹಿಸುವುದೆಂದರೆ ತಂದೆ ತಾಯಿಯರ ದುಆಗಳಾಗಿವೆ. ಅಲ್ಲಾಹನು ಮಕ್ಕಳು ಜನ್ಮ ತಾಳುವುದರಿಂದ ಹಿಡಿದು ಜೀವ ಇರುವ ತನಕ ದುಆ ಮಾಡುತ್ತಿರಲಿ ಎಂದು ಆಜ್ಞಾಪಿಸಿದ್ದಾರೆ.

ಜನ್ಮ ತಾಳುವ ಮೊದಲೇ ಸಜ್ಜನ ಸಂತಾನಕ್ಕಾಗಿ ಈ ದುಆ ಕಲಿಸಿಕೊಟ್ಟನು. **"ರಬ್ಬಿ ಹಬ್‌ಲಿ ಮಿನ್ ಲದುನ್‌ಕ ಝುರ್ರಿಯತನ್ ತಯ್ಯಿಬತನ್ ಇನ್ನಕ ಸಮೀಉದ್ದುಆ"** (ಆಲಿ ಇಮ್ರಾನ್-39) "ನನ್ನ ಪ್ರಭೂ, ನೀನು ನನಗೆ ನಿನ್ನ ಕಡೆಯಿಂದ ಪರಿಶುದ್ಧರಾದ ಸಂತಾನಗಳನ್ನು ಪ್ರಧಾನ ಮಾಡು ನಿಶ್ಚಯವಾಗಿಯೂ ನೀನು ಪ್ರಾರ್ಥನೆಯನ್ನು ಆಲಿಸುವವನಷ್ಟೇ.

ಮತ್ತು ನಂತರ ಸಂತಾನವು ಸಜ್ಜನನಾಗಲು ಹಾಗೂ ನಯನಾನಂದಕರಾಗಲು ದುಆ ಕಲಿಸಿದನು. **ರಬ್ಬನಾ ಹಬ್‌ಲನಾ ಮಿನ್ ಅಝ್ವಾಜಿನಾ ವ ಝುರ್ರಿಯಾತಿನಾ ಖುರ್ರತ ಅಲ್‌ಯುನಿವ್ವಜ್ ಅಲ್‌ನಾ ಲಿಲ್ ಮುತ್ತಖೀನ ಇಮಾಮಾ** (ಅಲ್-ಫುರ್ಖಾನ್-75) ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ, ನಮ್ಮ ಮಕ್ಕಳನ್ನೂ ನಮಗೆ ನಯನಾನಂದಕರಾಗಿ ಮಾಡು ಹಾಗೂ ನಮಗೆ ಸಜ್ಜನರಿಗೆ ನಾಯಕರನ್ನಾಗಿ ಮಾಡು.

ಆದುದರಿಂದ ಮಾತೆಯರ ಪ್ರಥಮ ಕರ್ತವ್ಯವಾಗಿದೆ. ಅವರು ದುಆಗಳ ಮೇಲೆ ಒತ್ತುಕೊಡುವವರಾಗಬೇಕು. ಜನ್ಮಧಾರಣೆ ಮಾಡಿದ ಮೊದಲಿನಿಂದಲೇ ದುಆ ಮಾಡುವುದು ರೂಢಿಮಾಡಿಕೊಳ್ಳಬೇಕು. ಓ ಅಲ್ಲಾಹನೇ ನೀನು ದಯಪಾಲಿಸಿದ ಸಂತಾನದ ಉತ್ತಮ ತರಬೇತಿ, ಸರಿಯಾದ ತರಬೇತಿ ನೀಡುವ ಸೌಭಾಗ್ಯ ನಮಗೆ ದಯಪಾಲಿಸು. ನಾವು ಅವರಿಗೆ ಉತ್ತಮ ತರಬೇತಿ ನೀಡುವ ಸೌಭಾಗ್ಯ ನಮಗೆ ದಯಪಾಲಿಸು. ನಾವು ಅವರಿಗೆ ಉತ್ತಮ ತರಬೇತಿ ನೀಡುವವರಾಗಬೇಕು. ನಿನ್ನ ಧರ್ಮನಿಷ್ಠರಾಗಬೇಕು. ಈ ಸಂತಾನವು ನಮಗೆ ನಯನಂದಕರಾಗಬೇಕು ಮತ್ತು ನಿನ್ನ ಸಂಪ್ರೀತಿ ಗಳಿಸುವವನಾಗಬೇಕು. ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರು ಸಹ ಮಕ್ಕಳ ತರಬೇತಿಗೋಸ್ಕರ ಹೆಚ್ಚು ದುಆ ಮಾಡಲು ಪ್ರೇರಣೆ ನೀಡಿದ್ದಾರೆ. ಅವರು ಮಕ್ಕಳಿಗೆ ಶಾರೀರಿಕ ಶಿಕ್ಷೆ ಕೊಡುವುದರಿಂದ ಮತ್ತು ಹೆಚ್ಚು ಕೋಪಪಡುವುದನ್ನು ಮೆಚ್ಚುಗೆ ವ್ಯಕ್ತಪಡಿಸಲಿಲ್ಲ. ಹೆಚ್ಚಾಗಿ ದುಆ ಮಾಡುತ್ತಿರಲು ಒತ್ತಾಯಿಸುತ್ತಿದ್ದರು. ಅವರ ಉತ್ತಮ ಜೀವನ ಶೈಲಿ ನಮ್ಮ ಮುಂದಿದೆ. ಅವರು ತಮ್ಮ ಸಂತಾನಕ್ಕಾಗಿ ದುಆ ಮಾಡುತ್ತಿದ್ದರು. ಅವರು ತಮ್ಮ ಕವನ ಸಂಗ್ರಹದಲ್ಲಿ ಹೀಗೆ ನುಡಿಯುತ್ತಾರೆ.

ಕರ್ ಇನ್‌ಕೋ ನೇಕ್ ಖಿಸ್ಮತ್ ದೇ ಇನ್‌ಕೋ ದೀನ್ ದೌಲತ್
ಕರ್ ಇನ್‌ಕೀ ಖುಡ್ ಹಿಫಾಝುತ್ ಹೋ ಇನ್‌ಪರ್ ತೇರಿ ರಹಮತ್
ದೇ ರುಶ್ದ್ ಔರ್ ಹಿದ್ಮಾಯತ್ ಔರ್ ಉಮ್ರ್ ಔರ್ ಇಝ್ಝತ್
ಏ ರೋಝುಕರ್ ಮುಬಾರಕ್ ಸುಬ್‌ಹಾನ ಮ್ಯಂಯರಾನಿ
ಶೈತಾನ್‌ಸೇ ದೂರ ರಖಿಯೋ ಅಪ್ನೇ ಹುಝೂರ್ ರಖಿಯೋ
ಜಾನ್ ಪುರ್ಝೂ ನೂರ್ ರಖಿಯೋ ದಿಲ್ ಪುರ್ ಸುರೂರ್ ರಖಿಯೋ
ಇನ್‌ಪರ್ ಮೈ ತೇರೇ ಖುರಬಾನ್ ರಹಮತ್ ಝುರೂರ್ ರಖಿಯೋ
ಏ ರೋಝ್‌ಕರ್ ಮುಬಾರಕ್ ಸುಬ್‌ಹಾನ ಮ್ಯೆಂಯರಾನಿ.

(ಅವರನ್ನು ಸೌಭಾಗ್ಯಶಾಲಿಗಳನ್ನಾಗಿ ಮಾಡು, ಅವರಿಗೆ ಧರ್ಮ ಸಂಪತ್ತನ್ನೂ ನೀಡು. ಅವರನ್ನು ಸ್ವಯಂ ರಕ್ಷಣೆ ಮಾಡು, ಅವರ ಮೇಲೆ

ನಿನ್ನ ಕರುಣೆ ಇರಲಿ. ಅವರಿಗೆ ಸನ್ಮಾರ್ಗ, ಮಾರ್ಗದರ್ಶನ ದೀರ್ಘಾಯಶಸ್ಸುಸು ಮತ್ತು ಗೌರವ ನೀಡು,

ಈ ದಿನವು ಶುಭವಾಗಲಿ, ಓ ನನ್ನ ಪ್ರಭೂ ಈ ದಿನವು ನಮಗೆ ತೋರಿಸು.

ಅದುದರಿಂದ ದೂರ ಇರಿಸು, ತನ್ನ ಮುಂದೆ ಇರಿಸು.

ಪ್ರಕಾಶಮಯ ಜೀವಿಯಾಗಿರಿಸು, ಹೃದಯ ಸಂತೋಷದಿಂದ ತುಂಬಿಸಿತು.

ಅವರಿಗಾಗಿ ನಿನ್ನ ಸಮರ್ಪಣೆ, ಅವಶ್ಯವಾಗಿ ನಿನ್ನ ದಯ ಅವರ ಮೇಲಿರಿಸು

ಈ ದಿನವು ಶುಭವಾಗಲಿ, ಓ ನನ್ನ ಪ್ರಭೂ ಈ ದಿನವು ನಮಗೆ ತೋರಿಸು.

ದುಆಗಳ ಜೊತೆಗೆ ಮಕ್ಕಳೊಂದಿಗೆ ಒಳ್ಳೆಯ ಮಾತುಗಳು ಮತ್ತು ಉಪದೇಶಗಳನ್ನು ನೀಡುತ್ತಿರಬೇಕು ಮತ್ತು ಅದರ ಜೊತೆಯಲ್ಲಿ ತನ್ನ ಒಳ್ಳೆಯ ನಡತೆ ಮಾದರಿಯನ್ನು ತೋರಿಸುವುದು ಅವಶ್ಯವಾಗಿದೆ.

**ಅಕ್ರಿಮು ಅವ್‌ಲಾದುಕುಮ್**

ಹಝ್ರತ್ ಪೈಗಂಬರ್(ಸ) ನುಡಿದರು. **"ಅಕ್ರಿಮು ಅವ್‌ಲಾದಕುಂ"** (ಮಕ್ಕಳನ್ನು ಆದರಿಸಿ) ಇದರಲ್ಲಿಯೂ ಅದೇ ತತ್ವ ಒಳಗೊಂಡಿದೆ. ತನ್ನ ಮಕ್ಕಳನ್ನು ಆದರಿಸಬೇಕು. ಅದರಿಂದ ಅವರಲ್ಲಿ ಆತ್ಮ ಸಮ್ಮಾನ ಬೆಳೆಯುತ್ತದೆ. ನಾವು ಅವರನ್ನು ಆದರಿಸುತ್ತ ಪ್ರೀತಿಯನ್ನು ನೀಡಿದರೆ ಅವರಿಗೆ ಒಳ್ಳೆಯ ಮಾತುಗಳಿಗೆ ಪ್ರೇರಣೆ ನೀಡಿದರೆ, ಅವರು ಸಹ ನಮ್ಮನ್ನು ತಮ್ಮ ಹಿತಾಕಾಂಕ್ಷಿಗಳೆಂದು ಭಾವಿಸುವರು ಮತ್ತು ತಂದೆ ತಾಯಿಯವರನ್ನು ಅನುಸರಿಸುವರು.

ಹಝ್ರತ್ ಉಮ್ಮುಲ್ ಮುಮಿನೀನ್(ರ) ಅವರು ಯಾವ ರೀತಿ ತಮ್ಮ ಮಕ್ಕಳಿಗೆ ತರಬೇತಿ ನೀಡಿದರು. ಆ ಬಗ್ಗೆ ಹಝುರತ್ ನವಾಬ್ ಮುಬಾರಕಾ ಬೇಗಂ ಸಾಹಿಬ(ರ) ನುಡಿಯುತ್ತಾರೆ. ಮಕ್ಕಳ ಮೇಲೆ ಯಾವಾಗಲೂ ಪೂರ್ಣ ಭರವಸೆಯನ್ನಿಡಬೇಕು. ದೃಢ ಭರವಸೆಯನ್ನು ಹೊಂದಿ ಅವರ ತಂದೆ ತಾಯಿಯರ ಭರವಸೆಯನ್ನು ಕಾಪಾಡಲು ಉಪದೇಶ ನೀಡಬೇಕು. ಇದು ತರಬೇತಿಯ ಮಹತ್ವವಾದ ತತ್ವವಾಗಿದೆ ಎಂದು ಅವರನ್ನು ಸಂಶಯ ದೃಷ್ಟಿಯಿಂದ ನೋಡಬೇಕು. ಸುಳ್ಳಿನಿಂದ ದ್ವೇಷ, ಹೆಮ್ಮೆ ಮತ್ತು ಗೌರವ ಅವರ ಮೊದಲ ಪಾಠವಾಗಿರುತ್ತಿತ್ತು. ನಮಗೆ ಕೂಡ ಅವರು ಯಾವಾಗಲೂ ಅದೇ ಉಪದೇಶ ನೀಡುತ್ತಿದ್ದರು, ಮಕ್ಕಳು ಹಿರಿಯರ ಮಾತುಗಳನ್ನು ಒಪ್ಪಿಕೊಳ್ಳುವಂತಹ ಗುಣ ಬೆಳೆಸಬೇಕು, ಆಗ ಬಾಲ್ಯದ ತುಂಟತನ ಬಂದರೂ ಭಯವಿರುವುದಿಲ್ಲ. ನಾವು ತಡೆಯುವಾಗಲೆಲ್ಲ ತಡೆಯುವನು, ಹೀಗೆ ಸುಧಾರಣೆ ಸುಲಭವಾಗುವುದು. ಒಮ್ಮೆ ನೀವು ಹೇಳುವ, ಕೇಳುವ ಗುಣ ಬೆಳೆಸಿದರೆ, ಸದಾ ಅವರಲ್ಲಿ ಸುಧಾರಣೆಯ ಭರವಸೆ ಇರುತ್ತದೆ. ಅದೇ ಅವರು ನಮಗೆ ಕಲಿಸಿದ್ದರು. ಎಂದೂ ಸಹ ನಾವು ಊಹಿಸಲು ಸಾಧ್ಯವಿರಲಿಲ್ಲ. ನಾವು ಇಲ್ಲದಿರುವಾಗ ಸಹ ನಮ್ಮ ಮಕ್ಕಳು ನಮ್ಮ ಮಾತುಗಳಿಗೆ ವಿರುದ್ಧ ನಡೆಯುವರು ಎಂದು."

ಹಝ್ರತ್ ಉಮ್ಮಲ್ ಮೂಮಿನೀನ್(ರ) ಹೇಳುತ್ತಿದ್ದರು. ನನ್ನ ಮಕ್ಕಳು ಸುಳ್ಳು ಹೇಳುವುದಿಲ್ಲ. ಈ ಭರವಸೆಯೇ ಅವರಿಗೆ ಸುಳ್ಳಿನಿಂದ ರಕ್ಷಿಸುತಿತ್ತು.

ಸಯ್ಯದನಾ ಹಝುರತ್ ಮುಸ್ಲಿಹ್ ಮೌಊದ್(ರ) ರಿಗೆ ಜಮಾಅತಿನ ಮಹಿಳೆಯರ ಮತ್ತು ಮಕ್ಕಳ ತರಬೇತಿಯ ಬಗ್ಗೆ ಎಷ್ಟರಮಟ್ಟಿಗೆ ಚಿಂತೆಯಿರುತ್ತೆಂದರೆ, ಅವರು ಅಸಂಖ್ಯಾತ ಭಾಷಣಗಳು ಈ ವಿಷಯ ಕುರಿತೇ ನೀಡಿದ್ದಾರೆ. ಅವು ನಮಗೆ ದಾರಿದೀಪವಾಗಿವೆ. ಅದನ್ನು ಪದೇ ಪದೇ ಓದುತ್ತಿರಬೇಕು ಮತ್ತು ಅದರಂತೆ ನಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಅವರು ಹೇಳುತ್ತಾರೆ. ಸಮುದಾಯಗಳಿಗೆ ಸ್ವರ್ಗ ಮಾತೆಯರಿಂದಲೇ ದೊರೆಯುತ್ತದೆ. ರಸೂಲುಲಾಹ್(ಸ) ಹೇಳಿದರು. ರಸೂಲುಲ್ಲಾಹ್(ಸ) ಹೇಳಿದರು. ಮಾತೆಯರ ಪಾದದಡಿಯಲ್ಲಿ ಸ್ವರ್ಗವಿದೆ ಎಂದು. ಇದು ಎಂಥ ಅರ್ಥಗರ್ಭಿತ ಹಾಗೂ ಸೂಕ್ಷ್ಮತಿ ಸೂಕ್ಷ್ಮವಾಗಿದೆ. ಎಂದರೆ ಹಝ್ರತ್ ಪೈಗಂಬರ್(ಸ) ತಾಯಿಯ ಮಹತ್ವವ ಎಷ್ಟಿದೆ ಎಂದು ಆ ಮೂಲಕ ವಿವರಿಸಿದ್ದಾರೆ. ಸಾಧಾರಣವಾಗಿ ಜನರು ಇದರ ಅರ್ಥ ಹೀಗೆ ಭಾವಿಸುತ್ತಾರೆ. ತಾಯಿಯ ಅನುಪಾಲನೆ ಮತ್ತು ಅನುಸರಣೆಯಿಂದ ಸ್ವರ್ಗ ಸಿಗುತ್ತದೆ ಎಂದು. ಇದು ಸಹ ಸರಿಯಾಗಿದೆ. ಆದರೆ ಅದರ ನಿಜವಾದ ಅರ್ಥ ಉತ್ತಮ ಮಾತೆಯರಿಂದಲೇ ಸಮುದಾಯಗಳು ಸ್ವರ್ಗಕ್ಕೆ ಅರ್ಹರಾಗುತ್ತಾರೆ. ಮಾತೆಯರು ಸರಿಯಾಗಿ ಇರದಿದ್ದರೆ, ಸಂತಾನ ಎಂದೂ ಸರಿಯಾಗುವುದಿಲ್ಲ, ಮತ್ತು ಯಾವ ಸಮುದಾಯದ ಸಂತಾನ ಸರಿಯಾಗಿರುವುದಿಲ್ಲ, ಆ ಸಮುದಾಯದಲ್ಲಿ ಸ್ವರ್ಗವು ಲಭಿಸುವುದಿಲ್ಲ.

ಹುಝೂರೆ ಅನ್ವರ್[ಅತಬಿಅ] ಹೇಳುತ್ತಾರೆ. ಆದುದರಿಂದ ಯಾವಾಗಲೂ ಮಕ್ಕಳ ತರಬೇತಿಯ ಚಿಂತೆ ಮಾಡಬೇಕು ಮತ್ತು ಅವರಿಗೆ ಮಾರ್ಗದರ್ಶನ ಮಾಡಬೇಕು. ಮಹಿಳೆಯರು ತಮ್ಮ ಮನೆಯಲ್ಲಿ ಹೆಚ್ಚು ಸಮಯ ಕಳೆಯಬೇಕು. ಈ ವಿವಶತೆಯ ಹೊರತಾಗಿ, ಮಕ್ಕಳ ತರಬೇತಿಯ ವಯಸ್ಸಿನವರಿಗೆ ನೌಕರಿ ಮಾಡುವ ಅವಶ್ಯಕತೆ ಇಲ್ಲ. ಮಾಡಲೇಬೇಕಾಗಿದೆ ಎಂದರೆ ಅದರ ನಂತರ ಮಾಡಬಹುದು. ಕೆಲ ಮಾತೆಯರು ಮಕ್ಕಳಿಗೋಸ್ಕರ ತ್ಯಾಗವನ್ನು ಮಾಡುತ್ತಾರೆ. ಅವರು ಡಾಕ್ಟರುಗಳು, ಒಳ್ಳೆಯ ವಿದ್ಯಾವಂತವರಾಗಿದ್ದರೂ ಮಕ್ಕಳಿಗೋಸ್ಕರ ಮನೆಯಲ್ಲಿ ಇರುತ್ತಾರೆ. ಮಕ್ಕಳಿಗೆ ತಾಯಿಯ ಅವಶ್ಯಕತೆ ಇಲ್ಲ ಎಂಬ ಅವಸ್ಥೆಯಲ್ಲಿ ಕಾರ್ಯಕ್ಕೆ ಮರಳುತ್ತಾರೆ. ಅಂತೂ ಅದಕ್ಕಾಗಿ ಮಹಿಳೆಯರಿಗೆ ತ್ಯಾಗ ಮಾಡಬೇಕಾಗುತ್ತದೆ. ಅಲ್ಲಾಹನು ಮಹಿಳೆಗೆ ಈ ಗೌರವ ನೀಡಿದ್ದು, ಮಾತೆಯರ ಪಾದದಡಿಯಲ್ಲಿ ಸ್ವರ್ಗವಿದೆ ಎಂದು, ಅದು ಈ ತ್ಯಾಗದಿಂದಲೇ ಆಗಿದೆ. ಮಹಿಳೆಯರಲ್ಲಿ ತ್ಯಾಗಭಾವನೆ ಅಧಿಕವಿರುತ್ತದೆ. ಯಾವ ಮಹಿಳೆಯರು ತನ್ನ ಆಕಾಂಕ್ಷೆಗಳನ್ನು ತ್ಯಾಗ ಮಾಡುತ್ತಾರೋ ಅವರ ಪಾದದಡಿಯಲ್ಲಿ ಸ್ವರ್ಗವಿರುತ್ತದೆ.
(ಅಲ್‌ಫಝುಲ್, ಇಂಟರ್‌ನ್ಯಾಶನಲ್, 15 ಮೇ 2015)

ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್[ಅತಬಿಅ] 2004 ರಲ್ಲಿ ನಡೆದಿರುವ ಜಲ್ಸ ಸಾಲಾನ ಸಂದರ್ಭದಲ್ಲಿ ತನ್ನ ಭಾಷಣದಲ್ಲಿ ಅಹ್ಮದಿ ಮಹಿಳೆಯರನ್ನು ಸಂಬೋಧಿಸಿ ಹೇಳಿದರು.

ಮಹಿಳೆಯರು ನೆನಪಿಟ್ಟುಕೊಳ್ಳಿರಿ. ಇಸ್ಲಾಮಿ ಸಮಾಜದಲ್ಲಿ ಅವರಿಗೆ ಮಹೋನ್ನತವಾದ ಸ್ಥಾನವಿದೆ. ಅವರು ಈ ಮಹೋನ್ನತವಾದ ಸ್ಥಾನವನ್ನು ಗುರುತಿಸದೇ ಹೋದರೆ, ಅವರ ಮಕ್ಕಳು ಮುಂದೆ ವಿಶ್ವಾಸದ ಮೇಲೆ ಇರುವರು ಎಂಬುದಕ್ಕೆ ಯಾವ ಭರವಸೆಯೂ ಇರುವುದಿಲ್ಲ. ಅವರು ತಮ್ಮ ಪತಿಯಂದಿರು ಮತ್ತು ಮುಂದಿನ ಪೀಳಿಗೆಯರಿಗೆ, ಅವಿಧೇಯರು ಹಾಗೂ ಅವರು ಹಕ್ಕುಗಳನ್ನು ದಮನಿಸುವರು ಎಂದು ಭಾವಿಸಲಾಗುವುದು. ಎಲ್ಲದಿಕ್ಕಿಂತ ಮಿಗಿಲಾಗಿ ತನ್ನ ಸೃಷ್ಟಿಕರ್ತನನೊಂದಿಗೆ ಅವಿಧೇಯತೆ ತೋರುವವರಾಗುವರು. ಆದುದರಿಂದ ಇದು ಅತಿ ಮುಖ್ಯವಾದ ವಿಷಯವಾಗಿದೆ. ಪ್ರತಿಯೊಬ್ಬ ಅಹ್ಮದಿ ಮಹಿಳೆಯು ತನ್ನ ಸುಧಾರಣೆಯತ್ತ ಗಮನವಹಿಸಬೇಕಾಗುವುದು ಮತ್ತು ಯಾವಾಗಲೂ ಈ ದುಆ ಮಾಡುತ್ತಿರಬೇಕು. ಅಲ್ಲಾಹನು ತನ್ನ ಮಾರ್ಗದರ್ಶನ ಮಾಡುತ್ತಿರಲಿ ಮತ್ತು ತನ್ನ ಮುಂದಿನ ಪೀಳಿಗೆಯನ್ನು ಇಸ್ಲಾಮಿನ ಬೋಧನೆಗಳನ್ವಯ ಬೆಳೆಸುವ ಭಾಗ್ಯ ದಯಪಾಲಿಸಲಿ.

ಮಕ್ಕಳ ತರಬೇತಿಯ ಬಗ್ಗೆ ಓರ್ವ ತಾಯಿಯ ಜವಾಬ್ದಾರಿಗಳೇನಿವೆ. ಅದರ ಕೆಲ ಹಂತಗಳು ನನ್ನ ಭಾಷಣದ ಭಾಗವಾಗಿವೆ. ಅವು ಪ್ರಸ್ತುತಪಡಿಸುತ್ತೇನೆ.

**ಅಲ್ಲಾಹನೊಂದಿಗೆ ಪ್ರೀತಿ**

ಮಕ್ಕಳ ತರಬೇತಿ ವಿಷಯವಾಗಿ ಎಲ್ಲದ್ದಕ್ಕಿಂತ ಮೊದಲು ಅಲ್ಲಾಹನ ಪ್ರೀತಿ ಮತ್ತು ಅವನೊಂದಿಗೆ ಸಂಪೂರ್ಣ ಸಂಪರ್ಕ ಸ್ಥಾಪಿಸುವುದಾಗಿದೆ.

ಆದುದರಿಂದ ಓರ್ವ ತಾಯಿಯಾದವಳಿಗೆ ಅವಶ್ಯಕವಾದುದು ತನ್ನ ಜನ್ಮದ ಉದ್ದೇಶವನ್ನು ಅರಿತುಕೊಳ್ಳುತ್ತ ಅಲ್ಲಾಹನ ಮುಂದೆ ಶಿರಬಾಗಿಸುವವಳಾಗಬೇಕು ಮತ್ತು ತನ್ನ ಮಕ್ಕಳಿಗೆ ಯಾವ ರೀತಿ ತರಬೇತಿ ನೀಡುವವಳಾಗಬೇಕು ಎಂದರೆ, ಮಕ್ಕಳ ಹೃದಯದಲ್ಲಿ ಪ್ರಾರಂಭದಿಂದಲೇ ಅವನ ಪ್ರೀತಿ ಬೆಳೆಸುವಂತಾಗಬೇಕು. ಹಝ್ರತ್ ಪೈಗಂಬರ್(ಸ) ಹೇಳಿದರು. ಮಕ್ಕಳಿಗೆ ಮೊತ್ತಮೊದಲ ಪಾಠ ಮಗುವಿನ ಕಿವಿಯಲ್ಲಿ ಅಲ್ಲಾಹನ ಗೌರವ ಮತ್ತು ಪ್ರೀತಿಯಾಗಿದೆ. ನವಜಾತ ಶಿಶುವಿನ ತರಬೇತಿ ಎಷ್ಟೊಂದು ಮಹತ್ವದ್ದಾಗಿದೆ ಎಂದರೆ ಮೊತ್ತಮೊದಲು ಅವನ ಕಿವಿಯಲ್ಲಿ ಆಝಾನ್ ಕೊಡುವ ಆಜ್ಞೆ ಇದೆ.

ಹೇಗೆ ಹೇಗೆ ಮಕ್ಕಳು ಬೆಳೆಯುತ್ತಾ ಹೋಗುವರೋ ಮಾತೆಯರ ಕರ್ತವ್ಯವಾಗಿದೆ, ಸಂದರ್ಭೋಚಿತವಾಗಿ ಮಕ್ಕಳಿಗೆ ಅಲ್ಲಾಹನ ಅನುಗ್ರಹಗಳ ಮತ್ತು ಅವನ ಕೊಡುಗೆಗಳ ಬಗ್ಗೆ ವಿವರಿಸಿ ಅವನಿಗೆ ಕೃತಜ್ಞತೆ ಸಲ್ಲಿಸುವವರನ್ನಾಗಿ ಮಾಡಬೇಕು ಮತ್ತು ಈ ಆಧಾರದ ಮೇಲೆ ಅಲ್ಲಾಹನ ಪ್ರೀತಿ ಮಕ್ಕಳ ಹೃದಯದಲ್ಲಿ ಬೆಳೆಸಬೇಕು. ಉದಾಹರಣೆಗೆ, ಊಟ ಪಾಠದ ಸಮಯ ಅವರಿಗೂ ಮನವರಿಕೆ ಮಾಡಿಕೊಡಬೇಕು. ಈ ಆಹಾರವು ಎಷ್ಟು ಶ್ರಮದ ಮೇಲೆ ಅಲ್ಲಾಹನು ನಮಗೆ ದಯಪಾಲಿಸಿದ್ದಾನೆ. ಅದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ. ಅದೇ ರೀತಿಯಲ್ಲಿ ಮಲಗುವ ಸಮಯದಲ್ಲಿ ನಕ್ಷತ್ರಗಳು, ಚಂದ್ರ ಮತ್ತು ಆಕಾಶ, ಹಗಲಿನ ಬೇರೆ ದೃಶ್ಯಗಳ ಬಗ್ಗೆ ತಿಳೀಸಿ ಅವರ ಗಮನ ಅಲ್ಲಾಹನೆಡೆಗೆ ಸೆಳೆಯಬಹುದಾಗಿದೆ.

ನಮ್ಮ ಪ್ರೀತಿಯ ಇಮಾಮರಾದ ಹಝುರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ. ಬಾಲ್ಯದಿಂದಲೇ ಅಲ್ಲಾಹನ ಪ್ರೀತಿ ಅವರ ಹೃದಯಗಳಲ್ಲಿ ಬೆಳೆಸಬೇಕು. ಹಝ್ರತ್ ಮಸೀಹ್ ಮೌಊದ್ (ಅ)

ಹೇಳಿದಂತೆ ಅವರಿಗೆ "ಅಬ್ದುಲ್ ರಹ್ಮಾನ್" (ಅಲ್ಲಾಹನ ದಾಸ) ರನ್ನಾಗಿ ಬೆಳೆಸಬೇಕು. ಸಣ್ಣ ವಯಸ್ಸಿನಲ್ಲಿ ಅಲ್ಲಾಹನ ಪ್ರೀತಿ ಅವರ ಹೃದಯಗಳಲ್ಲಿ ಬೆಳೆಸಬೇಕು. ಮಾತುಗಳು ಅರ್ಥೈಸುವಂತೆ ಬೆಳೆದಾಗ ಅವರಿಗೆ ಯಾವ ವಸ್ತುವು ನೀಡಿದರೆ, ಅವರಿಗೆ ಇದು ಅಲ್ಲಾಹನ ಕೊಡುಗೆಯಾಗಿದೆ ಎಂದು ಹೇಳಿ ನೀಡಬೇಕು. ಕೃತಜ್ಞರಾಗುವ ಅಭ್ಯಾಸ ಬೆಳೆಸಬೇಕು, ಮತ್ತು ಮೆಲ್ಲ ಮೆಲ್ಲನೇ ಏನು ಬೇಡಬೇಕಾದರೂ ಅಲ್ಲಾಹನಿಂದ ಬೇಡಿರಿ ಎಂಬ ಅಭ್ಯಾಸ ಬೆಳೆಸಬೇಕು. (ಭಾಷಣ, ಜಲ್ಸ ಸಾಲಾನ ಯು.ಕೆ 2003)

ಓರ್ವ ಮಾತೆಯ ಇನ್ನೊಂದು ಮುಖ್ಯ ಕರ್ತವ್ಯವೆಂದರೆ ನಮಾಝ್ ನಿರ್ವಹನೆಯ ಬಗ್ಗೆ ಪ್ರೀತಿ ಮಕ್ಕಳ ಹೃದಯಗಳಲ್ಲಿ ಬೆಳೆಸುವುದಾಗಿದೆ.

ನನ್ನ ಪ್ರೀತಿಯ ಸಹೋದರಿಯರೇ! ಇದೊಂದು ವಾಸ್ತವವಾಗಿದೆ, ತರಬೇತಿ ಕರ್ಮದಿಂದ ಪ್ರಾರಂಭವಾಗುತ್ತದೆ. ಉದಾಹರಣೆಗೆ ನಾವು ಕರ್ತವ್ಯಗಳನ್ನು ಪಾಲಿಸಿದರೆ ಮತ್ತು ಮಾಡಬಾರದ್ದರಿಂದ ದೂರವಿದ್ದರೆ, ಸಹಜವಾಗಿಯೇ ನಮ್ಮ ಮಕ್ಕಳು ಸಹ ಹಾಗೆ ಮಾಡುವರು. ನಾವು ನಮಾಝ್ ನಿರ್ವಹಿಸಲು ಮಸೀದಿಗೆ ಹೋದರೆ ನಮ್ಮ ಮಕ್ಕಳು ನಮ್ಮ ಜೊತೆಗೆ ಬರುವರು. ತಾಯಿಯು ಮನೆಯಲ್ಲಿ ನಮಾಝ್ ನಿರ್ವಹಿಸಿದರೆ ಸಣ್ಣ ಮಕ್ಕಳು ಅದರ ನಕಲು ಹೊಡೆಯುತ್ತಾ ಸಾಷ್ಟಾಂಗ ಹೊಡೆಯುವವರು. ಆದರೆ ಸ್ವಯಂ ನಾವೇ ನಮಾಝ್ ದಕ್ಷತೆಯಿಂದ ನಿರ್ವಹಿಸದಿದ್ದರೆ ಮತ್ತು ಮಕ್ಕಳಿಂದ ಭರವಸೆ ಇಟ್ಟುಕೊಂಡರೆ ಹೇಗೆ ಸಾರ್ಥಕವಾಗಲು ಸಾಧ್ಯ.

ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು(ರ) ಹೇಳಿದರು. ನಮಾಝ್ ಮನುಷ್ಯ ಜೀವಿಯ ಜೀವವಾಗಿದೆ. ನಮಾಝ್ ಇಲ್ಲದೇ ಅಲ್ಲಾಹನೊಂದಿಗೆ ಯಾವ ಸಂಪರ್ಕವು ಇರುವುದಿಲ್ಲ. ಅದರ ಅಭ್ಯಾಸವಾಗುವಂತೆ ಮಾಡಲು ಸಹ ಬಾಲ್ಯದಿಂದಲೇ ತರಬೇತಿ ನೀಡುವ ಅವಶ್ಯಕತೆ ಇರುತ್ತದೆ. ಒಮ್ಮೆಲೆ ಇಂತಹ ಪ್ರವೃತ್ತಿ ಬೆಳೆಯುವುದಿಲ್ಲ. ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ನಮಗೆ ಕಲಿಸಿದ್ದು 7 ವರ್ಷದ ವಯಸ್ಸಿನಲ್ಲಿ ಅವರಿಗೆ ನಮಾಝ್ ನಿರ್ವಹಿಸುವುದು ಪ್ರಾರಂಭಿಸಬೇಕು. ಪ್ರೀತಿಯಿಂದ ಪ್ರೇರಣೆ ನೀಡಬೇಕು. ಯಾವ ಕಠಿಣತೆಯು ತೋರುವ ಅವಶ್ಯಕತೆ ಇಲ್ಲ, ಹೊಡೆಯುವ ಅವಶ್ಯಕತೆ ಇಲ್ಲ, ಅದಾದ ನಂತರ ಒಬ್ಬ ಮಗು ಹತ್ತು ವರ್ಷ ತನಕ ಪ್ರೀತಿ ಮತ್ತು ಪ್ರೇಮದಿಂದ ಕಲಿಯುವವನಾದರೆ, 12 ವರ್ಷದಲ್ಲಿ ಒಂದಿಷ್ಟು ಕಠಿಣತೆಯಿಂದ ವರ್ತಿಸಬೇಕು ಏಕೆಂದರೆ ಆ ವಯಸ್ಸು ಆಲಸ್ಯದ ವಯಸ್ಸಾಗಿರುತ್ತದೆ. ಆದ್ದರಿಂದ ಒಂದಿಷ್ಟು ಕಠಿಣತೆಯಿಂದ ವರ್ತಿಸುವುದು ಅವರ ತರಬೇತಿಗಾಗಿ ಅವಶ್ಯವಾಗಿರುತ್ತದೆ.
(ಖುತುಬ ಜುಮುಅ, 11 ಫೆಬ್ರವರಿ 2000).

ಹಝ್ರತ್ ಉಮ್ಮುಲ್ ಮುಮಿನೀನ್ ನುಸ್ರತ್ ಜಹಾಂ ಬೇಗಂ(ರ) ನಮಾಝುಗಳನ್ನು ತುಂಬಾ ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರು. ದಿನಾಲೂ ಕೇವಲ ನಮಾಝುಗಳನ್ನು ನಿರ್ವಹಿಸುವುದು ಅಷ್ಟೇ ಅಲ್ಲ, ಬದಲು ಸಮಯಪಾಲನೆಯು ಮಾಡುತ್ತಿದ್ದರು. ಮತ್ತು ಇತರರಿಗೂ ಆ ಬಗ್ಗೆ ಉಪದೇಶ ಮಾಡುತ್ತಿದ್ದರು. ಅವರು ನಮಾಝಿನ ಸಮಯವಾಗುತ್ತಿದ್ದಂತೆಯೇ ವುಝು ಮಾಡಿ ಅಝಾನ್‌ಗಾಗಿ ಕಾಯುತ್ತಿದ್ದರು. ಅಝಾನ್ ಆದ ನಂತರ ತಮ್ಮ ಆಸುಪಾಸಿನ ಮಕ್ಕಳಿಗೆ ಹೇಳುತ್ತಿದ್ದರು. ನಮಾಝ್ ನಿರ್ವಹಿಸುತ್ತಿದ್ದೇನೆ. ಮಕ್ಕಳೇ ನೀವು ಸಹ ತಯಾರಾಗಿ, ಹೀಗೆ ತಮ್ಮ ನಡತೆಯ ಮೂಲಕ ಉಪದೇಶ ನೀಡುತ್ತಿದ್ದರು. ಇದೇ ಉಪದೇಶದ ಉತ್ತಮ ಮಾರ್ಗವಾಗಿದೆ.

ತಂದೆ ತಾಯಿಯರ ಕರ್ತವ್ಯವಾಗಿದೆ. ತಮ್ಮ ಮಕ್ಕಳಿಗೆ ನಮಾಝ್‌ನ ಅನುವಾದ ಸಹ ಕಲಿಸಿಕೊಡಬೇಕು.

ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು(ರ) ಹೇಳುತ್ತಾರೆ. ಆರಾಧನೆಯ ಸಂಬಂಧ ಪ್ರೀತಿಯಿಂದಿದೆ. ಕೇವಲ ಮಾತುಗಳಿಂದ ಕಲಿಸಿದರೆ ಆಗದು. ಹೃದಯಾಂತರದಿಂದ ಆರಾಧನೆ ಮಾಡುವ ತಂದೆ ತಾಯಿಯರು ನಮಾಝಿನಿಂದ ಪ್ರೀತಿಯುಳ್ಳವರು, ಪ್ರೀತಿಯಿಂದ ಅನುವಾದ ಹೇಳಿಕೊಟ್ಟರೆ, ಮಕ್ಕಳೊಡನೆ ನೇರ ಸಂಬಂಧ ಸ್ಥಾಪಿಸಿಕೊಂಡರೆ, ಮಕ್ಕಳು ತನ್ನ ತಂದೆ ತಾಯಿಯರ ಕಣ್ಣಿನಲ್ಲಿ ಕಣ್ಣು ಹಾಕಿ ನೋಡುವವರಾಗಿರುತ್ತಾರೆ. ಅವರ ಹೃದಯ ಭಾವನೆ ಅರಿತುಕೊಳ್ಳುವವರಾಗುತ್ತಾರೆ. ಅವರ ಭಾವನೆಗಳು ಮನವರಿಕೆಯಾಗುತ್ತದೆ. ಹೀಗೆ ಕಲಿಸುವ ಈ ಪರಿ ಪರಿಣಾಮಕಾರಿಯಾಗಿರುತ್ತದೆ.

ಪ್ರತಿಯೋರ್ವ ಅಹ್ಮದಿಗೆ ನಮಾಝಿನ ವಿಷಯದಲ್ಲಿ ಶ್ರಮವಹಿಸಬೇಕಾಗುವುದು, ತಮ್ಮನ್ನೂ ಸಹ ತೊಡಗಿಸಿಕೊಳ್ಳಬೇಕಾಗುವುದು, ಆಗ ನಮಾಝ್ ನಿರ್ವಹಿಸುವ ಪೀಳಿಗೆಗಳು ನಮಗೆ ದೊರೆಯಬಹುದು. (ಖುತುಬ ಜುಮುಅ 8 ನವೆಂಬರ್ 1985).

**ಪವಿತ್ರ ಖುರ್‌ಆನ್ ಪಠಣ (ತಿಲಾಫತ್)**

ಅದೇ ರೀತಿ ತರಬೇತಿಯ ಇನ್ನೊಂದು ಮಾರ್ಗ ಪವಿತ್ರ ಖುರ್‌ಆನ್ ಪಠಣವಾಗಿದೆ. ಇದರಲ್ಲಿಯೂ ಅಭ್ಯಾಸವಿರಬೇಕಾಗಿದೆ. ದಿನಾಲೂ ಮುಂಜಾನೆಯ ಸಮಯ ಪ್ರತಿ ಅಹ್ಮದಿಯ ಮನೆಯಿಂದ ಪಠಣದ ಧ್ವನಿ ಮೂಡಬೇಕಾಗಿದೆ. ಆಲಿಸಿಕೊಡಬೇಕಾಗಿದೆ. ಅಲ್ಲಾಹನು ಕೇವಲ ಪವಿತ್ರ ಖುರ್‌ಆನ್ ಪಠಿಸುವ ಆದೇಶ ಮಾತ್ರ ನೀಡದೆ. ಬದಲು ಅದನ್ನು ಪಠಿಸುವ ಸಮಂಜಸವಾದ ಸಮಯವನ್ನು ನಿಗದಿಪಡಿಸಿದೆ. ಅಲ್ಲಾಹನು ಹೇಳಿದನು. **"ಇನ್ನ ಖುರ್‌ಆನಲ್ ಫಜ್ರ ಕಾನ ಮಶ್‌ಹೂದ"** (ಬನೀ ಈಸ್ರಾಈಲ್–79) ಪ್ರಭಾತ ಕಾಲದ ಖುರ್‌ಆನ್ ಪಾರಾಯಣವನ್ನು (ಅಲ್ಲಾಹನ ಸನ್ನಿಧಿಯಲ್ಲಿ) ವಿಶೇಷವಾಗಿ ಸ್ವೀಕರಿಸಲ್ಪಡುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು(ರ) ಹೇಳುತ್ತಾರೆ. ನಮ್ಮ ಪೀಳಿಗೆ ಸುಧಾರಿಸಬೇಕಾದರೆ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿರಬೇಕಾಗಿದೆ. ಪವಿತ್ರ ಖುರ್‌ಆನ್‌ನ ಪಾರಾಯಣ ಮಾಡುವುದು ಮತ್ತು ಅದರ ಅರ್ಥ ಮನವರಿಕೆ ಮಾಡಿಕೊಳ್ಳುವುದು, ಇದು ನಮ್ಮ ತರಬೇತಿಯ ಮೂಲ ಅವಶ್ಯಕತೆಯಾಗಿದೆ. ಮತ್ತು ತರಬೇತಿಯ ಕೀಲಿಕೈಯಾಗಿದೆ. ಪವಿತ್ರ ಖುರ್‌ಆನ್‌ನ ಪಾರಾಯಣದ ಅಭ್ಯಾಸವಿಲ್ಲದಂತಹ ಒಬ್ಬನು ಸಹ ಉಳಿಯಬಾರದು. ಅವನಿಗೆ ಹೇಳಬೇಕು. ಉಪಹಾರ ಬಿಟ್ಟು ಹೋದರೂ ಚಿಂತೆಯಿಲ್ಲ, ಶಾಲೆಗೆ ಹೋಗುವ ಮುಂಚೆ ತಿಲಾವತ್ ಅವಶ್ಯವಾಗಿ ಮಾಡಬೇಕಾಗಿದೆ. ತಿಲಾವತ್ ಮಾತ್ರವಲ್ಲ, ಅದರ ಅನುವಾದವು ಓದಬೇಕು. (ಖುತುಬ ಜುಮುಅ 7 ಜುಲೈ 1997).

ಹಝ್ರತ್ ಖಲೀಫತುಲ್ ಮಸೀಹ್(ಅತಬಿಅ) ಹೇಳುತ್ತಾರೆ. ಅದೇ ರೀತಿ ಅಹ್ಮದಿ ತಾಯಂದಿರಲ್ಲಿ ಮತ್ತು ಮಕ್ಕಳಲ್ಲಿ ನಾನು ಹೇಳಬಯಸುವೆನು, ನೀವು ನಮಾಝಿನತ್ತ ಗಮನ ನೀಡುವವರಾದರೆ, ಖುರ್‌ಆನ್ ಪಾರಾಯಣ ಮಾಡುವತ್ತ ಮತ್ತು ಅದರ ಅನುವಾದ ತಿಳಿಯಲು ಸಹ ಗಮನ ನೀಡಬೇಕಾಗಿದೆ. ಅದರಿಂದ ನಿಮಗೆ ಅಲ್ಲಾಹನ ಆದೇಶಗಳೇನು ತಿಳಿಯುವಂತಾಗುವುದು ಮತ್ತು ಅದರಿಂದ ನಿಮ್ಮ ಮಕ್ಕಳ ತರಬೇತಿಯ ಸರಿಯಾದ ಮಾರ್ಗವು ಲಭಿಸಿದಂತಾಗುವುದು. ಆದುದರಿಂದ ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದು ಮತ್ತು ಅದರ ಅನುವಾದ ತಿಳಿದುಕೊಳ್ಳುವುದು ಅಲ್ಲಾಹನ ಆದೇಶಗಳನ್ನು ತಿಳಿಯಲು ತುಂಬಾ ಅವಶ್ಯಕವಾಗಿದೆ. (ಜಲ್ಸ ಸಾಲಾನ ಮಾರಿಶಸ್ 2005, ಅಲ್ ಅಝ್‌ಹಾರ್, ಭಾಗ–1, ಸಂಪುಟ 3, ಪುಟ 354–355).

ಆದುದರಿಂದ ಮಾತೆಯರಾದ ನಮಗೆ ಸ್ವಯಂ ಪ್ರತಿನಿತ್ಯ ಖುರ್‌ಆನ್ ಪಾರಾಯಣ ಮಾಡುವುದು ಮುಖ್ಯ ಕರ್ತವ್ಯವಾಗಿದೆ. ಅದರ ಅರ್ಥ ಮತ್ತು ತಾತ್ಪರ್ಯಗಳನ್ನು ಕಲಿಯಬೇಕು. ಅದರಂತೆ ನಡೆಯಬೇಕು, ಮನದಟ್ಟು ಮಾಡಿಕೊಳ್ಳಬೇಕು, ತಮ್ಮ ಮಕ್ಕಳಿಗೂ ಈ ಅಭ್ಯಾಸ ಮಾಡಿಸಬೇಕು. ಅಲ್ಲಾಹನು ನಮಗೆ ಆ ಸೌಭಾಗ್ಯ ದಯಪಾಲಿಸಲಿ.

**ಖಿಲಾಫತ್‌ನೊಂದಿಗೆ ಪ್ರೀತಿ**

ಅದೇ ರೀತಿ ಮಕ್ಕಳ ತರಬೇತಿ ವಿಷಯದಲ್ಲಿ ಒಂದು ಪ್ರಮುಖ ಮಾರ್ಗ ಎಂದರೆ ತಮ್ಮ ಮಕ್ಕಳಲ್ಲಿ ಖಿಲಾಫತ್‌ನೊಂದಿಗೆ ಪ್ರೀತಿಯನ್ನು ಬೆಳೆಸುವುದಾಗಿದೆ. ಇಂದು ಭೂಮಿಯ ಅಡಿಯಲ್ಲಿ ಕೇವಲ ಅಹ್ಮದಿಯರು ಮಾತ್ರ ಖಿಲಾಫತ್ ವ್ಯವಸ್ಥೆಯನ್ನು ಪಡೆದು, ಅದರ ಆಶ್ರಯದಲ್ಲಿ ಸುರಕ್ಷಿತವಾಗಿದ್ದಾರೆ ಮತ್ತು ಅದರ ಅನುಗ್ರಹಗಳಿಂದ ಅನುಗ್ರಹಿತರಾಗುತ್ತಿದ್ದಾರೆ. ನಾವು ಈ ಅನುಗ್ರಹಗಳನ್ನು ಪೀಳಿಗೆಯಿಂದ ಪೀಳಿಗೆಯವರೆಗೆ ಜಾರಿಯಲ್ಲಿರಿಸಬಯಸುವಿರಾದರೆ, ನಾವು ಸಂಪೂರ್ಣವಾಗಿ ಖಲೀಫರ ಅನುಸರಣೆಯಲ್ಲಿ ಸಮರ್ಪಿತವಾಗಿರಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿರುವುದು. ನಮ್ಮ ಏಳುಬೀಳುವಿಕೆ, ನಮ್ಮ ಹೊದಿಕೆ ಹಾಸಿಗೆ ಎಲ್ಲವೂ ಕಾಲದ ಇಮಾಮರ ನುಡಿಗಳ ಮೇಲೆ ಆಶ್ರಯಿಸಿರಬೇಕಾಗುವುದು. ಇದುವೇ ಖಿಲಾಫತ್ತಿನ ಸಾನಿಧ್ಯ ಪಡೆಯುವುದು ಮತ್ತು ಅದರ ಅನುಗ್ರಹಗಳನ್ನು ಪಡೆಯುವ ಮಾರ್ಗವಾಗಿದೆ. ಅದಕ್ಕಾಗಿ ಅವಶ್ಯಕವಾಗಿ ಬೇಕಾಗಿರುವುದೇನೆಂದರೆ ನಾವು ಪ್ರಾಮಾಣಿಕವಾಗಿ ಹುಝೂರೆ ಅನ್ವರ್ (ಅಬಿಅ) ಅವರ ಖುತುಬಗಳನ್ನು ಮತ್ತು ಅದರ ಕಾರ್ಯಕ್ರಮಗಳನ್ನು ಆಲಿಸಬೇಕಾಗಿದೆ ಮತ್ತು ಪ್ರಾಮಾಣಿಕವಾಗಿ ಹುಝೂರರ ಸೇವೆಯಲ್ಲಿ ಪ್ರಾರ್ಥನೆಗಾಗಿ ಪತ್ರಗಳನ್ನು ಬರೆಯಬೇಕಾಗಿದೆ ಮತ್ತು ತಮ್ಮ ಮಕ್ಕಳಲ್ಲೂ ಈ ಅಭ್ಯಾಸ ಬೆಳೆಸಬೇಕು ಹಾಗೂ ಉಪದೇಶ ಮಾಡಬೇಕು, ಯಾವುದೇ ಪ್ರಮುಖ ನಿರ್ಣಯ ಕೈಗೊಳ್ಳುವ ಮುಂಚೆ ಹುಝೂರರ ಮಾರ್ಗದರ್ಶನ ಪಡೆಯಬೇಕು. ಅಲ್ಲದೇ ಖಲೀಫರನ್ನು ಭೇಟಿ ಮಾಡಲು ಸಹ ಅಭಿಲಾಷೆ ಹೊಂದಬೇಕು ಮತ್ತು ಆ ಸಂದರ್ಭಕ್ಕಾಗಿ ಪ್ರಯತ್ನಪಡಬೇಕು. ಮಕ್ಕಳಿಗೆ MTA ಯೊಂದಿಗೆ ಸಂಬಂಧ ಹೊಂದುವಂತೆ ಮಾಡಬೇಕು. ಸ್ವಯಂ ಕಾರ್ಯಕ್ರಮಗಳನ್ನೆಲ್ಲ ಅವರೊಂದಿಗೆ ಕುಳಿತು ನೋಡಬೇಕು. ತಾವು ಮತ್ತು ತಮ್ಮ ಮಕ್ಕಳಲ್ಲಿ ಹುಝೂರೆ ಅನ್ವರ್‌ಗೋಸ್ಕರ ವಿಶೇಷವಾಗಿ ದುಆ ಮಾಡುವ ಅಭ್ಯಾಸ ಬೆಳೆಸಬೇಕು. ಅದರಿಂದ ಹುಝೂರೆ ಅನ್ವರ್ ಅವರಿಂದ ನಿಷ್ಠೆ ಮತ್ತು ಪ್ರೀತಿಯ ಸಂಬಂಧ ದೃಢವಾಗುತ್ತದೆ. ಇನ್‌ಶಾಅಲ್ಲಾಹ್.

ಖಿಲಾಫತ್‌ನೊಂದಿಗೆ ಪ್ರೀತಿಯ ಸಂಬಂಧವಾಗಿ ಜಲ್ಸ ಸಾಲಾನ ತನ್‌ಝಾನಿಯಾ 2005ರ ಸಂದರ್ಭದಲ್ಲಿ ಒಂದು ಭಾಷಣದಲ್ಲಿ ಹುಝೂರೆ ಅನ್ವರ್(ಅಬಿಅ) ನುಡಿದರು. ಯುಗಾಂಡಾದಲ್ಲಿ ನಾವು ಇದ್ದಾಗ ಒಮ್ಮೆ ವಾಹನದಿಂದ ಹೊರಗೆ ಬಂದಾಗ ನೋಡಿದ್ದೇನೆಂದರೆ ಓರ್ವ ಮಹಿಳೆ ತನ್ನ ಮಗು ಎತ್ತಿಕೊಂಡು ಬಹುಶಃ ಅದು ಎರಡು ಎರಡೂವರೆ ವರ್ಷಗಳಿದ್ದರಬಹುದು, ಜೊತೆಗೂಡಿ ಧಾವಿಸಿ ಬರುತ್ತಿತ್ತು. ಅವಳಿಗೆ ತನ್ನ ದೃಷ್ಟಿಯಲ್ಲೂ ಒಂದು ಗುರುತು ಇತ್ತು. ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ಒಂದು ಸಂಬಂಧ ಎದ್ದು ಕಾಣುತ್ತಿತ್ತು. ನಿಷ್ಠೆಯ ಭಾವ ವ್ಯಕ್ತವಾಗುತ್ತಿತ್ತು. ಮಗುವಿನ ಗಮನ ತನ್ನ ಕಡೆ ಇರಲಿಲ್ಲ. ಸ್ವಲ್ಪ ಸ್ವಲ್ಪ ಸಮಯಕ್ಕೆ ಅವನ ಮುಖ ನನ್ನತ್ತ ತಿರುಗಿಸುತ್ತಿತ್ತು. ಹೀಗೆ ಎಷ್ಟೋ ದೂರದವರೆಗೆ ಓಡುತ್ತ ಹೋದಳು. ಎಷ್ಟು ಜನಜಂಗುಳಿಯಿತ್ತೆಂದರೆ ಅವಳನ್ನು ದೂಡಲಾಗುತ್ತಿತ್ತು. ಆದರೆ ಅದಾವುದನ್ನು ಲೆಕ್ಕಿಸುತ್ತಿರಲಿಲ್ಲ. ಅಂತಿಮವಾಗಿ ಮಗುವಿನ ದೃಷ್ಟಿ ನನ್ನ ಮೇಲೆ ಬಿದ್ದಾಗ ಮಗು ನನ್ನನ್ನು ನೋಡಿ ಮುಗುಳ್ನಕ್ಕಿತು. ಕೈಬೀಸಿತು. ಆಗ ತಾಯಿಗೆ ಸಮಾಧಾನವಾಯಿತು. ಸಮಾಧಾನಕ್ಕೆ ಕಾರಣ ಮಗುವಿನ ಮುಗುಳ್ನಗುವಿಕೆ ಮತ್ತು ಸಂತೋಷವಾಗಿತ್ತು. ಅದು ಯಾವ ರೀತಿ ಎಂದರೆ ವರ್ಷಾನುಗಟ್ಟಲೆಯಿಂದ ಸಂಬಂಧ ಹೊಂದಿದ್ದೇನು? ಎಲ್ಲಿಯವರೆಗೆ ಇಂತಹ ಮಾತೆಯರು ಜನ್ಮಪಡೆಯುವರೋ, ಅವರ ಮಡಿಲಿನಲ್ಲಿ ಬೆಳೆಯುವ ಮಕ್ಕಳು ಖಿಲಾಫತ್‌ನೊಂದಿಗೆ ಪ್ರೀತಿ ಹೊಂದಿ ಬೆಳೆಯುವರೋ ಅಲ್ಲಿತನಕ ಅಹ್ಮದಿಯಾ ಖಿಲಾಫತ್ತಿಗೆ ಯಾವ ಅಪಾಯವು ಇರದು.

**ಉತ್ತಮ ನಡತೆ**

ಮಕ್ಕಳ ತರಬೇತಿ ವಿಷಯದಲ್ಲಿ ಮಾತೆಯರ ಇದು ಸಹ ಒಂದು ಕರ್ತವ್ಯವಾಗಿರುವುದು, ಅದೇನೆಂದರೆ ತಮ್ಮ ಮಕ್ಕಳಿಗೆ ಉತ್ತಮ ಚರಿತ್ರೆ ನಡತೆಯಿಂದ ಶೃಂಗರಿಸಬೇಕು. ಸುಳ್ಳಿನಿಂದ ಸರ್ವಥ ದೂರವಿರಿಸಬೇಕು. ಅಲ್ಲದೇ ಅದರಿಂದ ದ್ವೇಷ ಹೊಂದಬೇಕು. ನಾಲಿಗೆಯಿಂದ ಮಾತ್ರ ಉಪದೇಶಿಸುವುದು ಸಲ್ಲದು, ಸ್ವಯಂ ಕೂಡ ಸತ್ಯ ಹೇಳುವ ಮಾದರಿ ಒದಗಿಸಬೇಕು. ಆಟೋಟವಾಗಿ, ತಮಾಷೆಯಾಗಿಯೂ, ಸುಳ್ಳು ಹೇಳಬಾರದು, ಮಕ್ಕಳಲ್ಲಿ ಅಭಿಮಾನ, ಸ್ವಾಭಿಮಾನ ಬೆಳೆಸಬೇಕು. ಪರಸ್ಪರ ಪ್ರೀತಿಸುವುದು ಸದ್‌ವ್ಯವಹಾರ, ಮೃದು ಹಾಗೂ ಪವಿತ್ರ ನಾಲಿಗೆಯ ಬಳಕೆ, ತಾಳ್ಮೆ ಮತ್ತು ಕೃತಜ್ಞತಾ ಭಾವ ಬೆಳೆಸಬೇಕು, ಶೌರ್ಯವಂತಿಕೆ, ಬಡವರೊಡನೆ ಅನುಕಂಪ ಮತ್ತು ಅವರ ದುಃಖಗಳನ್ನು ದೂರ ಮಾಡುವ ಅಭ್ಯಾಸ, ಹಿರಿಯರ ಆದರ, ಅನುಪಾಲನೆ ಮತ್ತು ವಿಧೇಯತೆ ಇವೆಲ್ಲ ಸದ್ಗುಣಗಳು ಬಾಲ್ಯದಲ್ಲಿಯೇ ಬೆಳೆಸಲು ಪ್ರಯತ್ನ ಮಾಡಬೇಕು. ಅದರ ಪ್ರಾರಂಭ ಮನೆಯಿಂದಲೇ ಆಗಬೇಕು. ಏಕೆಂದರೆ ಹೆಚ್ಚಾಗಿ ಅಭ್ಯಾಸ ಕೆಡುವುದು ಅವರ ಹೆತ್ತವರಿಂದಲೇ ಆಗುತ್ತದೆ. ದುರ್ನಡತೆ ಒಂದು ಬಹುದೊಡ್ಡ ಪಾಪಕಾರ್ಯವಾಗಿದೆ. ಏಕೆಂದರೆ ದುರ್ನಡತೆ ಹೊಂದಿದವರಿಗೆ ಸ್ವರ್ಗಕ್ಕೆ ಸಂಬಂಧವೇ ಇರುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ತಂದೆ ತಾಯಿಯರು ತಮ್ಮ ಮಕ್ಕಳಿಗೆ ಕೆಟ್ಟ ನಡತೆಗಳಿಂದ ಬಿಡಿಸಲು ಎಷ್ಟೇ ಪ್ರಯತ್ನಗಳನ್ನು ನಡೆಸಲಿ, ಅವರ ಮಕ್ಕಳ ಸಂಘ ಸರಿ ಇಲ್ಲದವರೆಗೆ ಅದು ಸಾಧ್ಯವಾಗುವುದಿಲ್ಲ. ಒಂದಿಷ್ಟು ಮಟ್ಟಿಗೆ ಅವರ ತರಬೇತಿಯಿಂದ ಮಕ್ಕಳಲ್ಲಿ ಒಳ್ಳೆಯ ಭಾವನೆಗಳು ಬರಬಹುದು. ಆದರೆ ಒಳ್ಳೆಯ ತರಬೇತಿಯ ಜೊತೆಯಲ್ಲಿ ಒಳ್ಳೆಯ ಸಹವಾಸ ಇರದಿದ್ದರೆ, ಆ ತರಬೇತಿಯ ಪ್ರಭಾವ ಎಷ್ಟರಮಟ್ಟಿಗೆ ಕುಗ್ಗಿ ಹೋಗುತ್ತದೆ ಎಂದರೆ ತರಬೇತಿ ನೀಡುವುದು ನೀಡದಿರುವುದು ಸಮವಾಗಿಬಿಡುತ್ತದೆ. ಬಾಲ್ಯದಲ್ಲಿ ಕೆಟ್ಟ ಸಹವಾಸ ಎಂತಹ ಕೆಟ್ಟ ಅಭ್ಯಾಸಗಳನ್ನು ಬೆಳೆಸಿಬಿಡುತ್ತದೆ ಎಂದರೆ ಮುಂದೆ ಎಷ್ಟೇ ಪ್ರಯತ್ನ ಮಾಡಿದರೂ ಅದನ್ನು ಬಿಡಿಸುವುದು ಅಸಾಧ್ಯವಾಗುತ್ತದೆ. (ಅಲ್ ಅಝ್‌ಹಾರ್, ಸಂಪುಟ-1, ಪುಟ 160-161)

ಆದುದರಿಂದ ಮಾತೆಯರಾದ ನಮ್ಮ ಕರ್ತವ್ಯವೇನೆಂದರೆ, ನಾವು ನಮ್ಮ ನಡತೆಗಳ ಮಾದರಿಯ ಜೊತೆ ಜೊತೆಯಲ್ಲಿ ಮಕ್ಕಳ ಉಸ್ತುವರಿ ವಹಿಸಬೇಕು. ಅವರು ಕೆಟ್ಟ ಸಹವಾಸವ ಮಾಡುತ್ತರುವರೋ, ಅವರು ಕೆಟ್ಟ ಕಾರ್ಯಕ್ರಮಗಳನ್ನು ನೋಡುತ್ತಾರೆಯೇ ಇತ್ಯಾದಿ.

ಹಝ್ರತ್ ಖಲೀಫತುಲ್ ಖಾಮಿಸ್(ಅತಬಿಅ) ಹೇಳುತ್ತಾರೆ. ಹಾಗೆ ಅಹ್ಮದಿ ಮಕ್ಕಳ ಮಾತೆಯರು ತಮ್ಮ ಕರ್ತವ್ಯಗಳನ್ನು ಅರಿತುಕೊಳ್ಳುವವರಾದರೆ, ತಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವವರಾದರೆ, ಅವರ ನಡೆ ನುಡಿಯಲ್ಲಿ ವ್ಯತ್ಯಾಸ ಇರದಿದ್ದರೆ, ಅವರ ಎಲ್ಲಾ ಮಾತುಗಳು ಸತ್ಯ ಮತ್ತು ಕೇವಲ ಸತ್ಯದ ಮೇಲೆ ನಿರ್ಭೀತರಾದರೆ ಅಹ್ಮದಿಯಾ ಜಮಾಅತಿನ ಮುಂದಿನ ಪೀಳಿಗೆ ಇನ್‌ಶಾಲ್ಲಾಹ್, ಅಲ್ಲಾಹನೊಂದಿಗೆ ಸಂಬಂಧ ಬೆಳೆಸುವವರಾಗುವರು. ಆದುದರಿಂದ ಎಲ್ಲ ಸಮಯವು ತಮ್ಮ ಮಿದುಳುಗಳಲ್ಲಿ ತಮ್ಮ ಈ ಸ್ಥಾನ ಸ್ಥಿರ ಮಾಡಿಕೊಳ್ಳಬೇಕು ಮತ್ತು ತಮ್ಮ ಆರಾಧನೆಗಳನ್ನು ಹಾಗೂ ತಮ್ಮ ನಡತೆಯ ಮಾದರಿಯನ್ನು ಉತ್ತಮ ಮಟ್ಟದಲ್ಲಿ ತಲುಪಿಸಲು ಪ್ರಯತ್ನಶೀಲರಾಗಬೇಕು. ಪವಿತ್ರ ಖುರ್‌ಆನ್‌ನಲ್ಲಿ ಎಷ್ಟು ಆದೇಶಗಳಿವೆ. ಅದರ ಮೇಲೆ ನಡೆಯುವ ಪ್ರಯತ್ನ ಆಗಬೇಕು. ಎಲ್ಲ ಉತ್ತಮ ಗುಣಗಳ ಕಡೆ ಅಲ್ಲಾಹನು ಪ್ರೇರಣೆ ನೀಡುವಂಥದ್ದಾಗಿರಬೇಕು. ಅದನ್ನು ಸಾಧಿಸಲು ಪ್ರಯತ್ನ ಮಾಡಬೇಕು. ಯಾವಾಗಲೂ ಸತ್ಕರ್ಮ ಮಾಡುವ ಜೊತೆಯಲ್ಲಿ ಸತ್ಕರ್ಮಗಳ ಬಗ್ಗೆ ಉಪದೇಶ ಮಾಡುತ್ತಿರಬೇಕು. ಕೆಟ್ಟದ್ದನ್ನು ಬಿಡುವವರಾಗಬೇಕು ಮತ್ತು ಸಮಾಜದಲ್ಲಿರುವ ಕೆಡುಕುಗಳಿಂದ ತಡೆಯುವ ಪ್ರಯತ್ನ ಮಾಡಬೇಕು. ಅದನ್ನು ಹರಡದಂತೆ ನೋಡಿಕೊಳ್ಳಬೇಕು. ಪರಸ್ಪರ ಸದ್ವರ್ತನೆ ಬೆಳೆಸಿಕೊಳ್ಳಬೇಕು. ತಮ್ಮ ಕೋಪತಾಪಗಳನ್ನು ಮರೆಯಬೇಕು. ಸಾಮಾನ್ಯವಾಗಿ ಕಂಡುಬರುವ ಮಾತೇನೆಂದರೆ ಹೆಂಗಸರು ಬಹುಸಮಯದವರೆಗೆ ತಮ್ಮ ಮನಸ್ಸುಗಳಲ್ಲಿ ವೈಷಮ್ಯ ಹುದುಗಿಸಿಕೊಂಡಿರುತ್ತಾರೆ. ನಿಮ್ಮ ಮನಸ್ಸುಗಳಲ್ಲಿ ವೈಷಮ್ಯ ಬೆಳೆಸಿಕೊಂಡರೆ, ಅಂತಹ ಹೃದಯಗಳಲ್ಲಿ ಅಲ್ಲಾಹನು ಸೇರುವುದಿಲ್ಲ. ಅಂತಹ ಹೃದಯಗಳ ಆರಾಧನೆಗಳು ಅಲ್ಲಾಹನು ಬಯಸಿದ ಮಟ್ಟಕ್ಕೆ ಬರಲು ಸಾಧ್ಯವಾಗುವುದಿಲ್ಲ. (ಜಲ್ಸ ಸಾಲಾನ ಆಸ್ಟ್ರೇಲಿಯಾ 2006 ರ ಭಾಷಣ ಮಹಿಳೆಯರ ಕುರಿತು, ಅಲ್‌ಫಝ್ಲ್ International 12 ಜೂನ್ 2015).

ಆದುದರಿಂದ ನನ್ನ ಪ್ರೀತಿಯ ಸಹೋದರಿಯರೇ!. ನಾವೆಲ್ಲರೂ ತಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು, ಪೂರ್ಣಸಿದ್ಧತೆಯೊಂದಿಗೆ, ತಮ್ಮ ಪೂರ್ಣ ಶಕ್ತಿಯೊಂದಿಗೆ ಮತ್ತು ತಮ್ಮ ಎಲ್ಲಾ ಸಾಮರ್ಥ್ಯಗಳೊಂದಿಗೆ ದುಆ ಮಾಡುವ ಮೂಲಕ ತರಬೇತಿಯ ಕಾರ್ಯದಲ್ಲಿ ತೊಡಗಬೇಕಾಗಿದೆ.

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು(ರ) ಹೇಳುತ್ತಾರೆ. ಇಂದು ನೀವು ಮಾತೆಯರಾಗಿದ್ದೀರಿ ಎಂದರೆ, ಅಲ್ಲಾಹನು ಇಂದು ನಿಮಗೆ ತಮ್ಮ ಪರಿಸರವನ್ನು ಅಲ್ಲಾಹನ ಪ್ರೀತಿಯ ಬಣ್ಣದಲ್ಲಿ ಸೇರಿಸುವಂತಹ ಪ್ರಯತ್ನ ಕೈಗೊಳ್ಳುವ ಸಾಮರ್ಥ್ಯವು ನೀಡಿದ್ದಾನೆ. ನೀವು ಇನ್ನು ಮಾತೆಯರಾಗಲಿಲ್ಲ ಎಂದರೆ ಇಂದೇ ನಿವು ತಮ್ಮೊಳಗೆ ಪವಿತ್ರವಾದ ಬದಲಾವಣೆಗಳನ್ನು ಮಾಡಿಕೊಳ್ಳಿ. ನಾಳೆ ನೀವು ಮಾತೆಯರಾದ ಮೇಲೆ ಅದಕ್ಕಿಂತ ಮುಂಚೆಯೇ ಅಲ್ಲಾಹನೊಂದಿಗೆ ಪ್ರೀತಿಸುವ ವ್ಯಕ್ತಿಗಳಾಗುವಿರಿ.

ಆ ಸಣ್ಣ ಹುಡುಗಿಯರು ಮತ್ತು ಸಣ್ಣ ಹುಡುಗರು ನಿಮ್ಮ ಮಡಿಲುಗಳಲ್ಲಿ ಪೋಷಣೆ ಪಡೆಯುತ್ತಿದ್ದಾರೆ. ನಿಮ್ಮ ಕೈಗಳಲ್ಲಿ ಆಡುತ್ತಿದ್ದಾರೆ, ನಿಮ್ಮ ಹಾಲನ್ನುಂಡು ಯುವಕರಾಗುತ್ತಾರೆ ಅಥವಾ ನಿಮ್ಮ ಕೈಗಳಿಂದ ಹಾಲು ಕುಡಿದು ಯುವಕರಾಗುತ್ತಾರೆ. ಅದೇ ಕಾಲದಲ್ಲಿ, ಪ್ರಾರಂಭಿಕ ಕಾಲದಲ್ಲಿ ಅವರಿಗೆ ಅಲ್ಲಾಹನ ಪ್ರೀತಿಯ ಗೀತೆಗಳನ್ನು ಹಾಡಿ ತೋರಿಸಿರಿ. ಅಲ್ಲಾಹನ ಪ್ರೀತಿಗೆ ಸಂಬಂಧಿಸಿದ ಮತುಗಳನ್ನು ಆಡಿರಿ, ಹೀಗೆ ಬರುವ ಹಂತಗಳು ಸುಲಭಗೊಳ್ಳುವುದು. ನೀವು ಬದಲಾವಣೆ ಹೊಂದದೇ ನಿಮ್ಮ ಮಕ್ಕಳು ಬದಲಾಗಲು ಸಾಧ್ಯವಿಲ್ಲ. ಎಲ್ಲಿಯವರೆಗೆ ನಿಮ್ಮ ವ್ಯಕ್ತಿತ್ವ ಅಲ್ಲಾಹನ ಪ್ರಕಾಶದಿಂದ ತುಂಬಿರುವುದಿಲ್ಲ, ನಿಮ್ಮ ಸಂತಾನದ ಹೃದಯಗಳು ಅಲ್ಲಾಹನ ಪ್ರಕಾಶದಿಂದ ತುಂಬಿರಲು ಸಾಧ್ಯವಿಲ್ಲ. ನೋಡಿರಿ, ನೀವು ಒಂದು ಹೊಸ ಶತಮಾನದ ಅಂಚಿನಲ್ಲಿ ನಿಂತುಕೊಂಡಿರಿ, ಈ ಶತಮಾನದ ಸುಧಾರಕರು ನೀವು. ಒಂದು ಸಮುದಾಯದ ನಿಟ್ಟಿನಲ್ಲಿ ನಿಮ್ಮನ್ನು ಸುಧಾರಕರನ್ನಾಗಿ ಮಾಡಲಾಗಿದೆ. ನೀವು ಮುಂದಿನ ಭವಿಷ್ಯಕ್ಕಾಗಿ ಮಕ್ಕಳ ತರಬೇತಿಯ ಅವಶ್ಯಕತೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಇದೇ ಆ ವಿಧಾನವಾಗಿದೆ. ಆ ಮೂಲಕ ನೀವು ಮುಂದಿನ ದಿನಗಳಲ್ಲಿ ಮಕ್ಕಳಿಗೆ ಉತ್ತಮ ತರಬೇತಿ ಕೊಡಬಹುದು. ಅಲ್ಲಾಹನು ಆ ಸೌಭಾಗ್ಯ ದಯಪಾಲಿಸಲಿ. (ಭಾಷಣ ಜಲ್ಸ ಸಾಲಾನ ಯು.ಕೆ. ಮಹಿಳೆಯರ ಕುರಿತು 27 ಜುಲಾಯಿ 1991).

ಕೊನೆಯಲ್ಲಿ ತಮ್ಮ ಪ್ರೀತಿಯ ಇಮಾಮರಾದ ಹಝ್ರತ್ ಖಲಿಫತುಲ್ ಮಸೀಹ್ ಖಾಮಿಸ್(ಅಬಿಅ) ಅವರ ಒಂದು ಅಧ್ಯಾಪನೆಯನ್ನು ಮುಂದಿರಿಸಿ ತಮ್ಮ ಭಾಷಣವನ್ನು ಮುಗಿಸುತ್ತೇನೆ.

ಅವರು ಹೇಳುತ್ತಾರೆ. "ಆದುದರಿಂದ ಓ ಅಹ್ಮದಿ ಮಾತೆಯರೇ! ಓ ಸೌಭಾಗ್ಯಶಾಲಿ ಮಾತೆಯರೇ! ಹಝುರತ್ ಪೈಗಂಬರ್(ಸ) ರವರ ಆದೇಶದ ಮೇಲೆ ಲಬ್ಬೈಕ್ ಎಂದು ಹೇಳುತ್ತ ಈ ಕಾಲದ ಇಮಾಮರನ್ನು ಗುರುತಿಸಿದ್ದೀರಿ. ಅವರ ಅನುಪಾಲನೆಯ ಪ್ರತಿಜ್ಞೆಯನ್ನು ಮಾಡಿದಿರಿ, ಲೋಕದ ವಿರೋಧವನ್ನು ಕಟ್ಟಿಕೊಂಡಿರಿ. ಮತ್ತು ಎಲ್ಲಾ ಲೌಕಿಕ ಕಾರ್ಯಗಳ ಮೇಲೆ ಧರ್ಮಕ್ಕೆ ಆದ್ಯತೆ ಕೊಡುವ ಪ್ರತಿಜ್ಞೆಯನ್ನು ಮಾಡಿಸಿರಿ. ತಮ್ಮ ತಮ್ಮ ಆತ್ಮಾವಲೋಕನ ಮಾಡಿಕೊಂಡು ನೋಡಿರಿ. ನಾವು ನಮ್ಮ ಈ ಪ್ರತಿಜ್ಞೆಯಿಂದ ದೂರವಂತೂ ಸರಿಯುತ್ತಿಲ್ಲ, ನಮ್ಮ ಲೌಕಿಕ ಕರ್ಯಗಳ ಮೆಲೆ ಧರ್ಮ ಕಾರ್ಯಗಳನ್ನು ಆದ್ಯತೆ ನೀಡುವ ವಚನ ನಮ್ಮಷ್ಟಕ್ಕೆ ಸೀಮಿತವಾಗಿಯಂತೂ ಉಳಿಯಲಿಲ್ಲ, ನಾವು ಇದನ್ನು

ಮುಂದುವರೆಸುವವರಾಗಿದ್ದೇವೆಯೇ, ನಾವೇನು ತಮ್ಮ ಪ್ರತಿಜ್ಞೆಯನ್ನು ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡಿದ್ದೇವೆಯೇ? ನಮ್ಮ ಮಡಿಲಿನಲ್ಲಿ ಪೋಷಣೆ ಪಡೆಯುತ್ತಿರುವವರು ಅಲ್ಲಾಹನ ದಾಸರು ಮತ್ತು ಸಜ್ಜನರ ಗುಂಪಿನಲ್ಲಿ ಸೇರಲು ಅರ್ಹರಾಗಿದ್ದಾರೆಯೇ? ಅಲ್ಲಾಹನು ನಮಗೆ ಒಪ್ಪಿಸಿದ ಅಮಾನತ್, ಈ ಅಮಾನತ್ ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್(ಸ) ಅವರ ಉಮ್ಮತಿನಲ್ಲಿ ಸೇರಿಕೊಂಡು ಅಲ್ಲಾಹನ ಮುಂದೆ ಉಡುಗೊರೆಯ ರೂಪದಲ್ಲಿ ಪ್ರಸ್ತುತಪಡಿಸಲು ನೀಡಿದೆ. ಅದಕ್ಕೆ ತಕ್ಕುದಾದ ತರಬೇತಿ ನೀಡಿದ್ದೇವೆಯೇ? ನಾವು ಮತ್ತು ನಮ್ಮ ಮಕ್ಕಳು ಖೈರೆ ಉಮ್ಮತ್ ಬಿರುದು ಪಡೆಯಲು ಅರ್ಹರಾಗಿದ್ದೇವೆಯೇ? ಹೌದು ಎಂಬ ಉತ್ತರವಿದ್ದರೆ ಅದು ನಿಮಗೆ ಶುಭವಾಗಲಿ, ಇಲ್ಲ ಎಂದಾದರೆ ಇವೆಲ್ಲ ಪಡೆಯಲು ನಿಮಗೆ ತಮ್ಮ ಸುಧಾರಣೆ ಮಾಡಿಕೊಳ್ಳಬೇಕಾಗಿದೆ. ಅಗತ್ಯಬಿದ್ದಲ್ಲಿ ತಮ್ಮ ಪತಿಯನ್ನು ಧರ್ಮದೆಡೆ ಸೆಳೆಯಲು ಪ್ರಯತ್ನ ಮಾಡಬೇಕಾಗಿದೆ. ತಮ್ಮ ಮನೆಯ ಪರಿಸರವನ್ನು ಶುದ್ಧ ಮಾಡಿಕೊಳ್ಳಿ. ಅಲ್ಲಿ ಪತಿ, ಪತ್ನಿ ಒಂದು ಉತ್ತಮ ಮಾದರಿ ತೋರಿಸುವಂತಿರಬೇಕು. ಹೀಗೆ ಎಲ್ಲ ಅಹ್ಮದಿ ಮನೆಗಳು ಒಂದು ಸಜ್ಜನ ಹಾಗೂ ಪವಿತ್ರ ಸಮಾಜ ನಿರ್ಮಿಸುವಂತಿರಬೇಕು. ಅದರಿಂದ ಹುಟ್ಟುವ ಮಗು, ಬೆಳೆಯುತ್ತಿರುವ ಮಗು ಸಜ್ಜನರಲ್ಲಿ ಸೇರುವಂತಿರಬೇಕು. ಅಂದಹಾಗೆ ನಿಮ್ಮ ಗೌರವ ಸ್ಥಾನವನ್ನು ತಿಳಿದುಕೊಳ್ಳಿರಿ. ಯಾವ ಅಹ್ಮದಿ ಮಹಿಳೆಯು ಸಮಾಜದ ಎಲ್ಲಾ ಸಾಮಾನ್ಯ ಮಹಿಳೆಯರಂತೆ ಇರಬಾರದು. ನೀವು ಆ ಮಾತೆಯರಾಗಿದ್ದೀರಿ. ಅದರ ಕುರಿತು ಅಲ್ಲಾಹನ ಪ್ರವಾದಿ ಹೀಗೆ ಸುವಾರ್ತೆ ನೀಡಿರುವರು. ಮಾತೆಯರ ಪಾದದಡಿಯಲ್ಲಿ ಸ್ವರ್ಗವಿದೆ ಎಂದು. ಯವ ಮಾತೆ ತಮ್ಮ ಮಕ್ಕಳನ್ನು ಸ್ವರ್ಗ ಬಯಸುವುದಿಲ್ಲ. ಆದುದರಿಂದ ಒಂದು ಹೊಸ ಹುಮ್ಮಸ್ಸಿನೊಂದಿಗೆ, ದುಆ ಮಾಡುತ್ತಾ ತಮ್ಮ ಮಕ್ಕಳ ತರಬೇತಿಯ ಕಡೆ ಗಮನ ನೀಡಬೇಕು. ನೀವು ಸೌಭಾಗ್ಯಶಾಲಿಗಳಾಗಿದ್ದೀರಿ. ಅಲ್ಲಾಹನ ಪವಿತ್ರ ಪ್ರವಾದಿ ಮತ್ತು ಪವಿತ್ರ ಮಸೀಹರ ಪ್ರಾರ್ಥನೆಗಳು ನಿಮ್ಮೊಂದಿಗಿವೆ. ಓ ಅಲ್ಲಾಹ್ ನಮ್ಮನ್ನು ಸಹಕರಿಸು, ನಮ್ಮ ಪೀಳಿಗೆಗಳನ್ನು ಇಸ್ಲಾಮಿನ ಮೇಲೆ ಸ್ಥಿರವಾಗಿರಿಸು. ಅಲ್ಲಾಹನು ನಿಮ್ಮೆಲ್ಲರಿಗೂ ತಮ್ಮ ಮಕ್ಕಳಿಗೆ ಸರಿಯಾದ ತರಬೇತಿ ನಿಡುವವರನ್ನಾಗಿ ಮತ್ತು ಅವರ ಹಕ್ಕುಗಳನ್ನು ಪಾಲಿಸುವವರನ್ನಾಗಿ ಮಾಡುವಂತಾಗಲಿ, ಆಮೀನ್.

**(ಅಲ್‌ಫಝುಲ್ International 29 ಆಗಸ್ಟ್–4 ಸೆಪ್ಟೆಂಬರ್ 2003)**

**ವ ಆಖಿರು ದುವಾನ ಅನಿಲ್ ಹಮ್ದು ಲಿಲಾಹಿ ರಬ್ಬಿಲ್ ಆಲಮೀನ್.**

**************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವರ್ಷಗಳ ಕಾಲ ಮಾತ್ರ ಪ್ರವಾದಿತ್ವದ ಅನುಗ್ರಹಗಳನ್ನು ಖಲೀಫರ ರೂಪದಲ್ಲಿ ಸ್ಥಾಪಿತಗೊಳಿಸುವುದು ಅವಶ್ಯಕ ಎಂಬುದು ಆತನಿಗೆ ತಿಳಿದಿಲ್ಲ. ತದನಂತರ ಪ್ರಪಂಚವು ನಾಶ ಹೊಂದಿದರೆ ಹೊಂದಲಿ ಅದರ ಬಗ್ಗೆ ಕಾಳಜಿ ಇಲ್ಲ. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ–6, ಪುಟ–353)

ಮೇಲೆ ಹೇಳಿದಂತೆ, ಅಹ್ಮದಿಯಾ ಜಮಾಅತ್‌ನಲ್ಲಿ 115 ವರ್ಷಗಳ ಕಾಲದಿಂದ ಖಿಲಾಫತ್ ವ್ಯವಸ್ಥೆಯು ಸ್ಥಾಪಿತಗೊಂಡಿದೆ. ಈ ಖಿಲಾಫತ್ ಮತ್ತು ಈ ಜಮಾಅತ್‌ನೊಂದಿಗೆ ಸೇರಲು ಹಝ್ರತ್ ಪೈಗಂಬರ್(ಸ)ರವರು ಒತ್ತಾಯಿಸಿದ್ದಾರೆ ಮತ್ತು ಅದರಿಂದ ದೂರವಿರುವುದು ಅಜ್ಞಾನದ ಮರಣವಾಗಿದೆ. ಮುಸ್ಲಿಮರಿಗೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಒಂದೇ ಸಮುದಾಯದಲ್ಲಿ ವಾಸಿಸಲು ಸಲಹೆ ನೀಡಿದ ಹದೀಸ್‌ಗಳು ಕ್ಷಣಿಕ ಕಾಳಜಿಯನ್ನು ಹೊಂದಿವೆ. ಇಂದು ಜಗತ್ತಿನ ಪರದೆಯ ಮೇಲೆ ಜಮಾಅತ್ ಎಂದು ಕರೆಯಲು ಅರ್ಹವಾದ ಒಂದೇ ಒಂದು ಜಮಾಅತ್ ಅದು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಆಗಿದೆ. ಹಾಗಾಗಿ ಮುಸಲ್ಮಾನರು ಈ ಜಮಾಅತ್ ಗೆ ಸೇರಬೇಕು ಮತ್ತು ಜಮಾಅತ್ ನಿಂದ ಬೇರ್ಪಟ್ಟು, ಕಾವಲುಗಾರನಿಲ್ಲದ ಮತ್ತು ಸದಾ ಅಪಾಯದಲ್ಲಿರುವ ಕುರಿಯಂತೆ ಬದುಕಬಾರದು. ಆದ್ದರಿಂದ, ಹಝ್ರತ್ ಪೈಗಂಬರ್(ಸ) ಅವರು ಜಮಾಅತ್‌ಗೆ ಹೇಳಿರುವಂತಹ ಕೆಲವು ಹದೀಸ್‌ಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

● عَنِ ابْنِ عُمَرَ رَضِيَ اللهُ عَنْهُمَا قَالَ: سَمِعْتُ رَسُوْلَ اللهِ صَلَّى اللهُ عَلَيْهِ وَسَلَّمَ يَقُوْلُ: مَنْ خَلَعَ يَدًا مِنْ طَاعَةٍ لَقِيَ اللهَ يَوْمَ الْقِيَامَةِ وَلَا حُجَّةَ لَهُ ، وَمَنْ مَاتَ وَلَيْسَ فِيْ عُنُقِهِ بَيْعَةٌ مَاتَ مِيْتَةً جَاهِلِيَّةً ، وَفِيْ رِوَايَةٍ : مَنْ مَاتَ وَهُوَ مُفَارِقٌ لِلْجَمَاعَةِ فَإِنَّهُ يَمُوْتُ مِيْتَةً جَاهِلِيَّةً۔ (مسلم كتاب الْإِمَارَةِ بَابُ الْأَمْرِ بِلُزُوْمِ الْجَمَاعَةِ عِنْدَ ظُهُوْرِ الْفِتَنِ، بحوالہ حديقة الصالحين مصنفہ مکرم مولانا ملک سیف الرحمن صاحب مرحوم حدیث نمبر 631)

* ಹಝ್ರತ್ ಇಬ್ನ್ ಉಮರ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ)ರವರು ಹೇಳುವುದನ್ನು ನಾನು ಕೇಳಿದ್ದೇನೆ: "ಯಾರು ಅಲ್ಲಾಹನಿಗೆ ವಿಧೇಯರಾಗಿ ತನ್ನ ಕೈಯನ್ನು ಹಿಂತೆಗೆದುಕೊಳ್ಳುತ್ತಾರೋ ಅವರು ಅಲ್ಲಾಹನನ್ನು (ಖಿಯಾಮತ್ ದಿನದಂದು) ಎಂತಹ ಪರಿಸ್ಥಿತಿಯಲ್ಲಿ ಭೇಟಿಯಾಗುತ್ತಾರೆ ಅಂದರೆ ಅಂದು ಆತನ ಬಳಿ ಯಾವುದೇ ಸಾಕ್ಷಿಯೂ ಇರುವುದಿಲ್ಲ ಮತ್ತು ಯಾವುದೇ ನೆಪವೂ ಇರುವುದಿಲ್ಲ. ಮತ್ತು ಕಾಲಘಟ್ಟದ ಇಮಾಮ್‌ಗೆ ಬೈಅತ್ ಮಾಡಿರುವುದಿಲ್ಲದ ವ್ಯಕ್ತಿಯು ಅಂತಹ ಪರಿಸ್ಥಿತಿಯಲ್ಲಿ ಮರಣಹೊಂದಿದರೆ ಆತನ ಸಾವು ಅಜ್ಞಾನ ಮತ್ತು ದಾರಿತಪ್ಪಿದವರ ಸಾವಾಗಿರುತ್ತದೆ. ಮತ್ತೊಂದು ವರದಿಯ ಪ್ರಕಾರ ಯಾವ ವ್ಯಕ್ತಿಯೂ ಜಮಅತ್‌ನಿಂದ ಬೇರ್ಪಟ್ಟಿರುತ್ತಾನೊ ಎಂದಾಗಿದೆ.

ಕಾಲಘಟ್ಟದ ಇಮಾಮ್ ಅವರಿಗೆ ಬೈಅತ್ ಮಾಡುವುದು ಅಥವಾ ಜಮಾಅತ್‌ನಿಂದ ಬೇರ್ಪಟ್ಟಿರುವುದು ಎರಡೂ ವಿಷಯಗಳು ಒಂದೇ ಆಗಿದೆ.

● عَنِ ابْنِ عَبَّاسٍ ؓ عَنِ النَّبِيِّ صَلَّى اللهُ عَلَيْهِ وَسَلَّمَ قَالَ: مَنْ رَاٰى مِنْ اَمِيْرِهٖ شَيْئًا يَكْرَهُهُ فَلْيَصْبِرْ عَلَيْهِ فَاِنَّهُ مَنْ فَارَقَ الْجَمَاعَةَ شِبْرًا فَيَمُوْتُ مِيْتَةً جَاهِلِيَّةً۔ (بخاری كتاب الفتن باب قول النبي ستروْن بعدي امورًا، بحوالہ حديقة الصالحين حدیث نمبر 632)

* ಹಝ್ರತ್ ಇಬ್ನ್ ಅಬ್ಬಾಸ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ರವರು ಹೇಳಿದರು, "ಯಾರು ತನ್ನ ಸರದಾರ ಮತ್ತು ಅಮೀರ್‌ನಲ್ಲಿ ತನಗೆ ಇಷ್ಟವಿಲ್ಲದದ್ದನ್ನು ಕಂಡರೆ, ಅವನು ತಾಳ್ಮೆಯಿಂದ ವರ್ತಿಸಲಿ, ಏಕೆಂದರೆ ಜಮಾಅತ್‌ನಿಂದ ಒಂದು ಗೇಣಷ್ಟು ದೂರ ಸರಿದರೆ ಆತನು ಅಜ್ಞಾನದ ಸಾವನ್ನು ಪಡೆಯುತ್ತಾನೆ.

● عَنِ الْحَرْثِ الْاَشْعَرِيِّ رَضِيَ اللهُ عَنْهُ اَنَّ النَّبِيَّ صَلَّى اللهُ عَلَيْهِ وَسَلَّمَ قَالَ اِنَّ اللهَ عَزَّ وَجَلَّ اَمَرَ يَحْيَى بْنَ زَكَرِيَّا عَلَيْهِمَا السَّلَامُ بِخَمْسِ كَلِمَاتٍ ........ وَاَنَا اٰمُرُكُمْ بِخَمْسٍ اَللهُ اَمَرَنِيْ بِهِنَّ ، بِالْجَمَاعَةِ وَالسَّمْعِ وَالطَّاعَةِ وَالْهِجْرَةِ وَالْجِهَادِ فِيْ سَبِيْلِ اللهِ فَاِنَّهُ مَنْ خَرَجَ مِنَ الْجَمَاعَةِ قِيْدَ شِبْرٍ فَقَدْ خَلَعَ رِبْقَةَ الْاِسْلَامِ مِنْ عُنُقِهٖ اِلَّا اَنْ يَّرْجِعَ وَمَا دَعَا بِدَعْوَى الْجَاهِلِيَّةِ فَهُوَ مِنْ جِثَاءِ جَهَنَّمَ قَالُوْا يَا رَسُوْلَ اللهِ وَاِنْ صَامَ وَاِنْ صَلّٰى قَالَ وَاِنْ صَامَ وَاِنْ صَلّٰى وَزَعَمَ اَنَّهُ مُسْلِمٌ فَادْعُوا الْمُسْلِمِيْنَ بِاَسْمَائِهِمْ بِمَا سَمَّاهُمُ اللهُ عَزَّ وَجَلَّ الْمُسْلِمِيْنَ الْمُؤْمِنِيْنَ عِبَادَ اللهِ عَزَّ وَجَلَّ۔ (مسند احمد جلد ۵ صفحہ ۱۳۰ صفحہ ۲۰۲ صفحہ ۳۴۴ بحوالہ حديقة الصالحين حدیث نمبر 158)

* ಹಝ್ರತ್ ಹರ್ಸ್ ಅಲ್‌ಅಶ್‌ಅರಿ(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರು ಹೇಳಿದರು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಯಹ್ಯಾ ಬಿನ್ ಝಕರೀಯಾ ಅಲೈಹಿಸ್ಸಲಾಮ್ ಅವರನ್ನು ಐದು ವಿಷಯಗಳನ್ನು ಆಜ್ಞಾಪಿಸಿದನು........ ಮತ್ತು ನಾನು ಸಹ ನಿಮಗೆ ಅಲ್ಲಾಹನು ನನಗೆ ಆಜ್ಞಾಪಿಸಿದ ಆ ಐದು ವಿಷಯಗಳನ್ನು ಆಜ್ಞಾಪಿಸುತ್ತೇನೆ. (1) ಜಮಾಅತ್‌ನೊಂದಿಗೆ ಜೊತೆಯಾಗಿರಿ (2) ಕಾಲಘಟ್ಟದ ಇಮಾಮ್‌ರ ಮಾತುಗಳನ್ನು ಆಲಿಸಿ (3) ಮತ್ತು ಆತನಿಗೆ ವಿಧೇಯರಾಗಿರಿ (4) ಧರ್ಮದ ಸಲುವಾಗಿ ನೀವು ನಿಮ್ಮ ದೇಶವನ್ನು ತೊರೆಯಬೇಕಾದರೆ ನೀವು ನಿಮ್ಮ ದೇಶವನ್ನು ತ್ಯಜಿಸಿರಿ (5) ಮತ್ತು ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಿರಿ. ಹಾಗಾಗಿ ಸ್ವಲ್ಪವಾದರೂ ಜಮಾಅತ್ ನಿಂದ ಬೇರ್ಪಟ್ಟ ವ್ಯಕ್ತಿಯು ಇಸ್ಲಾಂ ಧರ್ಮದಿಂದ ಕತ್ತು ಕೊಯ್ದುಕೊಂಡಂತೆ. ಅವರು ಮತ್ತೆ ಜಮಾಅತ್‌ನ ವ್ಯವಸ್ಥೆಗೆ ಸೇರದ ಹೊರತು. ಮತ್ತು ಜಾಹಿಲಿಯತ್‌ನ ವಿಷಯಗಳಿಗೆ ಕರೆ ನೀಡುವವನು ನರಕದ ಇಂಧನವಾಗುತ್ತಾನೆ. ಸಹಾಬರವರು ಹೇಳಿದರು. ಯಾ ರಸೂಲಲ್ಲಾಹ್! ಅಂಥವರು ನಮಾಝ್ ನಿರ್ವಹಿಸುವವರು ಮತ್ತು ಉಪವಾಸಗಳನ್ನು ಅನುಷ್ಠಿಸುವವರಾಗಿದ್ದರೂ. ಹಝ್ರತ್ ಪೈಗಂಬರ್(ಸ)ರವರು ನುಡಿದರು ಹೌದು! ಆತನು ನಮಾಝ್ ನಿರ್ವಸಿದರೂ ಮತ್ತು ಉಪವಾಸ ಅನುಷ್ಠಿಸಿದರೂ ಮತ್ತು ತನ್ನನ್ನು ತಾನು ಮುಸ್ಲಿಮನೂ ಎಂದು ಪರಿಗಣಿಸಿದರೂ ಆದರೆ ಓ ಅಲ್ಲಾಹನ ದಾಸರೇ!! (ಈ ಪರಿಸ್ಥಿತಿಯ ಹೊರತಾಗಿಯೂ) ತಮ್ಮನ್ನು ತಾವು ಮುಸ್ಲಿಮರು ಎಂದು ಕರೆದುಕೊಳ್ಳುವವರನ್ನೂ ನೀವು ಮುಸ್ಲಿಮರು ಎಂದು ಕರೆಯಬೇಕು ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ಈ ಉಮ್ಮತ್ತನ್ನು ಮುಸ್ಲಿಮರು ಮತ್ತು ವಿಶ್ವಾಸಿಗಳು ಎಂದು ಹೆಸರಿಸಿದ್ದಾನೆ.

ಆದ್ದರಿಂದ, ಮೇಲಿನ ಹದೀಸ್‌ಗಳು ನಮ್ಮ ಆತ್ಮೀಯ ಯಜಮಾನರಾದ ಸಯ್ಯಿದುನಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಇಮಾಮ್‌ರೊಂದಿಗೆ ಸೇರಿರಲು ಮತ್ತು ಜಮಾಅತ್‌ನೊಂದಿಗೆ ಇರಲು ಎಷ್ಟು ಒತ್ತು ನೀಡಿದ್ದಾರೆ ಎಂಬುದನ್ನು ತೋರಿಸುತ್ತದೆ. ನಿಮ್ಮ ಮೇಲೆ ಅನ್ಯಾಯ, ನಿಂದನೆ ನಡೆದರೂ ಸಹ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 18-25 May 2023, Issue No. 20-21

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–18ರ ಉಳಿದ ಭಾಗ ಮುಂದುವರಿಸಲಾಗಿದೆ)*

**29 ಸೆಪ್ಟೆಂಬರ್ ಗುರುವಾರ**

ಹುಝೂರ್ ಅನ್ವರ್(ಅಬಿಇ) ಮುಂಜಾನೆ 5 ಗಂಟೆ 50 ನಿಮಿಷಕ್ಕೆ ಮಸ್ಜಿದ್ ಫತಹ್ ಅಝೀಮ್‌ಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟು ತಮ್ಮ ವಸತಿಗೆ ತೆರಳಿದರು. ನಂತರ ವಿವಿಧ ದೇಶಗಳಿಂದ § Az ÀFax ಮತ್ತು ಇ–ಮೇಲ್‌ಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದ ನಂತರ ಇತರ ಕಚೇರಿ ಕೆಲಸದಲ್ಲಿ ನಿರತರಾದರು.

1 ಗಂಟೆ 30 ನಿಮಿಷಕ್ಕೆ ಹುಝೂರ್ ಅನ್ವರ್(ಅಬಿಇ) ಮಸ್ಜಿದ್ ಫತಹ ಅಝೀಮ್‌ಗೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿಯತ್ತ ತೆರಳಿದರು.

ಹುಝೂರ್ ಅನ್ವರ್(ಅಬಿಇ) ನಮಾಝ್ ನಿರ್ವಹಿಸಲು ಮಸ್ಜಿದ್ ಫತಹಕ್ಕೆ ಆಗಮಿಸುವಾಗ ಮತ್ತು ನಿರ್ಗಮಿಸುವಾಗ. ರಸ್ತೆಯ ಇಕ್ಕೆಲ್ಲಗಳಲ್ಲಿ ಜಮಾಅತ್ ಬಾಂಧವರು ನಿಂತು ತಮ್ಮ ಇಮಾಮರಿಗೆ ಶುಭವನ್ನು ಕೋರುವ ಮತ್ತು ತನ್ನ ಪ್ರೀತಿಯ ಭಾವನೆಗಳನ್ನು ಘೋಷಣೆಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಎಲ್ಲ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್ "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಬಾಲಕಿಯರು ತಮ್ಮ ಪ್ರಾರ್ಥನಾ ಕವನಗಳ ಮೂಲಕ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

ಮಸೀದಿಯ ಹೊರ ವಲಯದಲ್ಲಿ ವಿವಿಧ ಜಾಗಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಾರ್ಕಿಗಳು ಹಾಕಿದ್ದರು. ಮೂರು ಮಾರ್ಕಿಗಳಲ್ಲಿ ಜಮಾಅತ್‌ನ ಪುರುಷ ಮತ್ತು ಮಹಿಳೆಯರಿಗೆ ನಮಾಝ್ ನಿರ್ವಹಿಸುವ ಏರ್ಪಾಡು ಮಾಡಲಾಗಿತ್ತು. ಎರಡು ದೊಡ್ಡ ಮಾರ್ಕಿಗಳಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿತು. ರಿಜಿಸ್ಟ್ರೇಷನ್ ಮತ್ತು ಕೋವಿಡ್ ತಪಾಸಣೆಗೋಸ್ಕರ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಮಾರ್ಕಿಗಳು ಹಾಕಲಾಗಿತ್ತು. ಅದೇ ರೀತಿ ಅತಿಥಿಗಳಿಗೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಎರಡು ಸಾವಿರ ಮೈಲಿಗಿಂತಲೂ ದೂರದಿಂದ ಪುರುಷರು, ಮಹಿಳೆಯರು ಇಲ್ಲಿ ಬಂದು ಸೇರಿದ್ದರು. ಅವರು ದಿನವಿಡಿ ಇದೇ ಮಾರ್ಕಿಗಳಲ್ಲಿ ಕಳೆಯುತ್ತಾರೆ. ತಮ್ಮ ಇಮಾಮರ ದರ್ಶನ ಪಡೆಯುವ ಯಾವ ಕ್ಷಣವನ್ನು ಬಿಡಲು ಇಚ್ಛಿಸುವುದಿಲ್ಲ. ಇದು ತುಂಬಾ ಶುಭಕರ. ಕಾರುಣ್ಯಗಳ ಮತ್ತು ಅಲ್ಲಾಹನ ಅನುಗ್ರಹವನ್ನು ಪಡೆಯುವ ದಿನಗಳಾಗಿವೆ. ಇಲ್ಲಿ ಬಂದವರೆಲ್ಲರೂ ಈ ಅನುಗ್ರಹಗಳನ್ನು ಪಡೆಯುತ್ತಿದ್ದಾರೆ.

**ಕುಟುಂಬದ ಭೇಟಿಗಳು**

ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅಬಿಇ) ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳು ಪ್ರಾರಂಭವಾದವು.

ಸಂಜೆ ಈ ಅಧಿವೇಶನದಲ್ಲಿ ಕುಟುಂಬಗಳ ಭೇಟಿಯಲ್ಲದೇ ಪುರುಷ ಹಾಗೂ ಸ್ತ್ರೀಯರ ಬೇರೆ ಬೇರೆ ಗುಂಪುಗಳಲ್ಲಿ ಬಂದವರೊಡನೆಯು ಭೇಟಿ ಮಾಡುವ ಕಾರ್ಯಕ್ರಮದಲ್ಲಿ ಆರು ಕುಟುಂಬಗಳ 27 ಜನರು ಹುಝೂರ್ ಅನ್ವರ್(ಅಬಿಇ)ರ ಜೊತೆ ಭೇಟಿ ಮಾಡುವ ಭಾಗ್ಯ ಪಡೆದರು. ಇವರೆಲ್ಲರೂ ಹುಝೂರ್ ಅನ್ವರ್(ಅಬಿಇ)ರ ಜೊತೆ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಅನ್ವರ್(ಅಬಿಇ) ಪ್ರೀತಿಪೂರ್ವಕವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪೆನ್ ನೀಡಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ನೀಡಿದರು.

**ಗುಂಪಾಧಾರಿತ ಭೇಟಿಗಳು**

ಈ ಕುಟುಂಬಗಳ ಭೇಟಿಯ ನಂತರ ವಿವಿಧ ಗುಂಪುಗಳಲ್ಲಿ ಬಂದವರೊಡನೆ ಭೇಟಿಯ ಕಾರ್ಯಕ್ರಮ ಪ್ರಾರಂಭವಾಯಿತು. ಒಟ್ಟು 28 ಮಹಿಳೆಯರು ಭೇಟಿ ಮಾಡುವ ಭಾಗ್ಯ ಪಡೆದರು. ಇವೆಲ್ಲ ಮಹಿಳೆಯರು ಹುಝೂರರ ಜೊತೆ ಮೊದಲ ಬಾರಿಗೆ ಭೇಟಿ ಮಾಡುವ ಭಾಗ್ಯ ಪಡೆಯುವವರಾಗಿದ್ದರು. ಇನ್ನೂ ವಿವಿಧ 10 ಜಮಾಅತುಗಳಿಂದ ಬಂದವರಾಗಿದ್ದರು. ಪಾಕಿಸ್ತಾನದಿಂದ ಬಂದ ಮಹಿಳೆಯರು ಸಹ ಭೇಟಿಯ ಭಾಗ್ಯ ಪಡೆದರು.

ಅನಂತರ ಪುರುಷ ಬಾಂಧವರು ಸಹ ನಾಲ್ಕು ಗುಂಪುಗಳಾಗಿ ಭೇಟಿಯ ಭಾಗ್ಯ ಪಡೆದರು. ಅವರ ಒಟ್ಟು ಸಂಖ್ಯೆ 43 ಆಗಿತ್ತು. ಇವರುಗಳೆಲ್ಲ Zion ಅಲ್ಲದೇ ಇತರ ವಿವಿಧ ಜಮಾಅತಿಗಳಿಂದ ಹಾಗೂ ಕ್ಷೇತ್ರಗಳಿಂದ ಸುದೀರ್ಘ ಪ್ರಯಾಣಮಾಡಿ ಬಂದವರಾಗಿದ್ದರು.

Kentucky ನಿಂದ ಬಂದವರು 452 ಮೈಲು ದೂರ ಕ್ರಮಿಸಿ ಬಂದಿದ್ದರು. binghamton ನಿಂದ ಬಂದವರು 750 ಮೈಲು, ಸಯಾಟಲ್‌ನಿಂದ 2014 ಮೈಲು ಮತ್ತು ಲಾಸ್ ಏಂಜಲೀಸ್‌ನಿಂದ 2046 ಮೈಲಿನಷ್ಟು ದೂರ ಪ್ರಯಾಣಿಸಿ ತನ್ನ ಪ್ರೀತಿಯ ಇಮಾಮರ ಭೇಟಿಗಾಗಿ ಇಲ್ಲಿ ತಲುಪಿದ್ದರು. ಅದಲ್ಲದೇ ಪಾಕಿಸ್ತಾನದಿಂದ ಬಂದ ಕೆಲ ಬಾಂಧವರು ಸಹ ಭೇಟಿಯ ಭಾಗ್ಯ ಪಡೆದರು ಇವರೆಲ್ಲರೂ ಹುಝೂರರ ಜೊತೆ ಮೊದಲ ಬಾರಿಗೆ ಭೇಟಿ ನೀಡುವ ಭಾಗ್ಯ ಪಡೆಯುವವರಾಗಿದ್ದರು. ಇವರೆಲ್ಲರೂ ತಮ್ಮ ಇಮಾಮರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

**ಭೇಟಿ ಮಾಡಿದವರ ಅನಿಸಿಕೆಗಳು**

zion ಜಮಾಅತಿನ ಉಸ್ಮಾನ್ M Bowe ಸಾಹಿಬ್ ಹೇಳುತ್ತಾರೆ. ಎರಡು ದಿನ ಮೊದಲು ನಾವು ಮಸೀದಿಯ ಹೊರಗೆ ನಿಂತುಕೊಂಡಿದ್ದೆವು. ಹುಝೂರ್ ಅನ್ವರ್ ಹೋಗುವಾಗ ನನ್ನತ್ತ ಮತ್ತು ನನ್ನ ಪುತ್ರನತ್ತ ಕೇವಲ ಒಂದು ಕ್ಷಣ ಮಾತ್ರಕ್ಕೆ ದೃಷ್ಟಿಹಾಯಿಸಿದ್ದರು. ಇಂದು ನಾವು ಕುಟುಂಬ ಸಮೇತ ಭೇಟಿ ಮಾಡಿದೆವು. ಹುಝೂರ್ ಅನ್ವರ್ ಹೇಳಿದರು. ನಾನು ನಿಮಗೆ ಎರಡು ದಿನಗಳ ಹಿಂದೆ ಮಸೀದಿಯ ಹೊರಗೆ ನೋಡಿದ್ದೆ. ನಾನು ಅಚ್ಚರಿಯೊಂದಿಗೆ ಈ ಸಣ್ಣದಾದ ವಿಷಯ ಹೇಗೆ ಹುಝೂರ್ ಅನ್ವರ್(ಅಬಿಇ)ರ ನೆನಪಿನಲ್ಲಿ ಉಳಿದುಬಿಟ್ಟಿದೆ. ಮಹಿಳೆಯೊಬ್ಬಳು ಖಾಲಿದ್ ಬದರ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಹುಝೂರ್!! ನಾನು ನಿಮ್ಮನ್ನು ಭೇಟಿ ಮಾಡಲು ಇಚ್ಛಿಸುತ್ತೇನೆ. ನನಗೆ ಇಲ್ಲಿಯವರೆಗೆ ತಮ್ಮನ್ನು ಭೇಟಿ ಮಾಡಲಾಗಲಿಲ್ಲ. ತಾವು ಇಲ್ಲಿ Zionಗೆ ಬರಬೇಕೆಂದು ನಾನು ಬಯಸುತ್ತೇನೆ. ಎಂದು ತುಂಬಾ ಸಮಯಗಳ ಹಿಂದೆ ನಾನು ಹುಝೂರರಿಗೆ ಪತ್ರ ಬರೆದಿದ್ದೆ. ಇಂದು ನನಗೆ ನಂಬಲೇ ಆಗುತ್ತಿಲ್ಲ. ಹುಝೂರ್ Zionಗೆ ಬಂದಿದ್ದಾರೆ, ನಾನು ಎಷ್ಟು ಭಾಗ್ಯಶಾಲಿಯಾಗಿದ್ದೇನೆ. ಹುಝೂರ್ ಅನ್ವರ್(ಅಬಿಇ)ಅವರೊಂದಿಗೆ ಭೇಟಿಯಾಯಿತು.

ಕೋಲಂಬಸ್‌ನಿಂದ ಬಂದಿದ್ದ ಮಹಿಳೆಯೊಬ್ಬಳು ಹೇಳಿದರು. ಇಂದಿನ ಭೇಟಿಯ ಕ್ಷಣವು ನನಗೆ ಒಂದು ವಿಶೇಷ ರೀತಿಯ ದೈವಿಕ ಕ್ಷಣವಾಗಿತ್ತು. ನಮಗೆ ನಿನ್ನೆಯವರೆಗೆ ತಿಳಿದಿರಲಿಲ್ಲ ಭೇಟಿಯಾಗಬಹುದೆಂದು. ನಮ್ಮ ಈ ಭೇಟಿ ಅಂತೂ ಒಂದು ಪವಾಡ ಸದೃಶ್ಯ ಭೇಟಿಯಾಗಿದೆ ಎಂದು ಹೇಳಿ ಅವರು ಅಳತೊಡಗಿದರು.

ಪಾಕಿಸ್ತಾನದಿಂದ ಬಂದಿದ್ದ ರಯ್ಯಾನ್ ಸಾಹಿಬ್ ಅವರು ಹೇಳಿದರು. ನಾನು ಈ ಅನುಭವವನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ನಾನು ಹುಝೂರ್ ಅನ್ವರ್(ಅಬಿಇ) ರವರನ್ನು ನೋಡುತ್ತಲೇ ಈ ಲೋಕದಲ್ಲಿರಲಿಲ್ಲ.

*(ಪುಟ ಸಂಖೆ 09ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800–103–2131**
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.